ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ತೆರಿಗೆ ಮತ್ತು ಅಳತೆ ಮಾಪಕಗಳು

(ಎಂ.ಫಿಲ್., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ವಿನಯ. ಎಂ.ಕೆ.

ನೋಂದಣಿ ಸಂಖ್ಯೆ: ೧೬೦೧೧೯೦೫೦೦೨೬

ಮಾರ್ಗದರ್ಶಕರು

ಡಾ. ಕಲವೀರ ಮನ್ವಾಚಾರ

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೬-೨೦೧೭

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ತೆರಿಗೆ ಮತ್ತು ಅಳತೆ ಮಾಪಕಗಳು

(ಎಂ.ಫಿಲ್, ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ವಿನಯ.ಎಂ.ಕೆ.

ನೋಂದಣಿ ಸಂಖ್ಯೆ: ೧೬೦೧೯೦೩೦೦೨೬

ಮಾರ್ಗದರ್ಶಕರು

ಡಾ. ಕಲವೀರ ಮನ್ವಾಚಾರ

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೬-೧೭

ಸಂಶೋಧಕರ ಪ್ರಮಾಣ ಪತ್ರ

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ತೆರಿಗೆ ಮತ್ತು ಅಳತೆಮಾಪಕಗಳು ಎಂಬ ಸಂಪ್ರಬಂಧವನ್ನು **ಡಾ. ಕಲವೀರ ಮನ್ವಾಚಾರ** ಪ್ರಾಧ್ಯಾಪಕರು, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವಿನಯ.ಎ.ಕೆ

ಸಂಶೋಧನ ವಿದ್ಯಾರ್ಥಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 30/08/17

ಮಾರ್ಗದರ್ಶಕರ ದೃಢೀಕರಣ ಪತ್ರ

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ತೆರಿಗೆ ಮತ್ತು ಅಳತೆಮಾಪಕಗಳು ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ವಿನಯ ಎಂ.ಕೆ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಡಾ. ಕಲವೀರ ಮನ್ವಾಚಾರ

ಮಾರ್ಗದರ್ಶಕರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

ಸ್ಥಳ: ವಿದ್ಯಾರಣ್ಯ

ದಿನಾಂಕ:

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

೧.೧ ಅಧ್ಯಯನದ ಉದ್ದೇಶ

೧.೨ ಅಧ್ಯಯನದ ವ್ಯಾಪ್ತಿ

೧.೩ ಅಧ್ಯಯನದ ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ

ಪ್ರಸ್ತಾವನೆ :-

ನಮ್ಮ ನಾಡಿನ, ಪೂರ್ವಿಕರ ಇತಿಹಾಸ ರಚನೆಯು ಮಹತ್ತರವಾದ ಒಂದು ಮೈಲಿಗಲ್ಲು. ಇದಕ್ಕೆ ಸಂಬಂದಿಸಿದಂತೆ ನಮಗೆ ಲಭ್ಯವಿರುವ ಮಾಹಿತಿಗಳು ಪೂರಕವಾದ ಆಕಾರಗಳಿಂದಲೆ ದೊರಕಿರವೆ. ಇಲ್ಲದೆ ಹೊದರೆ ಪ್ರಾಚೀನ ಕನ್ನಡ ಸಾಹಿತ್ಯದ ಉಗಮ, ಹುಟ್ಟು, ಬೆಳವಣಿಗೆಯನ್ನು ಅರಿಯಲು ಆಗುತ್ತಿರಲಿಲ್ಲ. ನಮ್ಮ ನಾಡಿನ ಇತಿಹಾಸದ ರಚನೆಯಾಗಬೇಕಾದರೆ ಮುಖ್ಯವಾಗಿ ಬೇಕಾಗಿರುವುದು ಇತಿಹಾಸ, ಸಾಹಿತ್ಯ, ಮತ್ತು ಪುರಾತತ್ವ ಶೋಧನೆ ಇವುಗಳಲ್ಲಿ ಮೊದಲನೆಯದು, ಆ ನಾಡಿನ ಇತಿಹಾಸ ಹೇಳುತ್ತಾ ಹೋದರೆ ಎರಡನೆಯದು ಸಾಹಿತ್ಯ ಬೆಳವಣಿಗೆಗೆ ಮಾಹಿತಿಯನ್ನು ಒದಗಿಸುತ್ತದೆ. ಇವೆರಡನ್ನು ದಾಖಲಿಸುವುದು ಮತ್ತು ಪ್ರಸ್ತುತ ಪಡಿಸುವಂತ ಕೆಲಸ ಪುರಾತತ್ವದ ಕೆಲಸ. ಇದು ಸಂಶೋಧನೆಗಳ ಮೂಲಕ ಸಾಹಿತ್ಯಿಕ ಆಧಾರಗಳನ್ನು ಹೊರತೆಗೆಯಲು ಸಹಾಯಕವಾದುದ್ದು. ಈ ಪುರಾತತ್ವಶಾಸ್ತ್ರದ ಒಂದು ಪ್ರಮುಖ ಅಂಗವೇ ಶಾಸನಶಾಸ್ತ್ರ. ಶಾಸನಗಳ ಅಧ್ಯಯನ ಹಿಂದಿನಿಂದ, ಇಂದಿನವರೆಗೂ ಪ್ರಮುಖ ಸಾಂಸ್ಕೃತಿಕವಾದ ಅಧ್ಯಯನ ಎಂದು ಗುರುತಿಸಿಕೊಂಡಿದೆ.

ಪ್ರಾಚೀನ ಯುಗಕ್ಕೆ ಸಂಬಂಧಿಸಿದಂತೆ ಹಾಗೂ ಇತಿಹಾಸ ರಚನೆಗೆ ಆಕಾರವಾಗಿದೆಯಲ್ಲದೆ ಸಂಸ್ಕೃತಿಯ ಅರಿವಿನ ದೃಷ್ಟಿಯಿಂದ ಬಹಳ ಗಣ್ಯವಾಗಿದೆ. ಬರಹದ ರೂಪದಲ್ಲಿರುವ ಇತರ ಆಧಾರಗಳಿಗಿಂಥ ಶಾಸನಗಳು ಹೆಚ್ಚು ವಿಶ್ವಾಸಯೋಗ್ಯವೂ ಆಗಿವೆ. ನಮ್ಮ ನಾಡಿನ ಇತಿಹಾಸವನ್ನು ಅವುಗಳನ್ನು ಅಧ್ಯಯನ ಮಾಡುವುದರ ಮೂಖೇನ ಅರ್ಥಮಾಡಿಕೊಂಡು ನಾಡಿನ ಜನತೆಗೆ ತಿಳಿಸುವಂತಹ ಅಧ್ಯಯನಗಳನ್ನು ನೆಡೆಸಬೇಕಾಗಿದೆ. ಹಾಗೆಯೇ ಇತಿಹಾಸಕಾರರು ತಮ್ಮ ಅಧ್ಯಯನದಲ್ಲಿ ಶಾಸನಗಳನ್ನು ಅವುಗಳಲ್ಲಿನ ರಾಜಕೀಯ ಮಹತ್ವವನ್ನು ಮಾತ್ರ ಗುರುತಿಸಲು ಬಳಸಿಕೊಂಡಿದ್ದರಿಂದ ಇತಿಹಾಸವೆಂದರೆ, ಕೇವಲ ರಾಜಮಹಾರಾಜರ ಬಗೆಗಿನ ಆಡಳಿತದ ವಿಚಾರವನ್ನು ತಿಳಿಯಲು ಸಾದ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಇತಿಹಾಸವನ್ನು ನೋಡುವ ದೃಷ್ಠಿಯು ಹೊಸ ಹೊಸ ತಂತ್ರಗಳ ಮೂಲಕ ಅಧ್ಯಯನದ ವಿಧಾನವು ಬದಲಾವಣೆಯ ಸ್ವರೂಪವನ್ನು ಪಡೆದಿದೆ.

ಕೇವಲ ರಾಜ ಮಹಾರಾಜರ ಜೀವನ ಚರಿತ್ರೆಯನ್ನಷ್ಟೇ ಅಲ್ಲದೆ ಸಾಮಾನ್ಯ ಜನರ ದಿನನಿತ್ಯದ ಬದುಕನ್ನು, ಅವರ ಸಂಪ್ರದಾಯ, ರೀತಿ ನೀತಿಗಳನ್ನು, ಅವರ ಬದುಕಿನ ಹೇಳುಬೀಳುಗಳನ್ನು ಬಹುಶಿಸ್ತಿಯ ನೆಲೆಯಲ್ಲಿ ಹೆಚ್ಚಿನ ಅಧ್ಯಯನ ಮಾಡಬೇಗುತ್ತದೆ. ಇತ್ತೀಚಿನ ದಿಗಳಲ್ಲಿ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗಿದ್ದ ಇತಹಾಸವನ್ನು ರಾಜಕೀಯೇತರ ಸಂಸ್ಕೃತಿ, ಸಮಾಜ, ಆರ್ಥಿಕತೆ ಹಾಗೂ ದುಡಿಯುವ ವರ್ಗದವರ ವಿಷಯುಗಳಿಗೂ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದರಿಂದ ನಮಗೆ ಪರಿಚಯ ಇಲ್ಲದಿದ್ದ ಎಷ್ಟೋ ವಿಚಾರಗಳು ತಿಳಿಯುತ್ತಿವೆ. ನಾಡಿನ ಪ್ರಾಚೀನ ಜೀವನ ಶೈಲಿಯು ನಮಗೆ

ಅಮೂಲ್ಯವಾದ ನಿಧಿಯಾಗಿದೆ. ಪ್ರಾಚೀನ ಯುಗಕ್ಕೆ ಸಂಬಂಧಿಸಿದಂತೆ ಹಾಗೂ ಇತಿಹಾಸ ರಚನೆಗೆ ಅಮೂಲ್ಯವಾದ ದಾಖಲೆಗಳು ಶಾಸನಗಳ ಮೂಲಕ ದೊರಕಿರುವುದು ಮತ್ತು ಇಂದಿನವರೆಗೂ ದೊರೆಯುತ್ತಿರುವುದು ಗಮನಾರ್ಹ. ಹೀಗೆ ದೊರಕುವಂತಹ ದಾಖಲೆಗಳು ಅಥವಾ ಶಾಸನಗಳು ಗೊತ್ತಿಲ್ಲದ ಎಷ್ಟೋ ವಿಚಾರಗಳನ್ನು ನಮಗೆ ದೊರಕಿಸುತ್ತಾ ಹೊಗುತ್ತವೆ. ಉದಾಹರಣೆಗೆ ಪಂಪನ ಜೀವನದ ಬಗ್ಗೆ ತಿಳಿಸುವಲ್ಲಿ ಸಾಹಿತ್ಯಿಕ ಆಧಾರಗಳು ಮುಖ್ಯವೆನಿಸಿದರು, ನಂತರ ದೊರೆತಂತಹ ಜಿನವಲ್ಲಭ ಶಾಸನ ಪಂಪನ ಜೀವಿತದ ವಿಷಯವು ದೊರಕಿಸಿರುವುದು ಶಾಸನದ ಆಧಾರದ ಮೇಲೆಯೇ. ಇಲ್ಲದೆ ಹೋಗಿದ್ದರೆ ಸಾಹಿತ್ಯ ಕವಿಗಳು ರಚಿಸಿದಂತಹ ದಾಖಲೆಯನ್ನು ನಿಜವೆಂದು ಒಪ್ಪಿಕೊಳ್ಳಬೇಕಿತ್ತು. ಇದರಿಂದ ತಿಳಿಯುತ್ತದೆ ಶಾಸನಗಳು ಇತಿಹಾಸದ ದಾಖಲೆಗೆ ಮುಖ್ಯವೆಂದು.

ಕರ್ನಾಟಕದ ಚರಿತ್ರೆ ಎಂಬುದು ಕ್ರಿ ಪೂರ್ವದಿಂದಲು ಪ್ರಸಿದ್ಧಿ ಪಡೆದಿದೆ. ಇವುಗಳಲ್ಲಿ ಸಾಹಿತ್ಯ, ಪುರಾಣ, ಸಂಸ್ಕೃತಿ ಮುಂತಾದ ವಿಷಯಗಳು ಎಷ್ಟೋ ನಡೆದಿವೆ ಮತ್ತು ಶಾಸನಗಳಲ್ಲಿ ಇರುವಂತಹ ಪ್ರಾಚೀನ ಜನಸಾಮಾನ್ಯರ ಆಹಾರ ಪದ್ಧತಿ, ಆದಾಯ ಪದ್ಧತಿ, ತೆರಿಗೆ, ಅಳತೆಮಾನ, ಭೂದಾನ, ವಸ್ತುವಿನಿಮಯ ಮುಂತಾದ ವಿಚಾರಗಳು ಇತಿಹಾಸದಲ್ಲಿ ದಾಖಲಾಗಿವೆಯಾದರು ಅವುಗಳನ್ನು ಪ್ರಮುಖವಾಗಿ ಎತ್ತಿತೋರಿಸುವಂತಹ ಸಂಶೋಧನೆಗಳು ನಡೆಯಬೇಕಿದೆ. ಹಾಗೂ ಅವುಗಳ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಸುವ ಮುಖೇನ ಅಧ್ಯಯನ ಮಾಡಬೇಕಿದೆ. ಅಂತೇಯೆ ಚಿತ್ರದುರ್ಗದ ಚರಿತ್ರೆಯನ್ನು ನಾವು ನೋಡುವುದಾದರೆ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವಂತಹ ಸುಮಾರು ೪೫೩ ಕ್ಕೂ ಹೆಚ್ಚು ಶಾಸನಗಳು ಕಂಡುಬರುತ್ತವೆ. ಅದರಲ್ಲಿ ನಮ್ಮ ಅಧ್ಯಯನದ ದೃಷ್ಟಿಯಿಂದ ಒಟ್ಟು ೪೧ ಶಾಸನಗಳನ್ನು ತೆರಿಗೆ ಉಲ್ಲೇಖ ಹಾಗೂ ಅಳತೆಮಾಪನ ಇರುವ ಶಾಸನಗಳನ್ನು ಆಯ್ದುಕೊಳ್ಳಲಾಗಿದೆ. ಅವುಗಳ ಅಧ್ಯಯನ ಮಾಡುವ ಮುಖಾಂತರ ಪ್ರಬಂಧವನ್ನು ರಚಿಸಲಾಗಿದೆ.

೧.೧ ಅಧ್ಯಯನದ ಉದ್ದೇಶ

ಚಿತ್ರದುರ್ಗ ಜಿಲ್ಲೆ ಕರ್ನಾಟಕದಲ್ಲಿ ಮಾತ್ರವಲ್ಲದೆ ದಕ್ಷಿಣ ಭಾರತೀಯ ಇತಿಹಾಸ ಮತು ಪುರಾತತ್ವ ಅಧ್ಯಯನದಲ್ಲಿ ವಿಶೇಷ ಮಹತ್ವವನ್ನು ವಹಿಸಿದೆ. ೧೯೪೭ ರಲ್ಲಿ ಈ ಜಿಲ್ಲೆಯ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಗಳಲ್ಲಿ ಡಾ. ಮಾರ್ಟಿಮರ್ ವೀಲರ್ ನೆಡೆಸಿದ ಉತ್ಖನನ, ಭಾರತದಲ್ಲಿ ಪುರಾತತ್ವಜ್ಞರನ್ನು ಆಕರ್ಷಿಸಿತು. ಈ ಉತ್ಖನನದಲ್ಲಿ ದೊರೆಕಿದ ರೋಮನ್ ನಾಣ್ಯಗಳು, ರೋಮನ್ ಮಡಿಕೆಯ ಚೂರುಗಳು ಹಾಗೂ ಶಾತವಾಹನರ ನಾಣ್ಯಗಳು, ದಕ್ಷಿಣ ಭಾರತದ ಪ್ರಾಚೀನ ಸಂಸ್ಕೃತಿಯ ವಿವಿಧ ಮುಖಗಳು ಹಾಗೂ ಅವುಗಳ ಕಾಲನಿರ್ಣಯಕ್ಕೆ ಭದ್ರ ಬುನಾದಿಯನ್ನು ಹಾಕಿದವು. ಅಷ್ಟೇ ಅಲ್ಲದೆ ಬ್ರಹ್ಮಗಿರಿಯಲ್ಲಿ ಒಂದು ಅಶೋಕನ ಶಾಸನವೂ ದೊರಕಿದ್ದು, ಇದು ಮೌರ್ಯ ಸಂಸ್ಕೃತಿಯ ಒಂದು ಭಾಗವೂ ಆಗಿದ್ದಿತು. ಆನಂತರದ ಕಾಲದಲ್ಲಿ ಇದು ಕರ್ನಾಟಕದ ಪ್ರಮುಖ ರಾಜಮನೆತನಗಳ ಆಳುವ ತಾಣವೂ ಆಗಿದ್ದು, ಇದರ ಕುರುವಾಗಿ ನೂರಾರು ಶಾಸನಗಳು, ವೀರಗಲ್ಲುಗಳು, ನಾಣ್ಯಗಳು, ವಾಸ್ತುಶಿಲ್ಪ

ಕೃತಿಗಳು ದೊರೆಕಿದ್ದು ಈ ಜಿಲ್ಲೆಯ ಮೇಲ್ಮೆಗೆ ಸಾಕ್ಷಿಯಾಗಿವೆ. ಈ ಜಿಲ್ಲೆಯ ಪ್ರಸಿದ್ಧ ಪುರಾತತ್ವಜ್ಞರೆಂದರೆ ಅ.ಸುದರ ಅವರು ಉತ್ತಮ ಪ್ರಬಂಧವನ್ನು ಮಂಡಿಸಿ ಚಿತ್ರದುರ್ಗ ಜಿಲ್ಲೆಯ ಪುರಾತತ್ವ ಸಂಶೋಧನೆಯ ಮುಂದಿನ ಮಾರ್ಗ-ಗುರಿ ಏನು ಎಂಬುದನ್ನು ವಿವರಿಸಿದ್ದಾರೆ. ನಮ್ಮ ಗಮನವನ್ನು ಸೆಳೆಯುವಂತಹ ಇನ್ನೊಂದು ಪ್ರಬಂಧವೆಂದರೆ ಡಾ. ಶಿವತಾರಕ್ ಬರೆದ ಈ ಜಿಲ್ಲೆಯ ಪ್ರಾಗಿತಿಹಾಸ. ಇದೊಂದು ಉತ್ತಮ ಪ್ರಬಂಧವಾಗಿದ್ದು, ಈ ವಿಷಯದಲ್ಲಿ ಸಂಶೋಧಕರಿಗೆ ಮಾರ್ಗದರ್ಶಿಯಾಗಿದೆ. ಇದೇ ಗುಂಪಿಗೆ ಸೇರಬಹುದಾದ ಇನ್ನೊಂದು ಉತ್ತಮ ಪ್ರಬಂಧವೆಂದರೆ ಪ್ರೋ. ಲಕ್ಷ್ಮಣ ತೆಲಗಾವಿಯವರು ಬರೆದಿರುವ ಪ್ರಾಕ್ಚಾರಿತ್ರ್ಯ ಕಲೆ. ಚಿತ್ರದುರ್ಗ ವೆಂದರೆ ಸಾಕು ನಮ್ಮ ನೆನಪಿಗೆ ಬರುವುದು ಪಾಳೆಯಗಾರರು. ಈ ಪಾಳೆಯಗಾರರನ್ನು ಕುರಿತಾದ ಕೆಲವು ತಪ್ಪುಕಲ್ಪನೆಗಳನ್ನು ದೂರ ಮಾಡಿ ಡಾ. ಬಿ. ರಾಜಶೇಖರಪ್ಪನವರು, ಕರ್ನಾಟಕ ಇತಿಹಾಸಕ್ಕೆ ಒಂದು ಉತ್ತಮ ಟಿಪ್ಪಣಿಯನ್ನು ಒದಗಿಸಿದ್ದಾರೆ. ಒಟ್ಟಿನಲ್ಲಿ ಈ ಎಲ್ಲಾ ಲೇಖನಗಳನ್ನು ಗಮನಿಸಿದರೆ, ಚಿತ್ರದುರ್ಗ ಜಿಲ್ಲೆಯ ರಾಜಕೀಯ, ಸಾಂಸ್ಕೃತಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಬಹುತೇಕ ಪರಿಚಿತವಾಗುತ್ತವೆ.

ಕರ್ನಾಟಕದ ಚರಿತ್ರೆಯಲ್ಲಿ ಪ್ರಸಿದ್ಧಿ ಪಡೆದಿರುವಂತಹ ಹಲವಾರು ಸಾಮ್ರಾಜ್ಯಗಳು ಅಥವಾ ಅರಸು ಮನೆತನಗಳು, ಸಂಸ್ಥಾನಗಳು, ಪಾಳೆಗಾರರು, ಚಿತ್ರದುರ್ಗ ನಾಡನ್ನು ಆಳಿ ತಮ್ಮ ಸಾಂಸ್ಕೃತಿಕ ಅಂಶಗಳನ್ನು ಅವರ ನಮಗೆ ಬಿಟ್ಟು ಹೋಗಿದ್ದಾರೆ. ಇಂತಹ ಅಮೂಲ್ಯವಾದ ಸಾಂಸ್ಕೃತಿಕ ಸಂಪತ್ತನ್ನು ಅವರು ಹಾಕಿಸಿದ ಶಾಸನಗಳಿಂದ ತಿಳಿಯಬೇಕಾದದ್ದು ನಮ್ಮ ಕರ್ತವ್ಯ. ಆದರೆ ನಾವು ಅವುಗಳನ್ನು ನಿರ್ಲಕ್ಷಿಸಿದ್ದೇವೆ. ನಮ್ಮ ಕೆಲಸ ಶಾಸನಗಳನ್ನು ಸಂರಕ್ಷಿಸುವ ಹಾಗೂ ಅವುಗಳನ್ನು ಮುಂದಿನ ಪೀಳಿಗೆಗೆ ತಿಳಿಸುವಂತಹ ಕೆಲಸ ಮಾಡಬೇಕಾಗಿದೆ. ಇಲ್ಲದೆ ಹೋದರೆ ಮುಂದಿನ ದಿನಗಳಲ್ಲಿ ಇತಿಹಾಸವೆಂಬುದು ಕೇವಲ ಕಾಲ್ಪನಿಕವಾದದ್ದು ಎಂದು ಮುಂದಿನ ಪೀಳಿಗೆಯವರು ತಿಳಿಯುವುದರಲ್ಲಿ ಸಂಶಯವಿಲ್ಲ. ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್ ನಂತಹ ತಂತ್ರಜ್ಞಾನಗಳು ಕ್ಷಣಮಾತ್ರದಲ್ಲಿ ಹಲವಾರು ವಿಷಯಗಳನ್ನು ಸಂಸ್ಕರಿಸಲು ಸಾದ್ಯವಾದರು ಸಹ ತಂತ್ರಜ್ಞಾನವಿಲ್ಲದಿದ್ದ ಕಾಲದಲ್ಲಿ ನಮ್ಮ ಪೂರ್ವಜರ ಸಾಧನೆಯು ನಮಗೆ ಮುಖ್ಯವೆನಿಸುತ್ತವೆ.

ಈ ಅಧ್ಯಯನದ ಉದ್ದೇಶವೆಂದರೆ ಚಿತ್ರದುರ್ಗದ ಪ್ರದೇಶದಲ್ಲಿ ಇರುವಂತಹ ಶಾಸನಗಳಲ್ಲಿ ಪ್ರಾಚೀನ ಕಾಲದ ರಾಜರ ಆಡಳಿತ ವ್ಯವಸ್ಥೆಯಲ್ಲಿ ಅವರ ಆರ್ಥಿಕ ಪರಿಸ್ಥಿತಿಯು ಯಾವರೀತಿ ಇತ್ತು ಮತ್ತು ಅವರ ರಾಜ್ಯಾದ ಆದಾಯದ ಮೂಲ ಯಾವುದಾಗಿತ್ತು ಎಂಬುದನ್ನು ತಿಳಿಸುವಂತಹ ಉದ್ದೇಶವಾಗಿದೆ. ಪ್ರಾಚೀನ ಕಾಲದ ವಿವಿಧ ರಾಜಮನೆತನಗಳು ಸಾರ್ವಜನಿಕರ ಮೇಲೆ ವಿದಿಸುತಿದ್ದಂತಹ 'ಸುಂಕ'ದ ಬಗ್ಗೆ ತಿಳಿಸುವಂತಹ ನಿಟ್ಟಿನಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಜೊತೆಗೆ ಶಾಸನಗಳಲ್ಲಿ ಉಲ್ಲೇಖವಿರುವಂತಹ ವಿವಿದ ರೀತಿಯ ತೆರಿಗೆ ಬಗ್ಗೆ ಮತ್ತು ಹಿಂದಿನ ರಾಜರು ಅನುಸರಿಸುತ್ತಿದ್ದ ಅಳತೆಯ ಮಾಪನಗಳು ಮತ್ತು ತೂಕಗಳ ಪರಿಮಾಣ ಇವುಗಳನ್ನು ಕುರಿತಾದ ಅಧ್ಯಯನ ಈ

ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಚಿತ್ರದುರ್ಗದ ಶಾಸನಗಳಲ್ಲಿ ತೆರಿಗೆ ಮತ್ತು ಅಳತೆಮಾಪಕಗಳು ಎಂಬ ಕಿರು ಪ್ರಬಂದವನ್ನು ರಚಿಸಲಾಗಿದೆ.

೧.೨ ಅಧ್ಯಯನದ ವ್ಯಾಪ್ತಿ.

ಈ ಅಧ್ಯಯನದ ವ್ಯಾಪ್ತಿಯು ಪ್ರಾಚೀನ ಕಾಲದಲ್ಲಿ ಚಿತ್ರದುರ್ಗವನ್ನು ಆಳ್ವಿಕೆ ಮಾಡಿದಂತಹ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಚಿತ್ರದುರ್ಗದ ಪ್ರದೇಶವನ್ನು ಪ್ರಬಲವಾಗಿ ಆಳ್ವಿಕೆಯನ್ನು, ಮಾಡಿದಂತಹ ಪಾಳೇಗಾರರ ಆಡಳಿತದ ಅವಧಿಯವರೆಗೆ ಈ ಅಧ್ಯಯನದ ವ್ಯಾಪ್ತಿಯನ್ನು ಒಳಪಡಿಸಲಾಗಿದೆ. ಈ ಅಧ್ಯಯನವು ಮೌರ್ಯರ ಕಾಲದಿಂದ ಹೇಗೆ ಹಂತ ಹಂತವಾಗಿ ಬೆಳವಣಿಗೆಯನ್ನು ಹೊಂದುತ್ತಾ, ಸುತ್ತಮೂತ್ತಲ ಪ್ರದೇಶದಲ್ಲಿ ಈ ಎಲ್ಲಾ ರಾಜಮನೆತನಗಳು ಆಡಳಿತ ನೆಡೆಸಿದ ರೀತಿ, ಅವರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಆಯ್ಕೆಮಾಡಿಕೊಂಡ ರಾಜಮನೆತನಗಳ ವ್ಯಾಪ್ತಿಯನ್ನು ಈ ಅಧ್ಯಯನವು ಒಳಗೊಂಡಿದೆ.

೧.೩ ಅಧ್ಯಯನದ ಸ್ವರೂಪ

ಅಧ್ಯಯನದ ಸ್ವರೂಪವನ್ನು ಈ ಮುಂದಿನ ನಂತೆ ನೋಡಬಹುದು. ಒಂದನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಅಧ್ಯಯನದ ವ್ಯಾಪ್ತಿ, ಮತ್ತು ಸ್ವರೂಪ, ಹಾಗೂ ಇದುವರೆಗಿನ ಅಧ್ಯನದ ಸಮಿಕ್ಷೆಯನ್ನು ಒಳಗೊಡಿದೆ.

ಎರಡನೆಯ ಅಧ್ಯಾಯವು ಚಿತ್ರದುರ್ಗವನ್ನು ಆಳ್ವಿಕೆ ಮಾಡಿದ ರಾಜಮನೆತನಗಳು, ಅವರ ಪರಿಚಯ ಮತ್ತು ಆರ್ಥಿಕ ಸ್ಥಿತಿಗತಿ, ತೆರಿಗೆ ಪದ್ಧತಿ, ನಾಣ್ಯಪದ್ಧತಿಯ ಬಗ್ಗೆ ಶಾಸನಗಳೊಂದಿಗೆ ತಿಳಿಸಲಾಗುತ್ತದೆ. ಇಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಚಿತ್ರದುರ್ಗದ ಪಾಳೇಗಾರರು, ಈ ಎಲ್ಲಾ ರಾಜಮನೆತನಗಳ ಮೂಲ ಪರಂಪರೆ ಹಾಗೂ ರಾಜರ ವಿವರವನ್ನು ನೀಡಲಾಗುತ್ತದೆ.

ಮೂರನೆಯ ಅಧ್ಯಾಯದಲ್ಲಿ ತೆರಿಗೆ ಪದ್ಧತಿಯ ಮೂಲ, ತೆರಿಗೆ ಪದ್ಧತಿಯ ಪರಿಚಯ, ಮತ್ತು ವಿವಿಧ ರೀತಿಯ ತೆರಿಗೆಗಳು, ಹಾಗೂ ಚಿತ್ರದುರ್ಗ ಶಾಸನಗಳಲ್ಲಿಯ ತೆರಿಗೆ ಪದ್ಧತಿ ಬಗ್ಗೆ ತಿಳಿಸಲಾಗುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ಅಳತೆಮಾಪಕ, ಪ್ರಾಚೀನರು ಅನುಸರಿಸುತ್ತಿದ್ದಂತಹ ತೂಕದ ಚಿತ್ರದುರ್ಗದ ಭಾಗದ ಶಾಸನಗಳಲ್ಲಿ ಸಿಗುವಂತಹ ಅಳತೆ ಮಾಪನದ ಬಗ್ಗೆ ತಿಳಿಸಲಾಗುತ್ತದೆ.

ಐದನೆಯ ಅಧ್ಯಾಯವು ಸಮಾರೋಪ ಎಂದಿದ್ದು ಅದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಅನುಬಂಧದಲ್ಲಿ ಶಾಸನಗಳ ಛಾಯಾಚಿತ್ರ, ಕ್ಷೇತ್ರದ ನಕಾಶೆ, ಪರಾಮರ್ಶನ ಗ್ರಂಥಗಳನ್ನು ನೀಡಲಾಗುತ್ತದೆ.

ಅಧ್ಯಾಯ ೨

ಚಿತ್ರದುರ್ಗವನ್ನು ಆಳ್ವಿಕೆಮಾಡಿದ ರಾಜಮನೆತನಗಳು ಹಾಗೂ ತೆರಿಗೆ ಪದ್ಧತಿ

೨.೧ ಮೌರ್ಯರು

೨.೨ ಶಾತವಾಹನರು

೨.೩ ಕದಂಬರು

೨.೪ ಬಾದಾಮಿ ಚಳುಕ್ಯರು

೨.೫ ರಾಷ್ಟ್ರಕೂಟರು

೨.೬ ಕಲ್ಯಾಣದ ಚಾಲುಕ್ಯರು

೨.೭ ಹೊಯ್ಸಳರು

೨.೮ ವಿಜಯನಗರದ ಅರಸರು

೨.೯ ಚಿತ್ರದುರ್ಗದ ಪಾಳೆಗಾರರು

ಅಧ್ಯಾಯ ೨

ಚಿತ್ರದುರ್ಗವನ್ನು ಆಳ್ವಿಕೆಮಾಡಿದ ಕರ್ನಾಟಕದ ರಾಜಮನೆತನಗಳು ಹಾಗೂ ತೆರಿಗೆ ಪದ್ಧತಿ

ಚಿತ್ರದುರ್ಗದ ಐತಿಹಾಸಿಕ ಮಹತ್ವ :

ಭೌಗೋಳಿಕವಾಗಿ ಕರ್ನಾಟಕದ ಹೃದಯ ಭಾಗದಂತಿರುವ ಜಿಲ್ಲಾಕೇಂದ್ರ ಚಿತ್ರದುರ್ಗ. ಇದು ಚಿತ್ರದುರ್ಗ ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಮೊಳಕಾಲ್ಮೂರು ಈ ಆರು ತಾಲ್ಲೂಕುಗಳನ್ನು ಒಳಗೊಂಡ ನೂತನ ಪ್ರದೇಶ ವ್ಯಾಪ್ತಿಯನ್ನು ಹೊಂದಿ ಅಲ್ಪಸ್ವಲ್ಪ ಗುಡ್ಡಗಾಡು ಮತ್ತು ಬಹುಪಾಲು ಬಯಲು ಸೀಮೆಯಿಂದ ಕೂಡಿ ವೈವಿಧ್ಯಮಯವಾದ ಕೃಷಿ, ವಾಣಿಜ್ಯ, ಔದ್ಯೋಗಿಕ ಮತ್ತು ಶೈಕ್ಷಣಿಕ ಸಾಧನೆಯ ರಂಗವಾಗಿ ಮುನ್ನೆಡೆಯುತ್ತಿರುವ ಜಿಲ್ಲೆಯಗಿದೆ. ಹಾಗೆಯೇ ಇತಿಹಾಸ ಧರ್ಮ ಸಾಹಿತ್ಯ, ಜಾನಪದ, ಸಂಸ್ಕೃತಿ, ಹಾಗೂ ಪರಂಪರೆಯಿಂದ ಸಮೃದ್ದವಾಗಿದ್ದು ರಾಜ್ಯದಲ್ಲೆ ಮಹತ್ವವನ್ನು ಪಡೆದಿರುವಂತಹ ಜಿಲ್ಲೆಯಾಗಿದೆ.

ಈಗಾಗಲೆ ವಿದಿತವಾಗಿರುವಂತೆ ಇತಿಹಾಸದ ಬೇರೆ ಬೇರೆಯ ಕಾಲಗಳಲ್ಲಿ ಇದಕ್ಕೆ ಸೂಳ್ಗಲ್ಲು, ಚೂಳುಂಗಲ್ಲು, ಚಿಮ್ಮತ್ತನಕಲ್ಲು, ಚಿತ್ರಕಲ್‌ದುರ್ಗ, ಚಿನ್ಮೂಲಾದ್ರಿ, ಚಿನ್ಮಯಗಿರಿ, ಚಿತ್ರದುರ್ಗ, ಚಟಲ್‌ಡ್ರುಗ್ ಫರಕಾಬಾದ್ ಮುಂತಾದ ಬಗೆ ಬಗೆಯ ಹೆಸರುಗಳಿರುವುದು ಕಂಡುಬರುತ್ತದೆ.

ಸೂಳ್ಗಲ್ಲು ;

ಚಿತ್ರದುರ್ಗಕ್ಕೆ ಸೂಳ್ಗಲ್ಲು ಪಟ್ಟಣ ಎಂದೂ ಈ ಸಾಮಂತ ರಾಜ್ಯಕ್ಕೆ ಸೂಳ್ಗಲ್ಲು ನಾಡು, ಸೂಳ್ಗಲ್ಲು ಇಪ್ಪತ್ತು ರಾಜ್ಯ ಎಂದೂ ಕ್ರಿ ಶ ೧೦ ಮತ್ತು ೧೧ನೇ ಶತಮಾನಗಳ ಶಾಸನಗಳಲ್ಲಿ ಉಕ್ತವಾಗಿದೆ. ಸೂಳ್ಗಲ್ಲು ತೀರ್ಥ ಎಂಬ ಒಂದು ಪುಣ್ಯ ತೀರ್ಥವು ಇತ್ತು.

ಚಂದ್ರವಳ್ಳಿ :

ಚಂದ್ರನಾಕೃತಿಯುಳ್ಳ ಕಣಿವೆಯಲ್ಲಿ ಈ ನಗರವಿದ್ದುದರಿಂದ ಚಂದ್ರವಳ್ಳಿ ಎಂಬ ಹೆಸರುಂಟಾಗಿರಬಹುದು. ಇನ್ನೊಂದು ಊಹೆಯು ಉಂಟಾಗುತ್ತದೆ. ಇಲ್ಲಿ ದೊರೆತಿರುವ ನಾಣ್ಯಗಳಲ್ಲಿ ಚುಟುಕುಲಾಂದಸ ಅಂದರೆ ನಾಣ್ಯ ಎಂಬ ಹೆಸರಿದೆ. ಜೈಮಿನಿಭಾರತದಲ್ಲಿ ಉಕ್ತವಾದ ಚಂದ್ರಹಾಸನ ಕಾಲಿನ ಬೆರಳು ಕತ್ತರಿಸಿದ ನಂತರ ಬಾಲಕನನ್ನು ರಕ್ಷಿಸಿ ಸಾಕಿದ ರಾಜನ ಹೆಸರು ಕುಳಿಂದ; ರಾಜಧಾನಿ ಚಂದನವತಿ ಇಲ್ಲಿಂದ ಕುಂತಳ ನಗರ ನೂರು ಮೈಲಿ ಅಂತರದಲ್ಲಿದೆ. ಆದ್ದರಿಂದ ಇದು ಕುಳಿಂದ ಈ ಬಯಲಲ್ಲಿ ಅಗೆದು ಶೋಧನೆ ಮಾಡಿರುವರು. ಇಲ್ಲಿ ಅರಮನೆಗಳಂತಿದ್ದ ಗೃಹಗಳ ಇಟ್ಟಿಗೆ ಗೋಡೆಗಳು, ಕಾಡು ಹೆಂಚುಗಳು, ಮಡಕೆಗಳು, ಸ್ತ್ರೀಯರ ಆಭರಣ, ದಂತದ ಬಾಚಣಿಗೆ, ಮಣಿ ಮುಂತಾದವು ಈ ಪಾಳಿನಲ್ಲಿ ದೊರೆತಿವೆ. ಕ್ರಿ ಪೂ. ೧೮ರಲ್ಲಿ ಆಳುತಿದ್ದ ಹ್ಯಾನ್ ವುತಿ, ಚೀನಾ ಚಕ್ರವರ್ತಿಯ ನಾಣ್ಯ,

ರೋಮಿನ ಆಗಸ್ಟ ಸೀಸರ್, ಟೈಬೀರಿಯಸ್ಸುರುಗಳ ನಾಣ್ಯ, ಶಾತವಾಹನರ ಸೀಸದ ನಾಣ್ಯಗಳೂ ಪುರಾಣ ಎಂಬ ಬೆಳ್ಳಿಯ ನಾಣ್ಯಗಳು ದೊರೆತಿವೆ. ಇವುಗಳಿಂದ ಅಶೋಕನ ಕಾಲದಿಂದಲೇ ರಾಜಧಾನಿಯಂತಹ ನಗರವಿತ್ತೆಂದೂ, ಆಗಲೇ ಚೀನಾ ಮತ್ತು ರೋಮ್ ದೇಶಗಳೊಡನೆ ವ್ಯಾಪಾರ ನೆಡೆಯುತ್ತಿದ್ದಿರಬಹುದೆಂದು ಹೇಳಬಹುದು.

ಬೆಮ್ಮತ್ತನೂರು;

ಅನಂತರದ ಶಾಸನಗಳಲ್ಲಿ ಬೆಮ್ಮತ್ತನೂರು ಪಟ್ಟಣ, ಬೆಮ್ಮತ್ತನೂರು ಮಹಾನಗರ ಎಂದು ಹೆಸರಿದೆ ಹಾಗೂ ಒಂದು ಸ್ಥಳೀಯ ಐತಿಹ್ಯವು ಇದೆ. ನೆರೆಯ ಗುಡ್ಡಗಳ ತುದಿಯಲ್ಲಿ ಬೆಮ್ಮಂತ ಎಂಬ ರಾಕ್ಷಸನು ವಾಸವಾಗಿದ್ದು ಜನಕಂಟಕವಾಗಿದ್ದನು ಅವನ ಹೆಸರಿನಲ್ಲಿ ಈ ಊರು ನಿರ್ಮಾಣವಾಯಿತಂತೆ. ಈಗಲೂ ಈ ಊರಿನ ದೇವತೆಗಳ ಉತ್ಸವಕಾಲದಲ್ಲಿ ರಾಕ್ಷಸನ ಮುಖವಾಡವಿಟ್ಟುಕೊಂಡು ಕುಣಿಯುವ ಪದ್ಧತಿ ಇದೆ.

ಪೆರುಮಾಳೆಪುರ ;

ಹೊಯ್ಸಳ ಮಹಾಪ್ರಧಾನ ಪೆರುಮಾಳೆ ದೇವದಂಣಾಯಕನು ಪೆರುಮಾಳೆಪುರವನ್ನು ಮಾಡಿದನು, ಅದರ ಒಂದು ಕೆರೆಯು ಬ್ರಹ್ಮಪುರಿ ಯಾಯಿತು. ಬಹುಶಃ ಈ ಹೊಸ ಪೆರುಮಾಳೆಪುರವು ಈಗ ಕಾಲೇಜು ಕಟ್ಟಡ ನಿರ್ಮಿತವಾಗಿರುವ ಸ್ಥಳದಲ್ಲಿತ್ತೆಂದು ಊಹಿಸಬಹುದು. ಈಗ ಈ ಗುಡ್ಡಕ್ಕೆ ಬುದ್ಧಿವಂತರ ಮರಡಿ ಎನ್ನುವರು.

ಮಲ್ಲರಾಯನದುರ್ಗ;

ವಿಜಯನಗರದ ಸಂಗಮವಂಶದ ಬುಕ್ಕರಾಯ, ಮಲ್ಲರಾಯ, ವಿಜಯರಾಯ ಮೊದಲಾದವರು ಈ ಊರಿನಲ್ಲಿ ರಾಜಪ್ರತಿನಿಧಿಗಳಾಗಿ ಆಳಿದರು, ಆಗಲೂ ಬೆಮ್ಮತ್ತನೂರು ಮಹಾನಗರವೆಂಬ ಹೆಸರಿನಿಂದಲೇ ಕರೆಯಲ್ಪಡುತ್ತಿತ್ತು. ಆದರೆ ಶಕ ೧೩೩೪ನೇ ಖರಸಂವತ್ಸರದಲ್ಲಿ ಚಿತ್ರದುರ್ಗದಲ್ಲಿದ್ದ ವೀರ ಮಲ್ಲಣ್ಣ ಒಡೆಯನು ಮಲ್ಲರಾಯನದುರ್ಗ ಎಂಬ ಒಂದುಕೋಟೆಯನ್ನು ನಿರ್ಮಿಸಿದನಂತೆ. ಆದರೆ ಈ ಹೆಸರು ಬಹಳ ಕಾಲ ನಿಲ್ಲಲಿಲ್ಲ.

ಚಿಂತನಕಲ್ಲು :

ವಿಜಯನಗರದ ವೈಭವವು ರಕ್ಕಸತಂಗಡಿಗಿಯ ಕಾಳಗವಾದ ನಂತರ ಕುಗ್ಗಲು, ಕಾಮಗೇತಿವಂಶದ ನಾಯಕರು ಚಿತ್ರದುರ್ಗದ ಆಡಳಿತವನ್ನು ವಹಿಸಿಕೊಂಡು ಸುಮಾರು ೨೦೦ ವರ್ಷಗಳ ಕಾಲ ರಾಜ್ಯಭಾರ ಮಾಡಿದರು, ಇವರ ಕಾಲದಲ್ಲಿ ಬೆಮ್ಮತ್ತನಕಲ್ಲುದುರ್ಗವು ಚಿಂತನಕಲ್ಲುದುರ್ಗ ಎಂಬ ಹೆಸರು ಪಡೆಯಿತು. ಅಂತ್ಯದಲ್ಲಿ ಚಿತ್ರದುರ್ಗ ಎಂದು ಹೆಸರಾಯಿತು.

ಫರ್ರಕಾಬಾದ್ : ಕ್ರಿ ಶ ೧೭೭೯ರಲ್ಲಿ ಚಿತ್ರದುರ್ಗ ಹೈದರಾಲಿಯಿಂದ ಆಕ್ರಮವಾಗಿ ಮೈಸೂರು ಸಂಸ್ಥಾನದ ಭಾಗವಾಯಿತು. ಹೈದರಾಲಿಯ ನಂತರ ಸಂಸ್ಥಾನವನ್ನು ಆಳಿದ ಟಿಪ್ಪೂಸುಲ್ತಾನನು ಅಭೇದ್ಯವಾದ ಮತ್ತು ಆಯಕಟ್ಟಿನ ಚಿತ್ರದುರ್ಗದ ಕೋಟೆಯನ್ನು ಕಂಡು ಆಶ್ಚರ್ಯಹೊಂದಿ ಈ ಊರಿನಲ್ಲಿ ಮಹಲನ್ನು (ಅರಮನೆ) ಕಟ್ಟಿಸಿ ಒಂದು ವರ್ಷಕಾಲ ಪರಿವಾರ ಸಮೇತ ನೆಲೆಸಿದನು. ಇದನ್ನೇ ತನ್ನ ಪ್ರಮುಖ ರಾಜಧಾನಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆಯೂ ಇತ್ತಂತೆ. ಒಂದು ಟಂಕಸಾಲೆಯನ್ನು ಏರ್ಪಡಿಸಿ, ಅಲ್ಲಿ ತಯಾರಾದ ನಾಣ್ಯಗಳಿಗೆ "ಫರ್ರಕ್ ಸಿಯರ್" ನಾಣ್ಯಗಳೆಂದು ಹೆಸರಿಟ್ಟನು. ಚಿತ್ರದುರ್ಗಕ್ಕೆ ಫರ್ರಕಾಬಾದ್ ಎಂದು ಹೊಸ ಹೆಸರಿಟ್ಟನು. ಆದರೆ ಆತನ ಮರಣದ ನಂತರ ಆ ಹೆಸರು ಮರೆತು ಹೋಗಿ, ಚಿತ್ರಕಲ್ದುರ್ಗವೆಂಬ ಹೆಸರೇ ಶಾಶ್ವತವಾಯಿತು.

ಚಿನ್ಮೂಲಾದ್ರಿ : ಚಿತ್ರದುರ್ಗಬೆಟ್ಟಕ್ಕೆ ಚಿನ್ಮೂಲಾದ್ರಿ ಎಂದು, ರಾಜನಿಗೆ ಚಿನ್ಮೂಲಾದ್ರೀಶ ಎಂದು ಹೆಸರು ಜನಪದ ಸಾಹಿತ್ಯದಲ್ಲಿ ಉಪಯೋಗಿಸಲ್ಪಟ್ಟಿದೆ.

ಶಿಲಾಯುಗದಷ್ಟು ಹಿಂದಕ್ಕೆ ಹೋಗುವ ಈ ಸ್ಥಳದ ಪ್ರಾಗ್ ಇತಿಹಾಸ ತರುವಾಯ ಕ್ರಿಸ್ತಶಕ ನಂತರದಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಚಿತ್ರದುರ್ಗದ ಪಾಳೇಗಾರರು ಈ ಎಲ್ಲಾ ಪ್ರಮುಖ ರಾಜವಂಶದದವರ ಅಧೀನ ಅರಸರ ಸಾಮ್ರಾಜ್ಯದ ಭಾಗವಾಗಿ ಸಾಗಿಬಂದ ಸುಧೀರ್ಘ ಇತಿಹಾಸ ಇವರದು.

ಚಿತ್ರದುರ್ಗ ಜಿಲ್ಲೆಯ ಪ್ರದೇಶ ಪ್ರಾಚೀನ ಕಾಲದ್ದೆಂದು ಸಾರುವ ಪುರಾವೆಗಳು ಅನೇಕ. ಈ ಪ್ರದೇಶ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ ಭಾಗವಾಗಿತ್ತೆಂದು ಭಾವಿಸಲು ಸಿದ್ಧಾಪುರ, ಬ್ರಮ್ಮಗಿರಿ ಮತ್ತು ಜಟಿಂಗರಾಮೇಶ್ವರಗಳಲ್ಲಿ ಸಿಕ್ಕರುವ ಅಶೋಕ ಚಕ್ರವರ್ತಿಯ ಶಾಸನಗಳಿಂದ ನಮಗೆ ತಿಳಿದುಬರುತ್ತದೆ. ಶಾತವಾಹನರ ಕಾಲದ ಸಂಸ್ಕೃತಿಯ ಹಲವಾರು ಅವಶೇಷಗಳನ್ನು ಚಂದ್ರವಳ್ಳಿಯ ಉತ್ಖನನಗಳು ಬೆಳಕಿಗೆ ತಂದಿವೆಯಷ್ಟೆ ಕದಂಬರ ಮಯೂರಶರ್ಮನ, ಪ್ರಪ್ರಥಮ ಸಂಸ್ಕೃತ ಶಾಸನವೆನಿಸುವ ಚಂದ್ರವಳ್ಳಿಯ ಶಾಸನವನ್ನು ಹೊಂದಿರುವ ಹೆಗ್ಗಳಿಕೆಯು ಈ ಜಿಲ್ಲೆಯದು.

ಭಾರತದ ಎಲ್ಲಾ ಪ್ರದೇಶಗಳಿಗೂ ಇರುವಂತೆ ಈ ಪ್ರದೇಶಕ್ಕೂ ತನ್ನದೇ ಆದ ಐತಿಹ್ಯವಿದೆ. ದ್ವಾಪರಯುಗದ ಪಾಂಡವರೊಡನೆ ನಂಟು ಇದೆ. ಎಂಬುದು ಹಲವಾರು ದಾಖಲೆಗಳ ಮೂಲಕ ನಮಗೆ ತಿಳಿಯುತ್ತದೆ. ಈ ಪ್ರದೇಶದಲ್ಲಿ ತಿಳಿದಿರುವ ಮಾಹಿತಿಯಂತೆ ಮಹಾಭಾರತದ ಭೀಮನು ಹಿಡಂಬಸುರನನ್ನು ಕೊಂದು ಆತನ ಸಹೋದರಿ ಹಿಡಂಬಿಯನ್ನು ವಿವಾಹವಾಗಿ ಘಟೋತ್ಕಜನಂತಹ ವೀರ ಪುತ್ರನನ್ನು ಪಡೆದನಂತೆ. ಹೀಗಿದೆ ಇಲ್ಲಿಯ ಸ್ಥಳಪುರಾಣ.

ಇಂದಿನ ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ತಾಲ್ಲೂಕುಗಳು ಆರು.

೧) ಚಿತ್ರದುರ್ಗ ತಾಲ್ಲೂಕು

೨) ಮೊಳಕಾಲ್ಮೂರು ತಾಲ್ಲೂಕು

೩) ಚಳ್ಳಕೆರೆ ತಾಲ್ಲೂಕು

೪) ಹಿರಿಯೂರು ತಾಲ್ಲೂಕು

೫) ಹೊಳಲ್ಕೆರೆ ತಾಲ್ಲೂಕು

೬) ಹೊಸದುರ್ಗ ತಾಲ್ಲೂಕು

ಈ ಜಿಲ್ಲೆಯಲ್ಲಿ ಒಟ್ಟು ೪೫೩ ಶಾಸನಗಳು ನಮಗೆ ಲಭ್ಯಇವೆ. ಯಾವುದೇ ರಾಜ ಮನೆತನದ ಮೂಲವನ್ನು ಹುಡುಕುವುದು ಚರಿತ್ರೆಕಾರನಿಗೆ ಒಂದು ಕೂತುಹಲದ ಅಂಶ. ಪ್ರಸಿದ್ಧ ರಾಜಮನೆತನಗಳ ಮೂಲವನ್ನು ಕೆಣಕಿದಾಗ ಮೂಲಪುರುಷನ ಸುತ್ತ ಐತಿಹ್ಯಗಳನ್ನು ಹೆಣೆದಿರುವ ಸಮಾನ ಅಂಶಗಳು ದೊರೆಯುತ್ತವೆ. ಚಿತ್ರದುರ್ಗವನ್ನು ಆಳ್ವಿಕೆ ಮಾಡಿದಂತಹ ಅನೇಕ ರಾಜಮನೆತನಗಳನ್ನು ನೋಡಬಹುದು. ಈ ಮುಂದಿನ ರಾಜಮನೆತನಗಳು ಚಿತ್ರದುರ್ಗವನ್ನು ಒಂದು ಭಾಗವಾಗಿ ಆಳ್ವಿಕೆ ಮಾಡಿದ್ದಾರೆ ಅಂತಹ ಕೆಲವು ರಾಜಮನೆತನಗಳನ್ನು ನೋಡಬಹುದಾಗಿದೆ.

ಸುಮಾರು ಮೂರನೆ ಶತಮಾನದಿಂದ ಆಳ್ವಿಕೆ ಪ್ರಾರಂಭಿಸಿದ ರಾಜಮನೆತನಗಳಾದ ಮೌರ್ಯರು ನಂತರ ಶಾತವಾಹನರು, ಕದಂಬರು, ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಚಿತ್ರದುರ್ಗದ ಪಾಳೇಗಾರರು ಹಾಗೂ ಆಳ್ವಿಕೆಮಾಡಿರುವುದನ್ನು ಶಾನಗಳು ಮತ್ತು ನಾಣ್ಯಗಳು ಮುಂತಾದ ದಾಖಲೆಗಳಿಂದ ತಿಳಿಯಬಹುದು.

ಈ ಎಲ್ಲಾ ರಾಜಮನೆತನಗಳಲ್ಲಿ ಮೊದಲು ನಮಗೆ ಸಿಗುವಂತಹ ದಾಖಲೆಗಳ ಪ್ರಕಾರ ಮೌರ್ಯರೇ ಮೊದಲಿಗರು. ಈ ಪ್ರದೇಶವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡಿದ್ದರು ಎಂಬುದಕ್ಕೆ ಚಿತ್ರದುರ್ಗದಲ್ಲಿ ದೊರೆತಿರುವ ಶಾಸನಗಳು ಮುಖ್ಯ ಆಧಾರಗಳಾಗಿವೆ. ಈ ಮುಂದಿನಂತೆ ಅವರ ಬಗ್ಗೆ ತಿಳಿಯಬಹುದು

೨.೧ ಮೌರ್ಯರು:

ಕರ್ನಾಟಕದ ಇತಿಹಾಸ ನಿರ್ದಿಷ್ಟವಾಗಿ ಆರಂಭವಾಗುವುದು ಮೌರ್ಯರಿಂದ ದೇವನಾಂ ಪ್ರಿಯದರ್ಶಿಯಾದ "ಅಶೋಕ"ನು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಆಳ್ವಿಕೆ ಮಾಡಿದ್ದಾನೆ ಎಂಬುದು ಅವನ ಶಾಸನದ ಆಧಾರದಿಂದ ತಿಳಿಯುತ್ತದೆ. ಯಾವುದೇ ಒಬ್ಬರಾಜ ಒಂದು ಪ್ರದೇಶದಲ್ಲಿ ಆಳ್ವಿಕೆ ನೆಡೆಸಿರುವುದು ಕಚಿತವಾಗಬೇಕಾದರೆ ಅವರ ಕುರುಹುಗಳಿಂದ ಮಾತ್ರ ಸಾದ್ಯವಾಗುತ್ತದೆ. ಅಶೋಕನ

ವಶಜರ ಬಗ್ಗೆ ಕೆದಕುವುದಾದರೆ, ಇವನು ಚಂದ್ರಗುಪ್ತ ಮೌರ್ಯನ ಮೊಮ್ಮಗ ಅಂದರೆ ಬಿಂದುಸಾರನ ಮಗನಾಗಿದ್ದಾನೆ. ಇವನು ಕ್ರಿ.ಪೂ.೨೭೩ ರಿಂದ ೨೩೨ರವರೆಗೆ ಆಳ್ವಿಕಮಾಡಿದ ಎಂದು ನಮಗೆ ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ. ಅಶೋಕ ಇಡೀ ಮೌರ್ಯ ಸಾಮ್ರಾಜ್ಯದ ಪ್ರಬಲ ವ್ಯಕ್ತಿಯಾಗಿ ಕಂಡುಬರುತ್ತಾನೆ.

ಬಿ.ಎಲ್.ರೈಸ್, ಎಂ. ಹೆಚ್. ಕೃಷ್ಣ ಮುಂತಾದ ವಿದ್ವಾಂಸರ ಪ್ರಕಾರ ಚಿತ್ರದುರ್ಗದ ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ, ಸಿದ್ಧಾಪುರ, ಜಟಂಗರಾಮೇಶ್ವರದ ಶಾಸನಗಳ ಪ್ರಕಾರ ಚಿತ್ರದುರ್ಗಕ್ಕೂ ಅಶೋಕನಿಗೂ ನಂಟು ಇತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮೌರ್ಯರು ಕರ್ನಾಟಕದ ಮೇಲೆ ಯಾವುದೇ ದಾಳಿಮಾಡಿ ಗೆದ್ದಿರುವ ವಿಷಯ ಎಲ್ಲೂ ಸಹ ನಮಗೆ ದೊರೆಯದಿರುವುದು ಗಮನಿಸಬೇಕಾಗುತ್ತದೆ. ಆದರು ಅಶೋಕನಿಗೂ ಕನ್ನಡನಾಡಿಗೂ ಇರುವ ಬಾಂಧವ್ಯ ಚಿರಪರಿಚಿತವಾದದ್ದು. ಇವನ ಹಲವಾರು ಶಾಸನಗಳು ಕರ್ನಾಟಕದಲ್ಲಿ ದೊರೆಯುತ್ತವೆ ಅವುಗ ಳಲ್ಲಿ ಮುಖ್ಯವಾಗಿ ನಾವು ನೋಡುವುದಾದರೆ ಸನ್ನತಿ, ಗವಿಮಠ, ಪಾಲ್ಕಿಗುಂಡ, ಮಸ್ಕಿ, ನಿಟ್ಟೂರು, ಉದಯಗೊಳ, ಜಟಂಗರಾಮೆಶ್ವರ, ಬ್ರಹ್ಮಗಿರಿ, ಸಿದ್ದಾಪುರ ಮುಂತಾದವುಗಳಲ್ಲಿ ದೊರೆತಿರುವುದು ನಮಗೆ ಕಂಡುಬರುತ್ತದೆ. ಬಹುಮುಖ್ಯವಾಗಿ ನಾವು ಗಮನಿಸಬೇಕಾದ ಸಂಗತಿ ಎಂದರೆ ಅಶೋಕನು ತನ್ನ ಆಡಳಿತದ ಬಗ್ಗೆ ಚಿತ್ರದುರ್ಗದ ಯಾವ ಶಾಸನದಲ್ಲು ಹೇಳಿಕೊಂಡಿಲ್ಲ. ಅವನ ಈ ಮೆಲ್ಕಾಣಿಸಿದ ಶಾಸನಗಳು ಅವನ ನಿಜ ನಾಮದೇಯದ ಬಗ್ಗೆಯೇ ತಿಳಿಸುತ್ತವೆ. ಬ್ರಮ್ಮಗಿರಿ ಶಾಸನದಲ್ಲಿ "ಇಸಿಲ" ಪದದ ಅರ್ಥ ಕೋಟೆಯೊಳಗಿನ ನಾಡು ಎಂದು ತಿಳಿಸಿದೆ. ಮತ್ತು "ಸನ್ನತಿ" ಶಾಸನದಲ್ಲಿ ದೇವನಾಂ ಪ್ರಿಯ ಅಶೋಕ ಎಂದು ತಿಳಿಸಿದೆ.[೧] ಚಿತ್ರದುರ್ಗದಲ್ಲಿ ಮೌರ್ಯರ ಆಡಳಿತ, ಆರ್ಥಿಕ ಸ್ಥಿತಿಗತಿ, ಅವರ ತೆರಿಗೆ ಮುಂತಾದ ವಿಷಯಗಳು ನಮಗೆ ಲಭ್ಯವಾಗುವುದಿಲ್ಲ.

೨..೨ ಶಾತವಾಹನರು

ಕರ್ನಾಟಕದ ರಾಜಮನೆತನಗಳಲ್ಲಿ ಮೌರ್ಯರ ಆಳ್ವಿಕೆಯ ನಂತರದಲ್ಲಿ ಚಿತ್ರದುರ್ಗವು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತು. ಆ ನಂತರದಲ್ಲಿ ಪಲ್ಲವರು ತಮ್ಮ ಆಡಳಿತವನ್ನು ಈ ಜಿಲ್ಲೆಯ ಮೇಲೆ ನೆಡೆಸಿರುವ ಸಾದ್ಯತೆಗಳು ಅಧಿಕವೆಂದು ಹೇಳಬಹುದಾಗಿದೆ. ಏಕೆಂದರೆ ಚಿತ್ರದುರ್ಗ ಜಿಲ್ಲೆಗೆ ಹೊಂದಿಕೊಂಡಿರುವ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ "ತಾಮ್ರಶಾಸನವು" ಪಲ್ಲವರದ್ದಾಗಿದ್ದು ಅದರಲ್ಲಿ "ಶಾತವಾಹನಿ" ಎಂಬ ಸಾಮ್ರಾಜ್ಯಭಾಗದ ಉಲ್ಲೇಖವಿದೆ. ಹಾಗಾಗಿ ಚಿತ್ರದುರ್ಗ ಜಿಲ್ಲಾ ಪ್ರದೇಶವು ಪಲ್ಲವರ ಶಾತವಾನೀರಾಷ್ಟ್ರದಲ್ಲಿ ಅಂತರ್ಗತವಾಗಿರಬಹುದೆಂದು ಭಾವಿಸಬಹುದಾಗಿದೆ.

ಶಾತವಾಹನರು ಕರ್ನಾಟಕವನ್ನು ಕ್ರಿ.ಪೂ. ೨ನೇ ಶತಮಾನದಿಂದ ಕ್ರಿ.ಶ. ೨ನೇ ಶತಮಾನದವರೆಗೆ ಆಳಿದರು. ಈ ಅವಧಿಯಲ್ಲಿ ಅವರು ಅನೇಕ ಏಳುಬೀಳುಗಳನ್ನು ಕಂಡರು ಎಂಬುದು ನಮಗೆ

ತಿಳಿದುಬರುತ್ತದೆ. "ಮಳವಳ್ಳಿ ಮತ್ತು ಬನವಾಸಿ" ದಾನ ಶಾಸನಗಳಲ್ಲಿ ಹಾರೀತಿ ಪುತ್ರ ಶಾತಕರ್ಣಿಯ ಉಲ್ಲೇಖವಿದೆ. ಇವನು ನಂದರ ಮತ್ತು ಮೌರ್ಯರ ಕಾಲದಲ್ಲಿ ಕುಂತಳ ಪ್ರಾಂತದಲ್ಲಿ ಅವರ ಮಾಂಡಲೀಕನಾಗಿದ್ದಿರಬಹುದೆಂದು ಅಭಿಪ್ರಾಯವಿದೆ. ಚಿತ್ರದುರ್ಗದ ಸಮೀಪದ ಚಂದ್ರವಳ್ಳಿಯಲ್ಲಿ ಉತ್ಖನನದ ಕಾಲದಲ್ಲಿ ಶಾತಕರ್ಣಿಗಳ ಉಲ್ಲೇಖಗಳಿರುವ ನಾಣ್ಯಗಳು, ಕುಂಭಗಳು, ದೊಡ್ಡ ಪ್ರಮಾಣದಲ್ಲಿ ದೊರೆತಿವೆ.

ನಾಣ್ಯಗಳು

ಕರ್ನಾಟಕದ ಕೆಲವು ಭಾಗಗಳು ಇವರ ಆಳ್ವಿಕೆಗೆ ಸೇರಿದ್ದವು. ಶಾತವಾಹನರು ಚಿನ್ನ, ಬೆಳ್ಳಿ, ಸೀಸ ಮತ್ತು ಪೊಟಿನ್ (ಮಿಶ್ರಲೋಹ) ಗಳಲ್ಲಿ ನಾಣ್ಯಗಳನ್ನು ಟಂಕಿಸುತ್ತಿದ್ದರು. ಇವರ ನಾಣ್ಯಗಳು ಸಾಮಾನ್ಯವಾಗಿ ವೃತ್ತಾಕಾರ, ಚೌಕಾಕಾರ ಹಾಗೂ ಆಯತಾಕಾರದಲ್ಲಿವೆ. ಈ ನಾಣ್ಯಗಳ ಮೇಲೆ ಆನೆ, ಸಿಂಹ, ಕುದುರೆ, ಉಜ್ಜಯಿನಿ ಚಿಹ್ನೆ ಮತ್ತು ಆ ಕಾಲದ ಬ್ರಾಹ್ಮೀಲಿಪಿಯ ರಾಜರ ಹೆಸರಿನ ಬರಹವಿರುತ್ತದೆ ಇವರ ದೊಡ್ಡನಾಣ್ಯ ಒಂದೂವರೆ ಅಂಗುಲ ಅಗಲವಿದ್ದರೆ ಸಣ್ಣನಾಣ್ಯಗಳು ಅರ್ಧ ಅಂಗುಲವಿರುತ್ತವೆ. ಕೆಲವು ನಾಣ್ಯಗಳು ೨೦ ಗ್ರಾಂ ತೂಗಿದರೆ ಕೆಲವು ೨ ಗ್ರಾಂ ತೂಗುತ್ತವೆ. ಇವರ ನಾಣ್ಯಗಳು ಸನ್ನತಿ, ಭೀಮನಹಳ್ಳಿ, ಹಿಪ್ಪರ್ಗಿ, ಹರದನಕೆರೆ, ಐಹೊಳೆ, ವಡಗಾಂ, ಪಟ್ಟದಕಲ್ಲು, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಕುಂದೂರು, ಬನವಾಸಿ, ಚಂದ್ರವಳ್ಳಿ ಮುಂತಾದ ಸ್ಥಳಗಳಲ್ಲಿ ಕಂಡುಬರುತ್ತವೆ. ಇದರಿಂದ ನಮಗೆ ತಿಳಿಯುವಂತ ವಿಷಯವೆಂದರೆ ಶಾತವಾಹನರು ಚಿತ್ರದುರ್ಗದಲ್ಲಿ ಆಳ್ವಿಕೆಮಾಡಿರುವುದು ತಿಳಿದುಬರುತ್ತದೆ. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯಲ್ಲಿ ನಾಣ್ಯಗಳು ದೊರೆತಿವೆ.

ಶಾತವಾಹನರ ಮೂಲದ ಬಗ್ಗೆ ತಿಳಿಯುವುದಾದರೆ ಇದರ ಬಗ್ಗೆ ವಿದ್ವಾಂಸರಲ್ಲೇ ಭಿನ್ನಾಭಿಪ್ರಾಯಗಳಿವೆ. ಮುಖ್ಯವಾಗಿ ನೋಡುವುದಾದರೆ ಪುರಾಣಗಳಲ್ಲಿ ಇವರನ್ನು"ಆಂಧ್ರರು","ಆಂಧ್ರಭತ್ಯರು"ಎಂದು ವರ್ಣಿಸಲಾಗಿದೆ. ಶಾತವಾಹನರ ಅನೇಕ ಶಾಸನಗಳು ಆಂದ್ರದಲ್ಲಿ ದೊರಕಿರುವುದು ಕಡಿಮೆಯೇ ಮತ್ತು ಶಾತವಾಹನರು ಕರ್ನಾಟಕದವರೆಂದು ಹೇಳಲು ಅನೇಕ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಶಾತವಾಹನರ ಅನೇಕ ಶಾಸನಗಳಲ್ಲಿ "ಕುಂತಲ ಸ್ವಾಮಿಗಳು" ಎಂದು ವರ್ಣಿಸಲಾಗಿದೆ. "ಕುಂತಲದೇಶವೆಂದರೆ" ಕರ್ನಾಟಕವೆ "ಪುರಾಣಗಳಲ್ಲಿಯು ಕೂಡ ಶಾತಕರ್ಣಿಯನ್ನು "ಕುಂತಲ ಶಾತಕರ್ಣಿ" ಎಂದು ವರ್ಣಿಸಿರುವುದು ಕಂಡುಬರುತ್ತದೆ.

ತೆರಿಗೆ ಮತ್ತು ವಸ್ತುವಿನಿಮಯದ ಬಗ್ಗೆ

ರಾಜನು ಆದರ್ಶವಾದ ಪದ್ಧತಿಯನ್ನು ಅನುಸರಿಸುತ್ತಿದ್ದನು. ತೆರಿಗೆಗಳನ್ನು ಹಣ ಮತ್ತು ದಾನ್ಯದ ರೂಪದಲ್ಲಿ ಸಂಗ್ರಹಿಸುತ್ತಿದ್ದನು. ರೈತನುಬೆಳೆದ ಬೆಳೆಯ ಆರನೇ ಒಂದು (೬/೧) ಭಾಗವನ್ನು ಕಂದಾಯವೆಂದು ಸಂಗ್ರಹಿಸುತ್ತಿದ್ದನು. ಆರಂಭದಲ್ಲಿ ವ್ಯಾಪಾರವು " ವಸ್ತು ವಿನಿಮಯ" ಪದ್ಧತಿಯನ್ನು

ಅನುಸರಿಸುತ್ತಿತ್ತು. ಉಪ್ಪು, ಮೀನು, ಭತ್ತ, ಹಾಲು, ಉತ್ಪನ್ನಗಳು, ಗೆಡ್ಡೆ ಗೆಣಸುಗಳು, ಜೇನು ತುಪ್ಪ ಮುಂತಾದವುಗಳು ಅವಶ್ಯಕ ವಸ್ತುಗಳಾಗಿದ್ದ ಕಾರಣ ಇವುಗಳು ಸಾಮಾನ್ಯವಾಗಿ "ವಸ್ತುವಿನಿಮಯ" ಪದ್ಧತಿಯಲ್ಲಿ ಕೈ ಬದಲಾಗುತ್ತಿದ್ದವು. ಉಪ್ಪನ್ನು ಭತ್ತದ ಬದಲಾಗಿ, ಭತ್ತವನ್ನು ಹಾಲಿನ ಬದಲಾಗಿ, ಬೆಣ್ಣೆಯನ್ನು ಮೊಸರು ತುಪ್ಪ ಜೇನಿನ ಬದಲಾಗಿ ವಿನಿಮಯ ಮಾಡಲಾಗುತ್ತಿತ್ತು. ಈಗೆ ಶಾತವಾಹನರು ತಮ್ಮ ತೆರಿಗೆ ಪದ್ಧತಿ ನೆಡೆಸುತಿದ್ದರೆಂಬುದು ತಿಳಿದುಬರುತ್ತದೆ.

೨.೩ ಕದಂಬರು

ಸಾಮಾನ್ಯವಾಗಿ ಶಾತವಾಹನರ ಆಳ್ವಿಕೆಯ ನಂತರ ಚಿತ್ರದುರ್ಗ ಕದಂಬರ ಆಡಳಿತಕ್ಕೆ ಒಳಪಟ್ಟಿತು. ಕರ್ನಾಟಕದ ಇತಿಹಾಸ ಪ್ರಾರಂಭವಾಗುವುದು ಮೌರ್ಯರ ಆಳ್ವಿಕೆಯಿಂದ. ಆದರೆ ಕನ್ನಡದ ಪ್ರಪ್ರಥಮ ರಾಜಮನೆತನ ಕದಂಬರದು ಎಂದು ತಿಳಿದು ಬರುತ್ತದೆ. ಕದಂಬರು ಹಾಗೂ ಗಂಗರು ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ಅಧಿಕಾರಕ್ಕೆ ಬಂದರು. ಉತ್ತರವಲಯದಲ್ಲಿ ಕದಂಬರು ದಕ್ಷಿಣದಲ್ಲಿ ಗಂಗರ ಆಡಳಿತವನ್ನು ನಾವು ನೋಡಬಹುದು.

ಕದಂಬರ ಮೂಲದ ಬಗ್ಗೆ ಹಲವಾರು ಕಥೆಗಳಿವೆ "ತ್ರಿಲೋಚನ ಕದಂಬ" ಈ ವಂಶದ ಮೂಲ ಪುರುಷ ಅವನಿಗೆ ನಾಲ್ಕು ಕೈ ಮೂರು ಕಣ್ಣುಗಳಿದ್ದವು. ಶಿವನ ಬೆವರು ಕದಂಬ ವೃಕ್ಷದ ಕೆಳಗೆ ಬಿದ್ದು ಆತ ಹುಟ್ಟಿದ. ಆದ್ದರಿಂದಲೇ ಅವನ ವಂಶಸ್ಥರಿಗೆ ಕದಂಬರೆಂದು ಹೆಸರು ಬಂದಿತು.[೨] ಇದು ಒಂದು ಇತಿಹಾಸವಾದರೆ ಮಯೂರವರ್ಮನೇ ಕದಂಬ ವೃಕ್ಷದ ಕೆಳಗೆ ರುದ್ರನಮಗನಾಗಿ ಹುಟ್ಟಿದ . ಆದ್ದರಿಂದಲೇ ಆತನ ವಂಶಸ್ಥರಿಗೆ ಕದಂಬರೆಂದು ಮತ್ತೊಂದು ಹೇಳಿಕೆಯು ಇದೆ. ಮತ್ತು ಅವನಿಗೆ ಹಣೆಯ ಮೇಲೆ ಕಣ್ಣಿದ್ದರಿಂದ ಕಿರೀಟವನ್ನು ಮಂಡಿಯ ಮೇಲೆ ಕಟ್ಟಬೇಕಾಗಿತ್ತು. ಮತ್ತೊಂದು ಕಥೆಯ ಪ್ರಕಾರ ಪರುಶುರಾಮನು ಹೈಗ ಮತ್ತು ತುಳುನಾಡನ್ನು ಸಮುದ್ರದಿಂದ ಉದ್ದರಿಸಿದ ತಮ್ಮ ಶಿಷ್ಯನ ಸೃಷ್ಠಿ ಕಾರ್ಯವನ್ನು ನೋಡುವುದಕ್ಕಾಗಿ ಶಿವಪಾರ್ವತಿಯರು ಸದ್ಯೋಜಾತವಾದ ಈ ಪ್ರದೇಶಕ್ಕೆ ಬಂದಿಳಿದಾಗ ಅವರಿಗೆ ಕದಂಬ ವೃಕ್ಷದಡಿಯಲ್ಲಿ ಕುಮಾರನೊಬ್ಬನು ಜನಿಸಿದ ಅವನೇ ಮಯೂರವರ್ಮ. ಅವನ ವಂಶಕ್ಕೆ "ಕದಂಬ ಕುಲ" ಎಂದು ಹೆಸರಾಯಿತು. ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಬನವಾಸಿಯ ಕದಂಬರು ನಾಲ್ಕನೇ ಶತಮಾನದಿಂದ ಸುಮಾರು ಮೂರು ಶತಮಾನಗಳ ಕಾಲ ಕರ್ನಾಟಕದ ವಾಯುವ್ಯ ಭಾಗವನ್ನು ಆಳಿದರು. ಮಾನವ್ಯಗೋತ್ರದ ಹಾರತಿ ವಂಶದ ಬ್ರಾಹ್ಮಣ ವೀರಶರ್ಮ ಎಂಬುವನು ಈ ವಂಶದ ಮೊದಲ ಐತಿಹಾಸಿಕ ವ್ಯಕ್ತಿ. ಇವನ ಮಗ ಬಂದುಶೇಣ ಕ್ಷಾತ್ರ ವೃತ್ತಿಯನ್ನು ಅವಲಂಬಿಸಿದ್ದ ಎಂಬ ಅಂಶವನ್ನು ಇತ್ತೀಚೆಗೆ ದೊರೆತ ಬನವಾಸಿಯ ಹತ್ತಿರವಿರುವ ಗುಡ್ನಾಪುರದ ಶಾಸನವು ತಿಳಿಸುತ್ತದೆ. ಇದೇ ಶಾಸನ ಬಂದುಶೇಣನ ಮಗ ಮಯೂರಶರ್ಮ ಎಂದು ಬ್ರಾಹ್ಮಣ್ಯವನ್ನು ಪಾಲಿಸುತ್ತಿದ್ದನೆಂದು ತಿಳಿಸುತ್ತದೆ.[೩] ತಾಳಗುಂದದಲ್ಲಿರುವ ಶಾಂತಿವರ್ಮನ ಶಾಸನ

ಕದಂಬವಂಶದ ಸ್ಥಾಪನೆಯ ಬಗ್ಗೆ ಹೆಚ್ಚುಮಾಹಿತಿಯನ್ನು ಕೊಡುತ್ತದೆ . ಅದರ ಪ್ರಕಾರ ಬ್ರಾಹ್ಮಣರಾದ ಈ ವಂಶಜರ ಮನೆಯ ಬಳಿ ಕದಂಬ ವೃಕ್ಷವೊಂದು ಇದ್ದುದರಿಂದ ಈ ಮನೆಯವರಿಗೆ ಕದಂಬ ಎಂಬ ಹೆಸರು ಪ್ರಾಪ್ತವಾಯಿತು. ಈ ಮಯೂರಶರ್ಮನೇ ಕದಂಬ ರಾಜ್ಯ ಸ್ಥಾಪಕ. ಈತ ವೇದ ಅಧ್ಯಯನಕ್ಕಾಗಿ ತನ್ನ ತಾತ ವೀರಶರ್ಮನೊಡನೆ ಕಂಚಿಯ ಘಟಿಕಸ್ಥಾನಕ್ಕೆ ಹೋಗಿದ್ದ ಅಲ್ಲಿಯ ಪಲ್ಲವ ಅರಸು ಅಶ್ವಮೇದಯಾಗ ಮಾಡುವಾಗ ಇವನು ಪಲ್ಲವ ಸೈನಿಕರಿಂದ ಅವಮಾನಿತನಾದ ಇದರಿಂದ ಛಲಹಿಡಿದು ಅಸ್ತ್ರವಿದ್ಯೆಕಲಿತು ದಂಡುಕಟ್ಟಿ ಅವರ ವಿರುದ್ದ ಹೋರಾಡಿದ . ಪಲ್ಲವರ ಗಡಿಪ್ರದೇಶವಾದ ಶ್ರೀಪರ್ವತದ ಭಾಗವನ್ನು ಆಕ್ರಮಿಸಿದ. ಪಲ್ಲವರ ಸಾಮಂತನಾದ ಬೃಹದ್ದಾಣರನ್ನು ಸೋಲಿಸಿ ಅವರಿಂದ ಕಪ್ಪವನ್ನು ವಸೂಲಿ ಮಾಡಿದ, ಮಗ್ಗಲಮುಳ್ಳಾಗಿದ್ದ ಮಯೂರಶರ್ಮನೊಂದಿಗೆ ವಿರೋಧ ಬೆಳೆಸಲು ಪಲ್ಲವರು ಇಚ್ಚಿಸಲಿಲ್ಲ ಇವನಿಗೆ ಅವರು ಪ್ರೇಹರಾ ನದಿ ಪ್ರದೇಶವನ್ನು ಬಿಟ್ಟುಕೊಟ್ಟರು.ಮಯೂರಶರ್ಮ ಕದಂಬರ ಮೊದಲ ಅರಸ ಇವನೇ ಈ ವಂಶದ ಮೂಲಸ್ಥಾಪಕನೆಂದು ಗಮನಿಸಬೇಕಾಗುತ್ತದೆ. ಇವನು ಪಲ್ಲವರ ಸಾಮಂತನಾಗಿ ಆಳ್ವಿಕೆಯನ್ನು ಆರಂಭಿಸಿದರೂ ಸ್ವಲ್ಪಕಾಲದಲ್ಲೆ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ ಎಂಬುದು ಆಡಳಿತದ ಬಗ್ಗೆ ವಿವೇಚನೆ ಮಾಡಿದಾಗ ನಮಗೆ ತಿಳಿಯುತ್ತದೆ. ಮಯೂರಶರ್ಮನು ಚಂದ್ರವಳ್ಳಿಯ ಶಾಸನದ ಪ್ರಕಾರ ಉತ್ತರದಲ್ಲಿರುವ ಶಕಸ್ಥಾನ ಪಾರಿಯಾತ್ರಿ ಮೌಖರಿ ದಕ್ಷಿಣದಲ್ಲಿರುವ ಸೇಂದ್ರಕ, ಪುನ್ನಾಟ, ಪಲ್ಲವ ಹಾಗೂ ಪಶ್ಚಿಮದಲ್ಲಿರುವ ತ್ರಿಕೂಟ ಮತ್ತು ಅಭೀರರನ್ನು ಗೆದ್ದನೆಂದು ಹೇಳಲಾಗಿದೆ. ಇತ್ತೀಚೆಗೆ ಶಾಸನದ ಪಾಠವನ್ನು ಬೇರೆ ರೀತಿಯಲ್ಲಿ ಓದಿ ಅರ್ಥೈಸಲಾಗಿದೆ. ಇದರ ಪ್ರಕಾರ ಮಯೂರಶರ್ಮ ಮೇಲೆ ತಿಳಿಸಿರುವ ಪ್ರದೇಶವನ್ನು ಗೆದ್ದ ವಿಚಾರವೇ ಇಲ್ಲವೆಂಬುದು ಗಮನಿಸಬೇಕಾದ ಅಂಶವಾಗಿದೆ. ಈ ಸಂಶೋಧನೆಯ ಬೆಳಕಿನಲ್ಲಿ ಹಳೆಯ ಹೇಳಿಕೆಯನ್ನು ಮಾರ್ಪಾಡು ಮಾಡುವುದು ಅಗತ್ಯವೆನಿಸುತ್ತದೆ. ಶಿವಮೊಗ್ಗ ಜಿಲ್ಲೆಯ ಮಳವಳ್ಳಿಯಲ್ಲಿ ದೊರಕಿರುವ ಪ್ರಾಕೃತ ಶಾಸನವೊಂದರಲ್ಲಿ ಚುಟುಕುಲದ ಅರಸನು ದತ್ತಿ ನೀಡಿರುವ ಉಲ್ಲೇಖವಿದೆ. ಅದೇ ಶಾಸನದಲ್ಲಿ ಶಿವಸ್ಕಂದವರ್ಮನು ಹಿಂದೆ ಮಳವಳ್ಳಿ ದೇವರಿಗೆ ದತ್ತಿ ಕೊಟ್ಟಿರುವುದನ್ನು ತಿಳಿಸಲಾಗಿದೆ. ಇದನ್ನು ಕದಂಬ ರಾಜನು ಜೀರ್ಣೋದ್ದಾರ ಮಾಡಿಸಿದನೆಂದು ಹೇಳಿದೆ. ಈ ಕದಂಬ ರಾಜನು ಮಯೂರಶರ್ಮನೆಂದು ಅನೇಕರು ಅಭಿಪ್ರಾಯಪಡುವುದಾದರು ಇದರಲ್ಲಿ ಅನುಮಾನಕ್ಕೆಡೆ ಉಂಟು ಇವನ ನಂತರ ಅಧಿಕಾರಕ್ಕೆ ಬಂದ ಕದಂಬ ರಾಜರು ಕ್ಷಾತ್ರವೃತ್ತಿಯನ್ನು ಅನುಸರಿಸಿ "ವರ್ಮ" ಎಂದು ಕರೆದುಕೊಂಡರು. ಅನಂತರದ ಶಾಸನಗಳು ಇವನನ್ನು ಮಯೂರವರ್ಮ ಎಂದು ಕರೆದಿದೆ. ಕದಂಬರ ಆಡಳಿತದಲ್ಲಿ ಕಂಗವರ್ಮ ಭಗೀರಥ ಮತ್ತು ರಘು ಕಾಕುಸ್ಥವರ್ಮ, ಶಾಂತಿವರ್ಮ, ರವಿವರ್ಮ, ಹರಿವರ್ಮ ಮುಂತಾದವರು ಕದಂಬರ ವಂಶದಲ್ಲಿ ಬನವಾಸಿಯನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆಯನ್ನು ಮಾಡಿದರು. ಇದರಲ್ಲಿ ಮುಖ್ಯವಾಗಿ ಚಿತ್ರದುರ್ಗದ ಭಾಗದಲ್ಲಿ ಮುಖ್ಯವೆನಿಸುವ ವ್ಯಕ್ತಿ ಮಯೂರವರ್ಮನೆಂದು ಚಂದ್ರವಳ್ಳಿಯಲ್ಲಿ ದೊರೆತ ಶಾಸನದಿಂದ ನಮಗೆ ತಿಳಿದುಬರುತ್ತದೆ.

ಕದಂಬರ ಆರ್ಥಿಕ ಪದ್ಧತಿ

ಕದಂಬರ ಆಡಳಿತದಲ್ಲಿ ನೋಡುವುದಾದರೆ, ನಾಡಿನ ಆರ್ಥಿಕ ಸ್ಥಿತಿಯು ಭದ್ರವಾದ ನೆಲೆಗಟ್ಟಿನ ಮೇಲೆ ರೂಪಿತವಾಗಿತ್ತು. ಕೃಷಿಯು ದೇಶದ ಮುಖ್ಯ ಹಣಕಾಸಿನ ಮೂಲವಾಗಿತ್ತು. ಭೂಮಿಯೂ ಜನತೆಯ ಬೆಲೆಯ ಸ್ತಿರ ಆಸ್ತಿಯಾಗಿತ್ತು ವ್ಯವಸಾಯದ ಅಭಿವೃದ್ಧಿಗೆ ಸರ್ಕಾರದ ಉತ್ತೇಜನ ಇರುತಿತ್ತು. ಚಂದ್ರವಳ್ಳಿಯ ಶಾಸನಗಳಲ್ಲಿ ಮಯೂರವರ್ಮ ಕೆರೆಕಟ್ಟಿಸಿದ ಪ್ರಸ್ತಾಪವಿದೆ. ಇದರಿಂದ ನಮಗೆ ತಿಳಿಯುತ್ತದೆ ಕೃಷಿಗೆ ಯೋಗ್ಯವಾದ ಸಲಕರಣೆಗಳನ್ನು ಒದಗಿಸಬಲ್ಲ ಉತ್ತಮ ಆಡಳಿತಗಾರನೆಂದು. ರವಿವರ್ಮ ಮತ್ತು ಕಾಕುಸ್ಥವರ್ಮರು ಕೆರೆ, ತಟಾಕವನ್ನು ಕಟ್ಟಿಸಿ ವ್ಯವಸಾಯಕ್ಕೆ ನೆರವಾದರು. ಪಶುಪಾಲನೆ, ನೇಯ್ಗೆ, ಮುಂತಾದ ಕಸುಬುಗಳು ಈ ಕಾಲದಲ್ಲಿ ಜನಪ್ರಿಯವಾಗಿದ್ದವು. ಕದಂಬರು ವ್ಯಾಪರಕ್ಕೂ ಅಷ್ಟೇ ಪ್ರೋತ್ಸಾಹ ನೀಡಿರಬೇಕು ಆದರೆ ಇದಕ್ಕೆ ಆಧಾರ ಸಿಗದು.[೪] ಶಾಸನದಲ್ಲಿ ನದಿಯೊಂದಕ್ಕೆ ಸೇತುವೆ ನಿರ್ಮಿಸಿದ ವಿಷಯವಿದೆ ರಾಜರು ನಾಣ್ಯಗಳನ್ನು ಹೊರಡಿಸುತ್ತಿದ್ದುದು ವ್ಯಾಪಾರ ಸುಗಮವಾಗಿ ನೆಡೆಯಲು ಸಹಾಯಕವಾಗಿತ್ತು. ಕದಂಬರ ಕಾಲದಲ್ಲಿ ಅನೇಕ ಧರ್ಮಗಳು ಪ್ರಚಲಿತವಾಗಿದ್ದವು ಬೌದ್ದಧರ್ಮ ಇವರ ಕಾಲದಲ್ಲಿ ಯಥಾಸ್ಥಿತಿ ಮುಂದುವರೆಯಿತು. ಬೌದ್ಧಧರ್ಮಕ್ಕೆ ದಾನ ನೀಡಿದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಮತ್ತು ಕಾಕುಸ್ಥವರ್ಮನ ಹಲ್ಮಿಡಿ ಶಾಸನದಲ್ಲಿ ಉಲ್ಲೇಖವಿರುವಂತೆ ಇದೊಂದು ದಾನ ಶಾಸನ ಕೆಕೆಪಲ್ಲವರೊಡನೆ ಹೋರಾಡಿ ಗೆದ್ದಿದ್ದರ ಪರಿಣಾಮವಾಗಿ ಬಾಳ್ಗಚ್ಚಾಗಿ ದಾನಮಾಡಿದ ಉಲ್ಲೇಖಗಳು ಕಂಡುಬರುತ್ತವೆ. ಮತ್ತು ಕುರುಮಿಡಿ ಎಂಬ ಕುರುಬರಿಗೆ ಬಿಟ್ಟ ತೆರಿಗೆ ಎಂದು ಈ ಶಾಸನದಲ್ಲಿ ನೋಡಬಹುದು. ಕದಂಬರು ಪ್ರಾರಂಭದಲ್ಲಿ ಧೈರ್ಯ ಸಾಹಸಗಳಿಂದ ತಮ್ಮ ನೆಲೆಯನ್ನು ಚಿತ್ರದುರ್ಗ ಮತ್ತು ಅದರ ಆಸುಪಾಸಿನಲ್ಲೆ ಸ್ಥಾಪಿಸಿದ್ದರು ಅದರಲ್ಲೂ ಕದಂಬಗಳಿಗೆ ಈ ಭಾಗವು ಕೇಂದ್ರವಾಗಿತ್ತು. ಚಂದ್ರವಳ್ಳಿ ಶಾಸನವು ಮಯೂರಶರ್ಮನು ಸುಂದರ ಮತ್ತು ದೃಡವಾದ ಕೆರೆಯನ್ನು ಕಟ್ಟಿಸಿದ ಮತ್ತು ಕಾಡಿನಲ್ಲಿ ಸೈನ್ಯತಾಣವನ್ನು ಸ್ಥಾಪಿಸಿದ ಎಂದು ತಿಳಿಯುತ್ತದೆ. ಈ ಶಾಸನದ ಪಾಠ ಮತ್ತು ಅರ್ಥದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇದೊಂದು ಪ್ರಾಕೃತ ಶಾಸನವೆಂದು ಶ್ರೀ ಎಂ ಹೆಚ್ ಕೃಷ್ಣ ಅವರು ತಿಳಿಸಿದ್ದು ಇನ್ನೂ ಅನೇಕ ವಿದ್ವಾಂಸರು ಇದನ್ನು ಮರುಪರಿಶೀಲಿಸಿ ಬೇರೆ ಬೇರೆ ಅಭಿಪ್ರಾಯವನ್ನು ತಿಳಿಸಿದ್ದಾರೆ. ಇತ್ತೀಚೆಗೆ ಡಾ.ಬಿ. ರಾಜಶೇಖಪ್ಪನವರು ಈ ಶಾಸನವನ್ನು ಮಯೂರಶರ್ಮ ಎನ್ನದೆ ಮಯೂರವರ್ಮ ಎನ್ನಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಚಂದ್ರವಳ್ಳಿಯ ಹುಲಿಗೊಂದಿ ಭೈರವೇಶ್ವರ ದೇವಾಲಯದ ಮುಂದಿರುವ ಈ ಶಾಸನವನ್ನು ದಾಕ್ಷಿಣಾತ್ಯ ಬ್ರಾಹ್ಮೀಲಿಪಿಯಲ್ಲಿ ಕೊರೆಯಲಾಗಿದೆ ಚಂದ್ರವಳ್ಳಿಯ ಭಾಗದ ಕಾಡಿನಲ್ಲಿ ವಾಸಿಸಲು ನೆಲೆಯನ್ನು ಮಾಡಿಕೊಂಡಿದ್ದು ಮತ್ತು ಜನರ ಉಪಯೊಗವನ್ನು ಅನುಕೂಲವಾಗಲೆಂದು ಕೆರೆಯನ್ನು ದುರಸ್ಥಿಗೊಳಿಸಲಾಗಿದೆ. ರಾಜ್ಯಸ್ಥಾಪನೆಗೆ ಅಗತ್ಯವಾದ ಸಿದ್ದತೆಗಳನ್ನು ಮಾಡಿಕೊಳ್ಳಲು ಈ ಪ್ರಾಂತ್ಯವನ್ನು ಆರಿಸಿಕೊಂಡರೆಂದು ಸ್ಪಷ್ಟವಾಗುತ್ತದೆ. ತಾಳಗುಂದ ಶಾಸನದಲ್ಲಿ ಉಲ್ಲೇಖಗೊಂಡಿರುವ "ಶ್ರೀ ಪರ್ವತ" ಚಂದ್ರವಳ್ಳಿಯ ಸಮೀಪದ "ಧವಳಪ್ಪಗುಡ್ಡ" ಎಂದು ಗುಡ್ಡದ ಮೇಲೆ ಸಿಗುವ ಪಳೆಯುಳಿಕೆಗಳಿಂದ

ಗುರುತಿಸಬಹುದಾಗಿದೆ. ಒಂದು ರೀತಿಯಲ್ಲಿ ಕದಂಬ ಸಾಮ್ರಾಜ್ಯ ಸ್ಥಾಪಿತವಾದದ್ದು ಚಿತ್ರದುರ್ಗದಲ್ಲಿಯೇ ಎಂದು ಹೇಳಬಹುದು. ಬನವಾಸಿಯು ಕದಂಬರ ಮೂಲ ರಾಜಧಾನಿಯಾಗಿದ್ದರು ಇನ್ನು ಕೆಲವು ರಾಜಧಾನಿಗಳೂ ಇದ್ದವು ಅದರಲ್ಲಿ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರಿನ ಸಮೀಪ ಇರುವ ಉಚ್ಚಶೃಂಗಿ ಅಥಾವ ಉಚ್ಚಂಗಿಯೂ ಒಂದಾಗಿತ್ತು. ನಂತರದ ಕದಂಬ ವಂಶಿಯರ ಶಾಸನಗಳು ಈ ಉಚ್ಚಂಗಿಯಲ್ಲಿವೆ. ಎಂಬುದು ಶಾಸನಗಳ ಮೂಲಕ ನಮಗೆ ತಿಳಿದುಬರುತ್ತದೆ.

೨.೪ ಬಾದಾಮಿಯ ಚಳುಕ್ಯರು

ಕಂದಬರ ಆಳ್ವಿಕೆಯ ನಂತರ ಚಿತ್ರದುರ್ಗ ಪ್ರದೇಶವು ಬಾದಾಮಿ ಚಾಲುಕ್ಯರ ವಶಕ್ಕೆ ಒಳಪಟ್ಟಿತು. ಆ ಕಾಲಕ್ಕೆ ಚಿತ್ರದುರ್ಗವು ಪ್ರಾಯಶ: ಉಚ್ಚಶೃಂಗ ವಿಷಯದಲ್ಲಿ ಸೇರಿಹೊಗಿತ್ತೆಂದು ಹೇಳಬಹುದು. ಬಾದಾಮಿಯ ಚಾಲುಕ್ಯರ ಪುಲಿಕೇಶಿಯ ಉತ್ತರಾಧಿಕಾರಿಯಾಗಿ ಬಂದವನು ಒಂದನೆಯ ವಿಕ್ರಮಾದಿತ್ಯ. (ಕ್ರಿ.ಶ. ೬೫೫–೬೮೧) ಈತ ಪಲ್ಲವರನ್ನು ಸೋಲಿಸಿ ಕಳೆದುಕೊಂಡಿದ್ದ ಪ್ರದೇಶವನ್ನು ಮತ್ತೆ ಗಳಿಸಿದನು. ಇದರ ಬಗ್ಗೆ ಬೇವಿನಹಳ್ಳಿ ಶಾಸನವು ಚಾಲುಕ್ಯರ ವಂಶಾವಳಿಯನ್ನು ನೀಡಿದೆ. ಇದರಿಂದ ಬಾದಾಮಿ ಚಾಲುಕ್ಯರಿಗೂ ಕಲ್ಯಾಣಿ ಚಾಲುಕ್ಯರಿಗೂ ಮಧ್ಯೆ ಚಿತ್ರದುರ್ಗ ಪ್ರದೇಶದಲ್ಲಿ ಇನ್ನೊಂದು ಚಾಲುಕ್ಯ ವಂಶವು ಆಳುತ್ತಿತ್ತು ಎಂಬ ವಿಚಾರವು ತಿಳಿಯುತ್ತದೆ.

ಕ್ರಿ.ಶ. ೯೭೦ರ ಗಂಜಿಗಟ್ಟಿ ಶಾಸನವು ಸಾಂಪ್ರದಾಯಿಕ ವಿವರಗಳನ್ನು ಬಿಟ್ಟು ನೇರವಾಗಿ ಚಂದಿಯಮ್ಮರಸ ದೇವರಿಗೆ ಭೂಮಿಯನ್ನು ಬಿಟ್ಟನು ಎಂದು ತಿಳಿಸುತ್ತಾರೆ. ಸುಬ್ಗಿಲ್ನಾಡು, ಪಿಟ್ಟಗೆರೆ ಪನ್ನೆರಡು ಗಾವೂಂಡ ದೃಷ್ಟಿಯಿಂದ ಈ ಶಾಸನವನ್ನು ಬಾದಾಮಿ ಚಾಲುಕ್ಯರ ಕಾಲದಲ್ಲಿ ಸೇರಿಸಲಾಗಿದೆ. "ಡಾ. ಬಿ. ರಾಜಶೇಖರಪ್ಪ ಇತಿಹಾಸ ಕಥನದಲ್ಲಿ" ಇದೊಂದು ದಾನ ಶಾಸನವಾಗಿದ್ದು ದಾನವನ್ನು ಸ್ವೀಕರಿಸಿದವರು ಕಾವಳಿಗ ಭಟಾರರು, ಕಾಪಾಲಿಕ ಸ್ವಾಮಿಗಳು ಎಂದು ತಿಳಿದುಬರುತ್ತದೆ.

ಚಿತ್ರದುರ್ಗ ಪ್ರದೇಶದಲ್ಲಿ ಕಾಪಾಲಿಕ ಪಂತವು ಕ್ರಿ. ಶ. ೭ ಮತ್ತು ೮ನೇ ಶತಮಾನದ ಹೊತ್ತಿಗೆ ಇದ್ದುದ್ದು ಸ್ಪಷ್ಟವಾಗುತ್ತದೆ. ಆದರು ಕರ್ನಾಟಕದಲ್ಲಿ ಕೌಳರು ಅಥವಾ ಕಾಪಾಲಿಕರ ಚಟುವಟಿಕೆಯ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ. ಬಾದಾಮಿ ಚಾಲುಕ್ಯರ ಮಾಂಡಲಿಕರಾಗಿ ಆಡಳಿತ ನೆಡೆಸಿದ್ದ ರಾಷ್ಟ್ರಕೂಟರು ಪ್ರಬಲರಾಗಿ ಮೊದಲು ಬಾದಾಮಿಯ ಚಾಲುಕ್ಯರನ್ನು ಸೋಲಿಸಿ ಕ್ರಮೇಣ ದಕ್ಷಿಣ ಭಾರತದ ಬಹಳಷ್ಟು ಪ್ರದೇಶಗಳನ್ನು ಆಕ್ರಮಿಸಿಕೊಂಡರು.

ಬಾದಾಮಿ ಚಾಲುಕ್ಯರ ಆರ್ಥಿಕ ವ್ಯವಸ್ಥೆ

ಚಾಲುಕ್ಯರ ಇತಿಹಾಸವನ್ನು ನೋಡುವುದಾದರೆ ಬಹುಮುಖ್ಯವಾಗಿ ಅವರ ಅರ್ಥವ್ಯವಸ್ಥೆಯು ಮುಖ್ಯವಾಗಿ ಕಂಡುಬರುತ್ತದೆ. ಇಲ್ಲಿ ಚಾಲುಕ್ಯರ ಕಾಲದಲ್ಲಿ ಭೂಮಿಯ ಒಡೆಯ ರಾಜನು ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಯೊ ಎಂಬುದು ಸ್ಪಷ್ಟವಿಲ್ಲ. ರಾಜ್ಯ ರಾಜನದು ಅದರೊಳಗಿನ ಎಲ್ಲಾ

ಭೂಮಿಯು ರಾಜನ ಒಡೆತನಕ್ಕೆ ಸೇರಿದ್ದೆಂದೂ ಕೆಲವರ ಅಭಿಪ್ರಾಯ ಏಕೆಂದರೆ ಇಡಿ ಹಳ್ಳಿಯನ್ನೇ ರಾಜನು ದಾನಮಾಡಿರುವುದನ್ನು ಶಾಸನಗಳಲ್ಲಿ ಕಾಣುತ್ತೆವೆ.

ಚಳುಕ್ಯರ ಬಹುಪಾಲು ಶಾಸನಗಳು "ಬ್ರಹ್ಮದೇಯಾ" ದಾನಗಳನ್ನು ಕುರಿತು ಇವೆ. ಬ್ರಾಹ್ಮಣರಿಗೆ ಕೊಡಲಾದ ದತ್ತಿಗಳನ್ನು ಬ್ರಹ್ಮದೇಯಾಗಳೆನ್ನುತ್ತಾರೆ. ಹೀಗೆ ಕೊಡಲಾದ ಭೂದಾನಗಳು ಗ್ರಾಮದ ಶೈಕ್ಷಣಿಕ, ಧಾರ್ಮಿಕ ಬೆಳವಣಿಗೆಗೆ ಮುಖ್ಯ ಸಾಧನಗಳಾಗಿದ್ದವು. ದಾನವಾಗಿ ಪಡೆದ ಭೂಮಿಗೆ ತೆರಿಗೆ ವಿನಾಯಿತಿ ಇರುವುದು ರೂಢಿಯಾಗಿತ್ತು. ಇಮ್ಮಡಿ ಪುಲಕೇಶಿಯ ಹೈದ್ರಾಬಾದ ಮತ್ತು ಪೆದ್ದವಡಗೂರು ಶಾಸನಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ.

ಭೂಮಿಯ ವಿಧಗಳು:

ಚಳುಕ್ಯರ ಶಾಸನಗಳಲ್ಲಿ ನಾಲ್ಕು ಬಗೆಯ ಭೂ ವಿಧಗಳನ್ನು ಗಮನಿಸಬಹುದು. ೧ ಗದ್ದೆ (ಹಸಿನೆಲ), ೨ ಬೆದ್ದಲೆ (ಒಣನೆಲ), ೩ ತೋಟದ ನೆಲ, ೪ ಬರಡು ನೆಲ. ವಿಜಯಾದಿತ್ಯನ ಬೆಟಪಳ್ಳಿ ಶಾಸನದಲ್ಲಿ ಈ ವಿಧಗಳನ್ನು ಕಾಣಬಹುದು. ಅಲ್ಲಿ ಕೊಡಲಾದ ಭೂದಾನವು ೨೫ ಮತ್ತರ ಕಪ್ಪು ಮಣ್ಣು, ೫೦ ಮತ್ತರ ಕೆಂಪು ಮಣ್ಣು, ೩೬ ಮಡಿ ಕಾಡನ್ನು ೧ ಮತ್ತರ (ಹಸಿನೆಲ) ಮತ್ತು ೨ ಮತ್ತರ ತೋಟವನ್ನು ಒಳಗೊಂಡಿದೆ. ಇಲ್ಲಿ ಮಣ್ಣಿನ ಗುಣ ನೀರಾವರಿ ಸೌಲಭ್ಯ ಹಾಗೂ ಬೆಳೆಯ ಆಧಾರದ ಮೇಲೆ ಭೂಪ್ರಕಾರಗಳನ್ನು ವಿಂಗಡಿಸಿದುದು ಇದರಿಂದ ತಿಳಿಯುತ್ತದೆ. ೨೬ ಮಡಿ ಕಾಡನ್ನು ನೀಡಿದುದು, ಕೃಷಿ ವಿಸ್ತರಣಾ ನೀತಿಯನ್ನು ಸೂಚಿಸುತ್ತದೆ. ಗದ್ದೆಯನ್ನು ಮಾತ್ರ ಕೇವಲ ೧ ಮತ್ತರ ನೀಡಿದುದು, ಅದು ಹೆಚ್ಚು ಮೌಲೀಕವಾಗಿತ್ತೆಂಬುದನ್ನು ಸೂಚಿಸುತ್ತದೆ. ಹಸಿ ನೆಲದ ಪ್ರಯೋಜನವನ್ನು ಅವರು ಚನ್ನಾಗಿ ಬಲ್ಲವರಾಗಿದ್ದರು. "ಇಮ್ಮಡಿ ಕೀರ್ತಿವರ್ಮನ" ಆಡೂರು ಶಾಸನದಲ್ಲಿ ಗದ್ದೆಯ ಪ್ರಸ್ತಾಪವಿದೆ. ಮೊದಲನೆಯ ವಿಕ್ರಮಾದಿತ್ಯನ ಶಾಸನವೊಂದರಲ್ಲಿ ವ್ರೀಹಿ ಕ್ಷೇತ್ರದ ದಾನವನ್ನು ಉಲ್ಲೇಖಿಸಲಾಗಿದೆ. ವ್ರೀಹಿ ಎಂದರೆ ನೆಲ್ಲು. ವ್ರೀಹಿ ಕ್ಷೇತ್ರವು ಹಸಿ ನೆಲವೇ ಆಗಿರುತ್ತದೆ. ಪೆದ್ದವಡಗೂರು ಶಾಸನದಲ್ಲಿ ೧೨ ಮತ್ತರ ಹಸಿ ನೆಲವನ್ನು ಶಾಸನ ಬರೆದ ಮಹೇಂದ್ರಪಲ್ಲವಾಚರಿಗೆ ದಾನ ನೀಡಿದುದು ದಾಖಲಾಗಿದೆ.

ಮೊದಲನೆಯ ವಿಕ್ರಮಾಧಿತ್ಯನ ಶಾಸನವೊಂದು ಆತನು ರತ್ನಗಿರಿಯಲ್ಲಿ ೧೨೦ ನಿವರ್ತನ ಬೆದ್ದಲೆ ಭೂಮಿಯನ್ನು ದಾನಮಾಡಿದನ್ನು ಉಲ್ಲೇಖಿಸಿದೆ. ಶಾಸನಗಳಲ್ಲಿ ಕಾಣಿಸಿಕೊಳ್ಳುವ ಕರಿನೆಲವನ್ನು ಒಣ ಭೂಮಿ ಎಂದು ಗುರ್ತಿಸಬಹುದು. ಮತ್ತೊಂದು ಶಾಸನದಲ್ಲಿ ಹೂವಿನ ತೋಟವನ್ನು "ಹೂವಿನ ಗದ್ದೆ" ಎಂದೂ ಮಾವಿನ ತೋಟವನ್ನು "ಮಾವಿನ ಗದ್ದೆ" ಎಂದು ಕರೆಯಲಾಗಿದೆ.

ಗ್ರಾಮೀಣ ಆರ್ಥಿಕ ಜೀವನದಲ್ಲಿ ಕೃಷಿಯು ಮುಖ್ಯವಾದ ಘಟಕ. ಕೃಷಿಗೆ ಭೂಮಿಯಷ್ಟೇ ನೀರೂ ಅವಶ್ಯಕವಾಗಿದ್ದರಿಂದ ರಾಜರು ಕೆರೆ, ಬಾವಿಗಳನ್ನು ಕಟ್ಟಿಸಲೂ ಮುಂದಾದರು. ಕಂದಂಬ ಮಯೂರ ವರ್ಮನ ಚಂದ್ರವಳ್ಳಿ ಶಾಸನದಲ್ಲಿ ಮತ್ತು ಕಾಕುತ್ಸವರ್ಮನ ತಾಳಗುಂದ ಶಾಸನದಲ್ಲಿ ಕೆರೆ

ನಿರ್ಮಾಣದ ಪ್ರಸ್ತಾಪವಿರುವುದನ್ನು ನೋಡಿದ್ದೇವೆ. ಅದೇರೀತಿ ಚಾಲುಕ್ಯರು ಸಹ ಹೆಚ್ಚಿನ ಕೆರೆಗಳನ್ನು ಕಟ್ಟಿಸಿರುವುದನ್ನು ನಾವು ನೋಡಬಹುದು. ಮೊದಲನೆಯ ಪುಲಕೇಶಿಯ "ಆಲ್ತೆಂ ಶಾಸನ"ದಲ್ಲಿ ನಾಲ್ಕಾರು ತಟಾಕಗಳ ಉಲ್ಲೇಖವಿದೆ. ಚಾಲುಕ್ಯರ ಕಾಲದ ಕೃಷಿ ಉತ್ಪನ್ನಗಳನ್ನು ತಿಳಿಯುವುದಾದರೆ ಶಾಸನಗಳು ಆಧಾರವಾಗಿವೆ. ಇವರು ಜೋಳ, ರಾಗಿ, ಗೋಧಿ ಮೊದಲಾದ ದಾನ್ಯಗಳು ಮತ್ತು ಮಾವು, ಹಲಸು, ಹುಣಸೆ, ದಾಳಿಂಬೆ ಮುಂತಾದವುಗಳನ್ನು ಬೆಳೆಯುತ್ತಿದ್ದದು ಕಂಡುಬರುತ್ತದೆ.

ಅಳತೆಮಾನಗಳು

ಚಾಲುಕ್ಯರ ಕಾಲದಲ್ಲಿ ಭೂಮಿಯನ್ನು ನಿವರ್ತನ ಎಂಬ ಮಾನದಿಂದ ಅಳೆಯಲಾಗುತ್ತಿತ್ತು. ಸಂಸ್ಕೃತ ಶಾಸನಗಳಲ್ಲಿ ನಿವರ್ತನವು ಕಾಣಿಸಿಕೊಂಡರೆ, ಕನ್ನಡ ಶಾಸನಗಳಲ್ಲಿ "ಮತ್ತರ್" ಎಂದು ತಿಳಿಯಬಹುದು. ನಿವರ್ತನ ಅಥವಾ 'ಮತ್ತರ್'ಗೆ ಸಮನಾದ ಆಧುನಿಕ ಅಳತೆಗಳನ್ನು ಕಂಡುಹಿಡಿಯುವಲ್ಲಿ ವಿದ್ವಾಂಸರು ಈಗಲೂ ಸಂಶೋಧನಾ ಆದಿಯಲ್ಲಿದ್ದಾರೆ. ಒಂದು ನಿವರ್ತನವು ಇಂದಿನ ಐದು ಎಕರೆಗಳ ವಿಸ್ತೀರ್ಣವನ್ನು ಹೊಂದಿದೆ ಎಂಬ 'ಎ.ಎಸ್.ಅಲ್ಟೇಕರ' ಅಭಿಪ್ರಾಯವನ್ನು ಸದ್ಯಕ್ಕೆ ಒಪ್ಪಲಾಗಿದೆ.

ಕೆಲವು ಶಾಸನಗಳಲ್ಲಿ ಪನ್ನಾಸ, ಪನ್ನಾವೀಸಾ ಮತ್ತು ವೀಸಾ ಅಳೆತೆಗಳೂ ಬಳಕೆಯಾಗಿವೆ. ಇಮ್ಮಡಿ ಪುಲಕೇಶಿಯ "ತಮ್ಮೆಯನೂರು ಶಾಸನದಲ್ಲಿ ಪನ್ನಾಸ ಪದದ ಪ್ರಯೋಗವನ್ನು ಕಾಣುತ್ತೇವೆ. ಮಂಗಳೇಶನ ಬಾದಾಮಿ ಶಾಸನದಲ್ಲಿ ಮಾಲಕಾರರಿಗೆ ಅರ್ಧವಿಸ ನೀಡಿದುದನ್ನು ಹೇಳಿದೆ. ಐಹೊಳೆಯ ದುರ್ಗ ಗುಡಿಯ ಶಾಸನದಲ್ಲಿ ಮಣ, ಪೇರು, ವೀಸಾ, ಭಂಡ ಪೇರುಗಳ ಪ್ರಸ್ತಾಪವಿದೆ. ಸಲಗೆ, ಕುಳ, ಕೊಳಗ, ಖಂಡುಗ, ಮಡಿ, ಸೊಂತಿಗೆ, ಎಂಬ ಮಾನಗಳು ಕಾಣಿಸಿಕೊಳ್ಳುತ್ತವೆ. ಮಣ ಎಂಬುದು ಈಗಿನ ಕಾಲದ ಮಣ(=೧೧.೨ ಕೆ.ಜಿ.) ಪೇರು ಎಂಬುವುದು ೬೪ ಸೇರುಗಳುಳ್ಳ ಚೀಲ. ವೀಸ (ವೀಸೆ) ಐದು ಸೇರುಗಳಿಗೆ ಸಮವಾದುದು. ವೀಸೆ ಇಲ್ಲಿ ತೂಕದ ಮಾನ, ವೀಸಾ ಎಂಬುದು ಹಣದ ಮಾನವಾಗಿತ್ತು. ೨೦೦ವೀಸೆಗಳು ಒಂದು ಗದ್ಯಾಣಕ್ಕೆ ಸಮ. ವೀಸವನ್ನು ವಿಸ್ತೀರ್ಣದ ಮಾನವೆಂದು ವೀಸೆಯನ್ನು ತೂಕದ ಮಾನವೆಂದು ವೀಸವನ್ನು ಹಣದ ಮಾನವೆಂದು ಬಳಸಿದಂತೆ ಕಾಣುತ್ತದೆ. ಭಂಡಪೇರು ಒಂದು ಬಂಡಿಯ ಹೊರೆಗೆ ಸಮವಾದುದು. ಕುಳ, (ಕುಳಗ) ಅಥವಾ ಕೊಳಗ ೬೪ ಸೇರುಗಳಿಗೆ ಸರಿಯಾದುದು. ಸೊಂತಿಗೆ ಎಂಬುದು ದ್ರವದ ಮಾಪನವಾಗಿತ್ತು.

ಬಾದಾಮಿ ಚಾಲುಕ್ಯರ ತೆರಿಗೆ ಪದ್ಧತಿ

ಚಾಲುಕ್ಯರ ಆಳ್ವಿಕೆಯ ಕಾಲದ ದಾನ ಶಾಸನಗಳನ್ನು ಅವಲೋಕಿಸಿದರೆ ಆ ಕಾಲದಲ್ಲಿ ಪ್ರಚಲಿತವಿದ್ದ ತೆರಿಗೆ ಸುಂಕಗಳ ಬಗ್ಗೆ ವಿವರಗಳು ಲಭ್ಯ ವಾಗುತ್ತವೆ ಭೂ ಕಂದಾಯದ ಜೊತೆಗೆ ಆಸ್ತಿ ತೆರಿಗೆ, ವೃತ್ತಿ ತೆರಿಗೆ, ವಾಣಿಜ್ಯ ತೆರಿಗೆ, ಸಾಮಾಜಿಕ ತೆರಿಗೆ, ಮೊದಲಾದವುಗಳು ಅಸ್ತಿತ್ವದಲ್ಲಿ ಇದ್ದುದನ್ನು ಮನಗಾಣುತ್ತವೆ. ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರಿಗಳಿದ್ದದ್ದು ಶಾಸನಗಳಿಂದ ಸ್ಪಷ್ಟವಾಗಿದೆ. ಇಮ್ಮಡಿ

ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ರೇವಡಿ ಎಂಬಾತನು ಒಡ್ಡರಾವುಳ, ವಡ್ಡರಾವುಳ ತೆರಿಗೆಗೆ ಸಂಬಂಧಿಸಿದ ಅಧಿಕಾರಿ ಯಾಗಿದ್ದು ಐಹೊಳೆಯ ದುರ್ಗದಗುಡಿ ಶಾಸನದಿಂದ ತಿಳಿದುಬರುತ್ತದೆ.

ಸ್ವಂತ ಮನೆಯುಳ್ಳವರು ಮತ್ತು ಜಾಗವುಳ್ಳವರು ತಮ್ಮ ಆಸ್ತಿಯ ಮೇಲೆ ತೆರಿಗೆ ಕೊಡಬೇಕಾಗಿರುತಿತ್ತು. ಯುವರಾಜ ವಿಕ್ರಮಾದಿತ್ಯನ ಲಕ್ಷ್ಮೇಶ್ವರ ಶಾಸನವು ಪೂಜೆಗಳಿಗೆ ಕೊಡಬೇಕಾದ ಮನೆ ತೆರಿಗೆಗಳ ಬಗ್ಗೆ ತ್ರಿಳಿಸುತ್ತದೆ. ಕಾಂದರ್ಬ ಎಂಬ ಹೆಸರಿನ ಅಧಿಕಾರಿಯು ಪೆರಿಯ ಒಸಗೆ, ಉಪ್ಪು ಇವುಗಳ ಹಣವನ್ನು ಹಾಗೂ ಅಪುತ್ರಕ ಧನವನ್ನು ನಾಗರಖಂಡ ೭೦ ಜೇಜಗುರು ೭೦ ಎಂಬೇರಡು ಜಿಲ್ಲೆಗಳಿಂದ ರಾಜನ ಪರವಾಗಿ ಸಂಗ್ರಹಿಸುತ್ತಿದ್ದ ವಿಷಯವು ವಿನಯಾದಿತ್ಯನ ಶಾಸನ ತಿಳಿಸುತ್ತದೆ.

ಪೆರಿಯ ಒಸಗೆ, ಮಹೋತ್ಸವಗಳ ಬಗೆಗಿನ ತೆರಿಗೆ ಇರಬಹುದು. ಮದುವೆ ಮುಂಜಿವೆಗೆ ಮೊದಲಾದ ಧಾರ್ಮಿಕ ಸಂಸ್ಕಾರಗಳಿಗೆ ತೆರಿಗೆಯನ್ನು ವಿಧಿಸಲಾಗುತಿತ್ತು. ತೆರಿಗೆಗಳು ಹಣದರೂಪದಲ್ಲಿಯೂ ಉತ್ಪನ್ನರೂಪದಲ್ಲಿಯೂ ಸಂಗ್ರಹವಾಗುತ್ತಿದ್ದವು.

ನಾಣ್ಯ

ನಾಣ್ಯ ಪದ್ಧತಿಯ ಬಗ್ಗೆ ಹೆಚ್ಚಿನ ವಿವರಗಳಿಲ್ಲ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ವಿಷಯದಲ್ಲಿಯು ಅಷ್ಟೇ ಹೆಚ್ಚಿನ ಸಂಖ್ಯೆಯಲ್ಲಿ ಈ ಅರಸನ ನಾಣ್ಯಗಳು ದೊರೆಯದೆ ಇದ್ದುದ್ದಕ್ಕೆ ಅವರ ಚಿನ್ನದ ನಾಣ್ಯಗಳು ಹೆಚ್ಚಾಗಿರುವುದೆ ಕಾರಣವಾಗಿರಬೇಕು. ಹೀಗೆ ಚಾಳುಕ್ಯರ ನಾಣ್ಯ ವ್ಯವಸ್ಥೆಯ ಬಗ್ಗೆ ಶಾಸನಗಳಿಂದ ತಿಳಿಯಬಹುದು.

೨.೫ ರಾಷ್ಟ್ರಕೂಟರು

೮ನೆಯ ಶತಮಾನದ ಮಧ್ಯಭಾಗದಿಂದ ೧೦ನೆ ಶತಮಾನದ ಕೊನೆಯ ಭಾಗದವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗಗಳನ್ನು ಆಳಿದ ರಾಜಮನೆತನ ಪ್ರಾರಂಭದಲ್ಲಿ ಚಾಲುಕ್ಯರ ಸ್ವ ಶ್ರಮದಿಂದ ರಾಜ್ಯಸಾಧಿಸಿ ಚಾಳುಕ್ಯರ ರಾಜಕೀಯ ಉತ್ತರಾಧಿಕಾರಿಗಳಾಗಿ ಒಂದನೇ ಕೃಷ್ಣ, ದೃವ, ಮೂರನೇ ಗೋವಿಂದ, ಒಂದನೇ ಅಮೋಘವರ್ಷ(ನೃಪತುಂಗ) ಮೂರನೇ ಕೃಷ್ಣ ಮುಂತಾದ ಹೆಸರಾಂತ ರಾಜರ ಪರಿಶ್ರಮದಿಂದ ಕರ್ನಾಟಕದ ಕ್ಷಾತ್ರ ಪ್ರಭುತ್ವವನ್ನು ದಕ್ಷಿಣ ಭಾರತದಲ್ಲೆ ಅಷ್ಟೇ ಅಲ್ಲದೆ ಉತ್ತರ ಭಾರತದಲ್ಲಿಯೂ ಒಂದುಕಡೆ ಕಾನೂಜಿನವರೆಗೂ ಇನ್ನೊಂದುಕಡೆ ಮಿಥಿಲೆಯವರೆಗೂ ಹಬ್ಬಿಸಿ ಸಮಕಾಲೀನ ಭಾರತೀಯ ರಾಜಕೀಯದಲ್ಲೆ ಪರಮೋಚ್ಚ ಶಕ್ತಿಯಾಗಿ ಮೆರೆದ ಕನ್ನಡ ಮೂಲದ ರಾಜವಂಶ. ಈ ವಂಶದ ಇತಿಹಾಸ ಕರ್ನಾಟಕದಲ್ಲಿ ಒಂದು ಹೆಮ್ಮೆಯ ರಾಜಮನೆತನವೆಂದು ತಿಳಿದುಬರುತ್ತದೆ.

ರಾಷ್ಟ್ರಕೂಟರ ಮೂಲ

ರಾಷ್ಟ್ರಕೂಟ ಇದೊಂದು ಅಧಿಕಾರ ಸೂಚಕ ಪದ. ಇದರ ಪ್ರಾಚೀನತೆಯನ್ನು ಮೌರ್ಯರ ಶಾಸನಗಳಲ್ಲಿ ಬಳಸಲಾದ 'ರಾಷ್ಟ್ರಿಕ' ಎಂಬ ಮಾತಿನಲ್ಲಿ ಗುರುತಿಸಬಹುದು. ಈ ಪದ ಪ್ರಾಕೃತದಲ್ಲಿ 'ರಠಿ' ಎಂದಾಯಿತು. ರಠಿ, ಮಹಾರಠಿ ಎಂದು ಬಿರುದಾಂಕಿತರಾದ ಕೆಲವು ಸಾಮಂತರು ದಕ್ಷಿಣ ಹಾಗೂ ಪಶ್ಚಿಮ ಭಾರತದಲ್ಲಿ ಆಳುತಿದದ್ದು ತಿಳಿದುಬರುತ್ತದೆ. ರಾಷ್ಟ್ರಕೂಟ ಎಂಬುದು ಸಂಸ್ಕೃತದ ರಾಷ್ಟ್ರ(ದೇಶ, ಪ್ರದೇಶ) ಮತ್ತು ಕೂಟ(ಮುಖ್ಯಸ್ಥ) ಎಂಬ ಪದಗಳಿಂದ ಉಂಟಾದ ನಾಮಪದ. ಗ್ರಾಮಕೂಟ(ಗಾವುಂಡ ಗೌಡ) ಗ್ರಾಮಕ್ಕೆ ಅಧಿಪತಿ ಇದ್ದಂತೆ. ರಾಷ್ಟ್ರಕೂಟ ಒಂದು ಪ್ರದೇಶದ ಅಧಿಪತಿ. ಆಂಧ್ರಪ್ರದೇಶದ ಪ್ರಾಚೀನ ಶಾಸನಗಳಲ್ಲಿ ರಟ್ಟಂಗಡಿ ಎಂಬ ಹೆಸರಿನ ಪ್ರಾದೇಶಿಕ ಆಧಿಕಾರಿ ಕಾಣಿಸಿಕೊಂಡಿದ್ದಾನೆ. ಇದು ಸಹ ರಾಷ್ಟ್ರಕೂಟಕ್ಕೆ ಸಮಾನ ಪದ.[೬]

ವಾಸ್ತವದಲ್ಲಿ ಅಕಾಲವರ್ಷ, ದಾರಾವರ್ಷ, ಪ್ರಭೂತ ವರ್ಷ, ಅಮೋಘವರ್ಷ ಹಾಗೂ ಸುವರ್ಣ ವರ್ಷ ಎಂಬಲ್ಲಿನ 'ವರ್ಷ' 'ವೃಷಿ' ಎಂಬ ಶಬ್ದದ ತದ್ಬವರೂಪ ವೃಷ್ಟಿ> ರಿಷ್ಟಿ> ರಟ್ಟ ಆಗಿದೆ. ಇಲ್ಲಿ ರಟ್ಟ ಎಂಬ ಹಳೆಯ ಶಾಸ್ತ್ರವನ್ನು ಜ್ಞಾಪಿಸಿಕೊಳ್ಳಬಹುದು.[೭] ಉಲ್ಲೇಖ ಈ ಶಾಸನದಲ್ಲಿ ಇದೆ. ಕಡಂಬಗಳಿಗೆ ನಾಡು ಸಾವಿರ ತುಳುನಾಡಿನ ಐದು ನಾಡನ್ನು ನಗಣ್ಣಯ್ಯನ ಕನ್ನೇಶ್ವರಕ್ಕೆ ಗುಂಜಿಗನೂರು–೧೫೦ರ ಚಾಮರಮ್ಮನು ಬಿಟ್ಟುಕೊಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಕನ್ನಯ್ಯ ಅಬ್ಬೆ, ಪೊಲೆಯಬ್ಬೆ, ಮತಉತ, ಸೂದ್ರಕೈಯ್ಯರು, ಆಡನೂರಿನ ಪಿರಿಯ ಕೆರೆಯ ಕೆಳಗೆ ತೆಂಕಣ ಎರಡು, ಕಡಂಬನ ನಾಲ್ಕು, ಮತ್ತರ ಭೂಮಿಯನ್ನ ಶಾಂತಿಭಟಾರರಿಗೆ ಮೂವರು ಗಾವುಂಡರು ಮತ್ತು ಕಾಕಂಬಳ್ಳಿ ಕಂಬಯ್ಯನು ದಾನ ಮಾಡಿದ್ದನ್ನು ತಿಳಿಸುತ್ತದೆ. ಇದರಿಂದ ರಾಷ್ಟ್ರಕೂಟರ ಆಡಳಿತವು ಚಿತ್ರದುರ್ಗ ಭಾಗದಲ್ಲಿದದ್ದು ತಿಳಿಯುತ್ತದೆ.

ಒಟ್ಟಾರೆಯಾಗಿ ಕೆಲವು ವಿಚಾರಗಳಬಗ್ಗೆ ಗಮಸಿದಾಗ ಇಲ್ಲಿ ದೊರಕುವ ಮಾಹಿತಿಯ ಪ್ರಕಾರ ಕೀಳ್ಗುಂಟೆಯಾಗಿರುವ ಚಂದಿಯಮ್ಮ ಅರಸನು ಮತ್ತು ಕ್ರಿ. ಶ. ೯೭೭ರ ಗಂಜಿಗಟ್ಟೆ ಶಾಸನದಲ್ಲಿ ಬರುವ ಚಂದಿಯಮ್ಮ ಅರಸ ಇಬ್ಬರು ಒಂದೇ ಎಂದು ಸ್ಪಷ್ಟವಾಗುತ್ತದೆ.

ಇದರಲ್ಲಿ ಎರಡನೇಯ ಗೋವಿಂದನನ್ನು ಬಿಟ್ಟು ಉಳಿದವರ ಉಲ್ಲೇಖವಿದೆ. ಮೊದಲಿಗೆ ಬರುವ ದೇವರ ಕನ್ನಡ ಆಕಾಲವರ್ಷ ೧೧ ಆಗಿದ್ದು ಎರಡೆಯವನು ಇಂದ್ರನ ಮಗ. ಬಹುಶ: ನಾಲ್ಕನೇಯ ಗೋವಿಂದನಾಗಿದ್ದಾನೆ. ಹಾಗೆಯೇ, ಇರವ ಕನ್ನರನು ಬಡ್ಡಿಗನ ಮಗನಾಗಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ಸಿಂಘಣದೇವ ಎನ್ನುವ ರಟ್ಟದೊರೆ ಚಾಲುಕ್ಯರ ಕೈಕೆಳಗೆ ಆಳ್ವೀಕೆ ನಡೆಸುತ್ತಿದ್ದ ಉಲ್ಲೇಖವೂ ಇದೆ.

ಪ್ರಾದೇಶಿಕವಾಗಿ ಕದಂಬಗಳಿಗೆ ಪ್ರದೇಶದಲ್ಲಿ ಅನೇಕ ಅಗ್ರಹಾರಗಳಿದ್ದವು. ಅದರಲ್ಲಿ ೩೮ ಅಗ್ರಹಾರಗಳು ಪ್ರಸಿದ್ಧವಾಗಿದ್ದವು. ಕದಂಬಗಳಿಗೆ ಪ್ರದೇಶವು ವಿಸ್ತಾರವಾದ ಭೂ ಪ್ರದೇಶವನ್ನು ಹೊಂದಿದ್ದು ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲೇ ಒಂದು ಸಾವಿರ ಗ್ರಾಮಗಳ ಪರಿಮಿತಿಯನ್ನು ಹೊಂದಿತ್ತು ಎಂದು ತಿಳಿದುಬರುತ್ತದೆ. ರಾಷ್ಟ್ರಕೂಟರ ಕಾಲದ ಶಾಸನಗಳನ್ನು ಗಮನಿಸಿದಾಗ ಚಿತ್ರದುರ್ಗ ಜಿಲ್ಲೆ ಸಾಂಸ್ಕೃತಿಕವಾಗಿ ಬಹಳ ಮುಂದುವರೆದಿತ್ತು, ಎಂಬ ಅಂಶ ತಿಳಿದುಬರುತ್ತದೆ.

ಕ್ರಿ. ಶ. ೯೬೪ ಆಡನೂರು ಶಾಸನದಲ್ಲಿ ನೋಡುವುದಾದರೆ ಶ್ರೀಮತ್ ಕೊಕಯ್ಯನು ಕದಂಬಗಳಿಗೆ ನಾಡು ಸಾವಿರವನ್ನು ಆಳುತ್ತಿದ್ದಾಗ ಕನ್ನಯ್ಯನು, ಆಡನೂರನ್ನು ಅಭ್ಯಂತರ ಸಿದ್ಧಿಯಾಗಿ ಏಳೂಂ ಗೌಡಳಂ ಸಾಯಿಂದ ಕೋಮಾರಗದ್ಯಾಣವನ್ನು "ಅಂದರೇ ಏಳು ಗ್ರಾಮಗಳ ಗೌಡಿಕೆಯನ್ನು ಮಾಡುತ್ತಿರುವಾಗ ಅವರಬ್ಬೆ ಹೆಬ್ಬರಿಸಿಯೂ ಕಾನ್ತೇಶ್ವರವೆಂದು, ಉಮಾಮಹೇಶ್ವರ ದೇವರನ್ನು ಪ್ರತಿಷ್ಠೆ ಮಾಡಿಸಿ, ಅರಯ ಕೆರೆಯ ಭೂ ತೋಟಗಳನ್ನು ಅಮೃತರಾಸಿ ಭಟಾರರಿಗೆ ಗಾವೂಂಡಗಳು ಮೂರು ಕೊಟ್ಟು ಉಳಿದವನ್ನು ಸರ್ವ ಪರಿವಾರವಾಗಿ ಬಿಟ್ಟರು. ಇದಕ್ಕೆ ಸಾಕ್ಷೀಯಾಗಿ ಶಾಂತಾ ಭಟ್ಟಾರರೂ ಉತ್ತಮರಾಸಿ, ಬಟ್ಟಾರರೂ ಬುಯಳಗಾವುಂಡ ಬಿಜಯತ ಗಾವೂಂಡ ಇನ್ನೂ ಹದಿಮೂರು ಜನರು ಇದ್ದಾರೆ. ಚಲ್ಲಪ್ಪಯ್ಯನೆಂಬ ವ್ಯಕ್ತಿ ಶಾಸನವನ್ನು ಬರೆಸಿದವನು.[೮] ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ.

ಜೈನ, ಕಾಳಾಮುಖ, ವೈದಿಕ ಮತಗಳು ಯಾವುದೇ ಸಂಘರ್ಷಗಳಿಲ್ಲದೆ. ಸಾಮರಸ್ಯತೆಯಿಂದಿತ್ತು. ಎನ್ನುವ ಮಾಹಿತಿಗಳು ಧರ್ಮ ಸಮನ್ವಯತೆಯನ್ನು ಎತ್ತಿಹಿಡಿಯುತ್ತವೆ. ಸಾಂಸ್ಕೃತಿಕ, ಸಾಮಾಜಿಕ ಉದ್ಧೇಶಗಳಿಗಾಗಿ ದಾನನೀಡಿ ಶಾಸನಗಳನ್ನು ಹಾಕಿಸಿದ್ದಾಗ ಈ ದಾನವು ಎಲ್ಲ ದಾರ್ಮಿಕ ಮುಖಂಡರ ಸಮಕ್ಷಮದಲ್ಲಿ ಅವರ ಸಾಕ್ಷಿಯೊಂದಿಗೆ ನೀಡುತ್ತಿದದ್ದು, ಪೂರಕ ಮಾಹಿತಿಯನ್ನು ಒದಗಿಸುತ್ತದೆ. ಹಾಗೇಯೆ ಬೇರೆ ಧರ್ಮದವರಿಗೆ ದಾನ ನೀಡುತ್ತಿದ್ದದ್ದು ಇದಕ್ಕೆ ಸಾಕ್ಷೀಯಾಗಿದೆ.

ರಾಷ್ಟ್ರಕೂಟರ ನಾಣ್ಯ ಪದ್ಧತಿ.

ರಾಷ್ಟ್ರಕೂಟರು ಸಾಮಾನ್ಯವಾಗಿ ಹಲವಾರು ರೀತಿಯ ನಾಣ್ಯಗಳನ್ನು ಹೊಂದಿದ್ದರು ಎಂಬುದು ತಿಳಿದುಬರುತ್ತದೆ. ಅವುಗಳನ್ನು ನಾವು ನೋಡುವುದಾದರೆ ದ್ರಮ್ಮ, ಸುವರ್ಣ, ಗದ್ಯಾಣ, ಕಾಸು, ಕಳಂಜು, ಮುಂಜಾಡಿ, ಮತ್ತು ಅಕ್ಕಂ ಎಂಬ ಹೆಸರಿನ ನಾಣ್ಯಗಳನ್ನು ರಾಷ್ಟ್ರಕೂಟರ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಇವುಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿ ಲಭಿಸುವುದಿಲ್ಲ. ದ್ರಮ್ಮಗಳು ಎರಡು ರೀತಿ ಚಿನ್ನದ ಮತ್ತು ಬೆಳ್ಳಿಯ ದ್ರಮ್ಮಗಳು ಶಾಸನಗಳ ಆಧಾರಗಳ ಮೇಲೆ ಸುವರ್ಣವೆಂಬ ನಾಣ್ಯ ವಿಶೇಷವಾಗಿ ಪ್ರಚಾರದಲ್ಲಿತ್ತೆಂದು ಇದು ತೂಕದ್ದಾಗಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ.

ಒಂದು ಗದ್ಯಾಣಕ್ಕೆ ಎರಡು ಕಳಂಜುಗಳು ಸಮ ಎಂದು ಶಾಸನವೊಂದರಲ್ಲಿ ಹೇಳಿದೆ. ಅಂದರೆ ಇದು ೪೮ ಗ್ರೇನ್ ತೂಕದ್ದಾಗಿರಬೇಕು. ೨೦ ಕಾಸುಗಳಿಗೆ ೭ ಕಳಂಚುಗಳು (ಹವಳ ಮುತ್ತು, ಹಾಗೂ ಸುಗಂಧ ದ್ರವ್ಯಗಳನ್ನು ತೂಗುವಾಗ ಬಳಸುವ ಒಂದು ಚಿಕ್ಕತೂಕದ ಒಂದು ಪ್ರಮಾಣ)ಸಮವೆಂದು ಮತ್ತೊಂದು ಶಾಸನದಿಂದ ತಿಳಿದು ಬರುತ್ತದೆ. ಕಳಂಚು ನಾಣಯದ ಇಪ್ಪತನೆಯ ಒಂದು ಭಾಗದ ನಾಣ್ಯಕ್ಕೆ ಮುಂಜಾಡಿ ಎಂದು ಹೆಸರಿದ್ದಿತು. ಬಹುಶ: ಇದು ಎರಡುವರೆ ಗ್ರೇನ್ ತೂಕದನಾಣ್ಯ ಒಂದು ಕಾಸಿನ ಇಪ್ಪತ್ತನೆಯ ಒಂದು ಭಾಗವೇ ಅಕ್ಕುಂ ಎಂಬ ನಾಣ್ಯ.[೯]

ಮಹಾರಾಷ್ಟ್ರದಲ್ಲಿ ದೊರಕಿದ ಕೆಲವು ನಾಣ್ಯಗಳಲ್ಲಿ ಶ್ರೀ ಕೃಷ್ಣ ರಾಜಸ್ಯ ಎಂಬ ಬರಹವಿದೆ. ಇವು ರಾಷ್ಟ್ರಕೂಟ ಒಂದನೆಯ ಕೃಷ್ಣನ ನಾಣ್ಯಗಳೆಂದು ಕೆಲವರು ಭಾವಿಸಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇವು ಕಳಚೂರಿ ನಾಣ್ಯಗಳೆಂದು ತಿಳಿದು ಬಂದಿದೆ. ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡದಲ್ಲಿ ದೊರಕಿದ್ದು ಅವುಗಳ ಮೇಲಿನ ಬರಹದಲ್ಲಿ ಕಾಕನೂರು ಎಂಬ ಹೆಸರಿದೆ ಎಂದು ಓದಿ ಕೆಲವು ವಿದ್ವಾಂಸರು ಇವು ರಾಷ್ಟ್ರಕೂಟ ಇಮ್ಮಡಿ ಕರ್ಕರಾಜನದ್ದೆಂದು ಅಭಿಪ್ರಾಯಪಟ್ಟರು. ಆದರೆ ಮತ್ತೆ ಕೆಲವರು ಈ ಬರಹವನ್ನು ಕಾಕತೀಯ ಎಂದು. ಒಟ್ಟನಲ್ಲಿ ಈ ವಿಷಯದಲ್ಲಿ ಒಮ್ಮತವಿಲ್ಲ " ಎಂ ಹೆಚ್ ಕೃಷ್ಣ ೫೭.೯ ಗ್ರೇನ್ ತೂಕದ ಕೆಲವು ಚಿನ್ನದ ನಾಣ್ಯಗಳನ್ನು ರಾಷ್ಟ್ರಕೂಟರ ನಾಣ್ಯಗಳೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೦]

೨.೬ ಕಲ್ಯಾಣದ ಚಾಲುಕ್ಯರು

ರಾಷ್ಟ್ರಕೂಟರ ಆಳ್ವಿಕೆಯನ್ನು ಕ್ರಿ. ಶ. ೯೭೩ ರಲ್ಲಿ ಕೊನೆಗಾಣಿಸಿದ ಇಮ್ಮಡಿ ತೈಲ ಅಥವಾ ತೈಲಪನು ಕಲ್ಯಾಣ ಚಾಲುಕ್ಯರ ವಂಶವನ್ನು ಸ್ಥಾಪಿಸಿದ. ಇವರ ಸಾಮ್ರಾಜ್ಯ ಮುಂದೆ ಎರಡು ಶತಮಾನಗಳ ಕಾಲ ಕರ್ನಾಟಕದ ಸಂಸ್ಕೃತಿಯನ್ನು ಸಮೃದ್ದವಾಗಿ ಬೆಳೆಸಿ ಮುಂದುವೆಸಿತು. ಈ ವಂಶದ ಪ್ರಖ್ಯಾತ ಅರಸರಾದ ಇಮ್ಮಡಿ ತೈಲಪ, ಸತ್ಯಾಶ್ರಯ, ಒಂದನೆ ಸೋಮೇಶ್ವರ, ಆರನೇ ವಿಕ್ರಮಾದಿತ್ಯರು ಸಾಮ್ರಾಜ್ಯ ವಿಸ್ತರಣಾಕಾಂಕ್ಷಿಗಳು ಮಾತ್ರವೇ ಅಲ್ಲದೆ ಕಲೆ, ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು.[(೧೧)] ಕಲ್ಯಾಣದ ಚಾಲುಕ್ಯರ ಕಾಲವು ರಾಜಕೀಯವಾಗಿ ಮತ್ತು ಸಾಂಸ್ಕೃತಿಕ ವಾಗಿ ಸಂಕೀರ್ಣ ವಾದ ಕಾಲವೂ ಆಗಿತ್ತು. ಉತ್ತರದಲ್ಲಿ ಮುಸ್ಲಿಮರ ದಾಳಿಗಳಿಂದ ರಾಜಕೀಯ ವ್ಯವಸ್ಥೆ ಶಿಥಿಲವಾಗಿತ್ತು. ದಕ್ಷಿಣದಲ್ಲಿ ಚೋಳರು ಪ್ರಬಲ ರಾಜಕೀಯ ಶಕ್ತಿಯಾಗಿ ರೂಪಗೊಳ್ಳುತ್ತಾ ಚಾಲುಕ್ಯರಿಗೆ ಪ್ರತಿ ಸವಾಲನ್ನು ಒಡ್ಡಿದ್ದರು.

ಕಲ್ಯಾಣದ ಚಾಲುಕ್ಯರ ಕಾಲಾವಧಿ ಕ್ರಿ. ಶ. ೯೭೩ – ೧೧೯೮ ಎಂಬುದು ತಿಳಿದುಬರುತ್ತದೆ ಇವರ ರಾಜಧಾನಿಗಳು ಕ್ಯಾಣ, ಯಾಗ್ಲರ್, ಪೊಚ್ಚಲಕೆರೆ, ಕೊಲನುಪಾಕ. ಪ್ರಮುಖ ಅರಸರು ತೈಲಪ, ೨ನೇ ಜಯಸಿಂಹ ೨ನೇ ಸೋಮೇಶ್ವರ ೪ನೇ ವಿಕ್ರಮಾದಿತ್ಯ ಇವರುಗಳಲ್ಲಿ ಕಲ್ಯಾಣ ಚಾಲುಕ್ಯರಲ್ಲಿ ೬ನೇ

ವಿಕ್ರಮಾದಿತ್ಯನು ಪ್ರಬಲರಾಜ ಎಂಬುದು ಕೆಲವು ಶಾಸನಗಳಿಂದ ನಮಗೆ ತಿಳಿದುಬರುತ್ತದೆ. ಇವರ ಲಾಂಛನ "ವರಾಹ" ವಾಗಿತ್ತು.

ವಿಕ್ರಮಾದಿತ್ಯ (ಕ್ರಿ. ಶ. ೧೦೭೭.ರಿಂದ ೧೧೨೭)

ಕಲ್ಯಾಣದ ಚಾಲುಕ್ಯರ ಬಹು ಪ್ರಸಿದ್ದನಾದ ದೊರೆ ಆರನೇ ವಿಕ್ರಮಾದಿತ್ಯ ಅಥವಾ ವಿಕ್ರಮಾಂಕ. ಇವನು ಪಟ್ಟಾಭಿಷಕ್ತನಾದ ನೆನಪಿಗೆ ತನ್ನ ಹೆಸರಿನಲ್ಲಿ ಒಂದು ಕಾಲಗಣನೆಯನ್ನು ಆರಂಬಿಸಿದನು. ಇದೇ " ಚಾಲುಕ್ಯ ವಿಕ್ರಮಶಕೆ"(೧೨) ಇವನು ೧೦೭೭ ರಂದು ಸಿಂಹಾಸನಾರೂಢನಾದನು. ಇವನ ಖ್ಯಾತಿ ಎಲ್ಲೆಡೆಯು ಹಬ್ಬಿತು ಇವನ ಆಸ್ಥಾನ ಕವಿಯು ಕಾಶ್ಮೀರದ ಪಂಡಿತನೂ ಆದ ಬಿಲ್ಹಣ ಬರೆದ ಐತಿಹಾಸಿಕ ಕಾವ್ಯವಾದ ವಿಕ್ರಮಾಂಕದೇವ ಚರಿತ ಇವನ ಸಾಧನೆಯ ಬಗ್ಗೆ ವಿವರವನ್ನು ನೀಡುತ್ತದೆ.

ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಆರಂಭದ ದಿನಗಳನ್ನು ಪರಿಚಯಿಸಿಕೊಳ್ಳಲು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಬಹುಮುಖ್ಯ ಆಕರಗಳಾಗಿವೆ. ರಾಷ್ಟ್ರಕೂಟರ ಕಾಲದ ಶಾಸನಗಳು ಇಲ್ಲಿ ದೊರೆತಿವೆ. ಅವುಗಳಲ್ಲಿ ಚಾಲುಕ್ಯ ವಂಶದ ಪ್ರಸ್ಥಾಪವು ಆಗಿರುವುದು ಮಹತ್ವ ಪಡೆಯುತ್ತದೆ. ಚಿತ್ರದುರ್ಗ ತಾಲೂಕಿನ ಬೇವಿನಹಳ್ಳಿ ಗ್ರಾಮದ ಒಂದು ಶಾಸನವು ಶಕ ವರ್ಷ(ಕ್ರಿ.ಶ. ೮೯೦)ನ್ನು ಉಲ್ಲೇಖಿಸಿದ್ದು ಅದರಲ್ಲಿ ನಿತ್ಯವರುಷದೇವಾ ಕೊಟ್ಟಿಗ ದೇವನ ಆಳ್ವಿಕೆಯನ್ನು ಪ್ರಸ್ತಾಪಿಸಲಾಗಿದೆ. ಅದೇ ಶಾಸನವು ಚಾಲುಕ್ಯ ವಂಶಾವಳಿಯಲ್ಲಿ ಪ್ರಸಿದ್ಧ ದೊರೆ ವಿಕ್ರಮಾದಿತ್ಯನನ್ನು ಹೆಸರಿಸಿದೆ. ಆ ವಂಶದಲ್ಲಿನ ಇನ್ನೂ ಕೆಲವರ ಹೆಸರನ್ನು ತಿಳಿಸುತ್ತಾ ಗೊಗ್ಗಿಯನ್ನು ಪ್ರಸ್ತಾಪಿಸುವ ಶಾಸನವು ಗೊಗ್ಗಿಯ, ಮಗ ಮಹಾಸಾಮಂತ ಪಂದಿಗನ ಹೆಂಡತಿ ಜಕ್ಕಿ, ಸುಂದರಿಯು ಕಾರಂಭಾಳಿನಲ್ಲಿ ಬಸದಿಯನ್ನು ಮಾಡಿಸಿದ ವಿಷಯವನ್ನು ದಾಖಲಿಸಿದೆ. ಪಂದಿಗ ಆಳುತ್ತಿದ್ದ ಪ್ರದೇಶವು ಕದಂಬಗಳಿಗೆ, ೧೦೦೦ ಕಾವಲಿಗಣದ ಆಚಾರ್ಯ ಅಷ್ಟೋಪವಾಸದ ಶಿಷ್ಯ ರಾಮಚಂದ್ರ ಭಟಾರರಿಗೆ ಎರಡು ಗ್ರಾಮಗಳನ್ನು ದಾನವಾಗಿ ನೀಡಿ ಆ ಗ್ರಾಮಗಳಿಗೆ ೫೦ ಗದ್ಯಾನ ಸಿದ್ದಾಯ ಮಾಡಿಕೊಟ್ಟು ಮೇಲಾಳ್ಕೆ ಮತ್ತು ಕಿರುದೆರೆಯ ವಿನಾಯಿತಿ ನೀಡಲಾಗಿದೆ. ಚಾಲುಕ್ಯರ ಬಗೆಗೆ ನೋಡುವುದಾದರೆ ಶಾಸನಗಳಲ್ಲಿ ಉಲ್ಲೇಖಿತವಾದ ವಿಕ್ರಮಾದಿತ್ಯನು ಕಲ್ಯಾಣ ಚಾಲುಕ್ಯ ವಂಶದ ಮೂಲಪುರುಷನೆಂದು ಪರಿಗಣಿತನಾಗಿರುವ ಎರಡನೇಯ ತೈಲಪನ ತಂದೆಯಾದ ವಿಕ್ರಮಾದಿತ್ಯ ಇರಬೇಕು. ಎಂದು ಅನುಮಾನಿಸಲು ಅವಕಾಶಗಳಿವೆ. ಆದರೆ ಶಾಸನವು ವಿಕ್ರಮಾದಿತ್ಯನ ಮಗ ಪಿಳ್ಳಿಮಯ್ಯ ಅವನಮಗ ಕೊಂಕನ ದೇವ, ಅವನ ಅಣ್ಣನಮಗ ಚಿಕ್ಕಿಯಣ್ಣ ಮತ್ತು ಅವನ ಮಗ ಗೊಗ್ಗಿಯನ್ನು ಉಲ್ಲೇಖಿಸಿದೆ. ಈ ವಂಶಾವಳಿಯನ್ನು ಪರಿಶೀಲಿಸಿದಾಗ ಇದು ಕಲ್ಯಾಣ ಚಾಲುಕ್ಯರ ವಂಶಕ್ಕೆ ಸಂಬಂಧಿಸಿದೆ. ಚಾಲುಕ್ಯರ ಬೇರೊಂದು ಶಾಖೆಯನ್ನು ಪ್ರಸ್ತಾಪಿಸುತ್ತದೆ. ಎಂಬ ಅನುಮಾನ ಬರುತ್ತದೆ. ಈ ಶಾಸನವು ವಿಕ್ರಮಾದಿತ್ಯನ ಮಗ ತೈಲನನ್ನೆ ಹೆಸರಿಸಿದೆ. ಅದೇ ತಾಲೂಕಿನ ಸೊಂಡೆಕೊಳದ ಒಂದು ಶಾಸನವನ್ನು ಆಧರಿಸಿ 'ಡಾ. ಬಾ.ರಾ. ಗೋಪಾಲ' ಅವರು ಶಾಸನದ ಮೂಲ ಪಾಠದಲ್ಲಿ ವಿಕ್ರಮಾದಿತ್ಯನ ಹೆಸರಿಲ್ಲದಿದ್ದರು ಇಂಗ್ಲೀಷ್, ಅನುವಾದದಲ್ಲಿ ವಿಕ್ರಮಾದಿತ್ಯನನ್ನು ಹೆಸರಿಸಿ

ಶಾಸನೋಕ್ತ ಪಂದರಸನು ವಿಕ್ರಮಾದಿತ್ಯನ ಸಾಮಂತನಾಗಿದ್ದನೆಂಬ ತಿರ್ಮಾನ ಸರಿಯಲ್ಲ ಎಂದು ಚರ್ಚಿಸಿದ್ದಾರೆ.

ಕಲ್ಯಾಣ ಚಾಲುಕ್ಯರ ತೆರಿಗೆ ಪದ್ಧತಿ

ಕಲ್ಯಾಣ ಚಾಲುಕ್ಯರ ತೆರಿಗೆ ಪದ್ಧತಿಯು ಎಲ್ಲಾ ರಾಜಮನೆತನಗಳಿಗಿಂತಲು ಉತ್ತಮವಾದ ಸ್ಥಿತಿಯಲ್ಲಿ ಕಂಡುಬರುತ್ತದೆ. ಇವರ ತೆರಿಗೆ ವಿಷಯವಾಗಿ ತಿಳಿಯುವುದಾದರೆ, ಕೃಷಿಯಿಂದ ಉತ್ಪಾದಿಸುವ ವಸ್ತುಗಳ ವ್ಯಾಪಾರ ಕೆಲವೊಮ್ಮೆ ದೇವರಿಗೆ ದಾನದ ರೂಪದ ತೆರಿಗೆಗಳನ್ನು ಸದಾ ನಿಡಬೇಕಾಗುತ್ತಿತ್ತು. ಅಷ್ಟೇ ಏಕೆ? ಆಕಾಲದಲ್ಲಿ ವೇಶ್ಯೆಯರಿಗೂ ಕೂಡಾ ತೆರಿಗೆಗಳನ್ನು ಹಾಕುತ್ತಿದ್ದರು. ತೆರಿಗೆ ಹೆಚ್ಚು ಭಾರವಾಗಿರದೆ ಜನಸಾಮಾನ್ಯರಿಗೆ ತೊಂದರೆ ನೀಡದಂತೆ ಹಿತಮಿತವಾಗಿ ಅವರವರ ಉತ್ಪನ್ನಗಳಿಗೆ ತಕ್ಕ ಹಾಗೆ ತೆರಿಗೆಗಳನ್ನು ನಿಗದಿಪಡೆಸುತ್ತಿದ್ದರು. ಅದೆರೀತಿ ಬರ ಬಂದಾಗ ಅಥವಾ ಬೆಳೆಗಳು ಸರಿಯಾಗಿ ಬಾರದೇ ಹೊದಾಗ ತೆರಿಗೆಗಳನ್ನು ಮನ್ನಾ ಮಾಡುತ್ತಿದ್ದಂತಹ ದಾಖಲೆಗಳಿವೆ.

ಬನವಾಸಿ ಪ್ರದೇಶ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಪ್ರಮುಖ ಕ್ಷೇತ್ರವಾಗಿತ್ತು ಈ ಭಾಗವನ್ನು ನೋಡಿದಾಗ ಅವುಗಳಲ್ಲಿ ಸಾಕಷ್ಟು ವಿಧಗಳು ಮತ್ತು ವೈವಿಧ್ಯತೆಗಳು ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಮಹಾಂತಾಬಿಪತಿ ವೀರನೊಳಂಬ, ಪಲ್ಲವ ಪೆರ್ಮಾನಡಿಜಯಸಿಂಹ ದೇವನು ಆಳುತ್ತಿರಲು ದಂಡನಾಯಕ ಬಾಳದೇವಯ್ಯನು ಈ ಭಾಗದ ದಂಡನಾಯಕನಾಗಿದ್ದಾಗ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ವಡ್ಡಾರಾವುಳ, ಪೆರ್ಜುಂಕ ಮತ್ತು ಎರಡು ಬಿಳ್ಕೊಡೆ ತೆರಿಗೆಗಳನ್ನು ಅನುಭವಿಸುತ್ತಿದ್ದು. ನಾಲ್ಕುಲಕ್ಷ ಅಡಕೆಯ ಬೆಳೆಮೇಲೆ ಸುಂಕವನ್ನು ವಿಧಿಸಿದ್ದರು ಎನ್ನುವುದನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಕ್ರಿ. ಶ. ೧೦೯೮ ರ ಬೇಗೂರು ಅಗ್ರಹಾರದ ಶಾಸನದಲ್ಲಿ ಮಹಾದಂಡನಾಯಕ ಅನಂತಪಾಲನು ಸುಂಕಾಧಿಕಾರಿಯಾಗಿ ವಡ್ಡರಾವುಳ ಸುಂಕವನ್ನು ಸಂಗ್ರಹಿಸುತ್ತಿದ್ದನೆಂದು, ಹಾಗೂ ಅನುಭೊಗಿಸುತ್ತಿದ್ದನೆಂದು ಮತ್ತು ಇಲ್ಲಿ ಬೆಳೆಯುತ್ತಿದ್ದ ೩ ಲಕ್ಷ ಅಡಿಕೆ ಮೇಲೆ ವಡ್ಡರಾವುಳ ಸುಂಕವನ್ನು ಮತ್ತು ಕಿರುಕುಳ ಸುಂಕವನ್ನು ತನಗೆ ಸಲ್ಲಿಸುವಂತೆಯು ಹಾಗೂ ಅಡಕೆಯನ್ನು ಹೇರುವಾಗ ಒಂದು ಹೇರಿಗೆ ಒಂದು ದಸವಂದ ಮತ್ತು ಬಿಳ್ಕೊಡೆಗಳ ವೀಳ್ಯದೆಲೆಯ ಮೇಲೆ ಒಂದು ವೀಸವನ್ನು (ಹಣ) ನೀಡುವುದನ್ನು ತಿಳಿಸುತ್ತದೆ.

ತೂಕಗಳು

ತೂಕಗಳ ವಿಷಯವಾಗಿ ಹೆಚ್ಚಿನ ವಿವರ ಶಾಸನಗಳಲ್ಲಿ ಬಂದಿಲ್ಲ. ಕೊಳಗ ಎಂಬುದೇ ಅಳತೆ ಮಾನಗಳಲ್ಲಿ ಒಂದು. ಉದಾಹರಣೆಗೆ ಚಿಕ್ಕಕೊಳಗ, ಧರ್ಮಕೊಳಗ, ದನಗೊಳಗ, ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಊರಿನ ಪ್ರತಿಯೊಂದು ಕುಳವು ಪೂಜಾರಿಗೆ ಹಾಗೂ ದೋಣಿನೆಡಸುವವರೆಗೆ ನಾವಿಂದನಿಗೆ

ವರ್ಷಕ್ಕೆ ಇಂತಿಷ್ಟು ರಾಗಿ, ಭತ್ತ, ದವಸ, ದಾನ್ಯ ಕೊಡಬೇಕೆಂದು ನಿಗದಿಮಾಡುತ್ತಿದ್ದರು. ಇದನ್ನು ಪ್ರತಿಯೊಬ್ಬರು ಸಹ ಉಪಯೋಗವನ್ನು ಪಡೆಯದಿದ್ದರು ಕೊಡಬೇಕಾಗಿತ್ತು. ಇದಕ್ಕೆ ದೇವ ಗೊಳಗ(ದೇವ ಕೊಳಗ) ಎಂದು ಕರೆಯುತ್ತಾರೆ.

ಅಳತೆಮಾನಗಳು

ಚಾಲುಕ್ಯರು ಭೂಮಿಯನ್ನು ಅಳೆಯಲು ವಿವಿಧ ಅಳತೆಗಳನ್ನು ಬಳಸುತಿದ್ದರು. ಎರಡು ಖಂಡುಗ ಬೀಜವನ್ನು ಬಿತ್ತುವ ಹೊಲಕ್ಕೆ ಇಕ್ಕಂಡುಗ ಬೆದ್ದಲ್ ಎಂಬ ಅಳತೆ ಇತ್ತು. ಅಳತೆಗೋಲುಗಳ ಸಹಾಯದಿಂದ ಅಳೆಯುತಿದ್ದ ವಿಧಾನ ಕ್ರಿ ಶ. ೧೧೯೬ ರ ಕಲ್ಲೂರು ಶಾಸನದಲ್ಲಿ ಹಳ್ಳಿಯನ್ನು ಬ್ರಾಹ್ಮಣರಿಗೆ ಉಂಬಳಿಯಾಗಿ ಕೊಟ್ಟ ೧೦೦ ಮತ್ತರು ಭೂಮಿಯನ್ನು ಕೊಡುಗುಳಿ ಶಾಸನದಲ್ಲಿ ಸೋಮೇಶ್ವರ ದೇವಾಲಯ ಕಟ್ಟುವ ಉಪಯೊಗಕ್ಕೊಸ್ಕರ ಭೂಮಿ ಅಳತೆ ಮಾಡಿ ಒಂದು ಚಿಂತಾಮಣಿ ಕೊಲಿನಿಂದ ಅಳತೆ ಮಾಡಿದ್ದಾರೆ.[೧೩] ಈಗೆ ಇವರ ಅಳತೆಗಳನ್ನು ನೋಡಬಹುದು. ಈ ಅಳತೆಗಳು ಚಿತ್ರದುರ್ಗದ ಶಾಸನಗಳಲ್ಲಿಯೂ ಕಾಣಬಹುದು.

೨.೭ ಹೊಯ್ಸಳರು

ಕಲ್ಯಾಣ ಚಾಲುಕ್ಯರ ಪತನದ ನಂತರ ಚಿತ್ರದುರ್ಗ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ. ೧೩೦೦ ರ ವರೆಗೂ ವೈಭವಯುತವಾಗಿ ಕರ್ನಾಟಕದ ದಕ್ಷಿಣಭಾಗ ಮತ್ತು ತಮಿಳುನಾಡಿನ ಉತ್ತರಭಾಗವನ್ನು ಆಳ್ವಿಕೆ ನಡೆಸಿದವರು ಹೊಯ್ಸಳರು. ಇವರ ಮೂಲದ ಬಗ್ಗೆ ತಿಳಿಯುವುದಾದರೆ ಕರ್ನಾಟಕದ ದಕ್ಷಿಣ ಭಾಗವು ಕ್ರಿ.ಶ ೧೦ನೇ ಶತಮಾನದ ವೇಳೆಗೆ ಚೋಳರ ವಶವಾಯಿತು. ಈ ಸಂದಿಗ್ದ ಸಮಯದಲ್ಲಿ ಹಲವಾರು ಸಣ್ಣಪುಟ್ಟ ರಾಜ್ಯಗಳು ತಲೆಯೆತ್ತಿದವು. ಅವುಗಳಲ್ಲಿ ಹೊಯ್ಸಳ ವಂಶವೂ ಒಂದು. ಇವರ ಮೂಲದ ಬಗ್ಗೆ ಸಾಕಷ್ಟು ಗೊಂದಲಗಳಿವೆ. ಯಾದವ ವಂಶಕ್ಕೆ ಸೇರಿದ್ದರಿಂದ ಯಾದವರೆಂದು ತಿಳಿಯಬಹುದು.

ಹೊಯ್ಸಳರ ಕಾಲಾವದಿ ಕ್ರಿ.ಶ. ೧೦೦೦ – ೧೩೪೬ ರಾಜಧಾನಿ ದ್ವಾರಸಮುದ್ರ. ಪ್ರಮುಖ ಅರಸರು ೧ನೇ ಬಲ್ಲಾಳ, ವಿಷ್ಣುವರ್ಧನ ಇವರ ಲಾಂಛನ ಹುಲಿಯನ್ನು ವಧಿಸುತ್ತಿರುವ ವ್ಯಕ್ತಿ ಚಿತ್ರ. ಸೊಸೆಯೂರು ಇದೇ ಇಂದಿನ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಅಂಗಡಿ ಎಂಬುದು. ಅಂಗಡಿಯೂರಿನ ಹೊರವಲಯದಲ್ಲಿರುವ ವಾಸಂತಿ. ಅಥವಾ ಪದ್ಮಾವತಿ ದೇವಾಲಯದಲ್ಲಿ ಜೈನಗುರುವಾದ ವರ್ಧಮಾನ ಅಥವ ಸುದತ್ತಾಚಾರ್ಯರು ಆರಾಧನೆಯಲ್ಲಿ ತೊಡಗಿದ್ದರು ಆಗ ಪಕ್ಕದಲ್ಲಿದ್ದ ಕಾಡಿನಿಂದ ಹುಲಿಯೊಂದು ಬಂದು ಇವನ ಮೇಲೆರಗಿತು ತಕ್ಷಣವೆ ಆ ಹುಲಿಯನ್ನು ಕೊಲ್ಲುವಂತೆ ತನ್ನ ಶಿಷ್ಯರಲ್ಲೊಬ್ಬನಾದ ಸಳನನ್ನು ಹೊಯ್ಸಳ(ಪೊಯ್+ಸಳ) ಎಂದು ಆಜ್ಞೆಯನ್ನು ಮಾಡಲು, ಸಳನು ಹುಲಿಯೊಂದಿಗೆ ಸೆಣಸಿ

ಕಠಾರಿಯಿಂದ ಹುಲಿಯನ್ನು ಕೊಂದು ಹಾಕಿದನು. ಇದರಿಂದ 'ಹೊಯ್ಸಳ' ಎಂಬ ಹೆಸರು ಈ ನಾಡಿಗೆ ಬಂದಿತು ಎಂಬುದು ಪುರಾವೆಯಾಗಿದೆ.

ಆರ್ಥಿಕ ಸ್ಥಿತಿಗತಿ

ಆರಂಭದಲ್ಲಿ ಚಾಲುಕ್ಯ ಸಾಮಂತರು, ಗಂಗರ ಉತ್ತರಾಧಿಕಾರಿಗಳು ಆದ ಹೊಯ್ಸಳರು ಹಿಂದಿನ ಆಡಳಿತ ವ್ಯವಸ್ಥೆಯನ್ನು ಮುಂದುವರೆಸಿದರು ಆದರೆ ತಮಗೆ ಅನುಕೂಲವೆನಿಸಿದ ಬದಲಾವಣೆಗಳನ್ನು ಜಾರಿಗೆ ತಂದರು. ಇವರ ಆಡಳಿತದಲ್ಲಿ ಭೂ ಕಂದಾಯ ರಾಜ್ಯದ ಆದಾಯದ ಪ್ರಮುಖ ಮೂಲವಾಗಿತ್ತು. ರಾಜ್ಯದ ಭೂಮಿಯ ಮೂಲ ಒಡೆಯ ರಾಜನೇ ಆಗಿದ್ದು, ಭೂಮಿಯ ಆದಾಯವನ್ನು ಪಡೆಯುವುದು ರಾಜನ ಹಕ್ಕು ಆಗಿತ್ತು, ಇದು ಅರಸನ ಅಧಿಕಾರದ ಸ್ಥೂಲಚಿತ್ರಣ. ಆದರೆ ರೈತರು, ವರ್ತಕರು, ಶ್ರೀಮಂತರು, ಅಧಿಕಾರಿಗಳು ಭೂಮಿಯ ಒಡೆತನವನ್ನು ಗಳಿಸಿದ್ದರು. ಶ್ರೀಕರಣ ಸುಂಕ, ಅಡಕೆ ಲಕ್ಕೆ ಕುಂಡಿಕೆ. ಆನೆಯ ಸೇಸೆ, ಜೇಡದೆರೆ, ಕುದುರೆಯ ಸೇಸೆ, ಕೋಟೆಯ ಹಡಿಕೆ, ಕೊಟ್ಟಿಗೆಯ ದೆರೆ, ಬಣ್ಣಿಗೆ, ಹತ್ತಿದೆರೆ, ಕಬ್ಬಿಲರ ಹಡಿಕೆ, ತೊತ್ತುದೆರೆ, ಮುಂತಾದ ಅನೇಕ ತೆರಿಗೆಗಳ ಉಲ್ಲೇಖ ಶಾಸನಗಳಲ್ಲಿ ದೊರೆಯುತ್ತದೆ.

ನಾಣ್ಯ ಪದ್ಧತಿ

ಹೊಯ್ಸಳರು ಕರ್ನಾಟಕದಲ್ಲಿ ಕನ್ನಡ, ಸಂಸ್ಕೃತ ಮತ್ತು ತಮಿಳು ಭಾಷೆಯ ಒಂದು ಸಾವಿರ ಶಾಸನಗಳನ್ನು ಬರೆಸಿದ್ದಾರೆ. ಈ ಶಾಸನಗಳ ಅಧ್ಯಯನದಿಂದ ಅವರ ನಾಣ್ಯಗಳ ಬಗೆಗೆ ಸಾಕಷ್ಟು ಮಾಹಿತಿಗಳು ದೊರಕುತ್ತವೆ. ಇವರ ಕಾಲದಲ್ಲಿ ಗದ್ಯಾಣ, ವರಹ, ಹೊನ್,"ಪೊನ್" ತಾರ, ಪಣ, (ಹಣ) ಹಾಗ, ವೀಸ, ಬೇಳೆ, ಕಾಣಿ, ಅದ್ದ, ಮುಂತಾದ ನಾಣ್ಯಗಳು ಬಳಕೆಯಲ್ಲಿದ್ದವು. ಗದ್ಯಾಣ ಅಥವಾ ವರಹವೇ ಇವರ ಕಾಲದ ಅತ್ಯಂತ ಹೆಚ್ಚಿನ ಮೌಲ್ಯದ ಚಿನ್ನದ ನಾಣ್ಯ. ಇದರ ತೂಕ ೬೨ ಗ್ರೇನ್ ಗದ್ಯಾಣದ ಪ್ರಭೇದಗಳಾದ ಗಂಗನ ಗದ್ಯಾಣ, ನರಸಿಂಹ ಗದ್ಯಾಣ, ತಿಪ್ಪೂರಿನ ಗದ್ಯಾಣ, ಮುಂತಾದವುಗಳ ಉಲ್ಲೇಖ ಕಾಣಬರುತ್ತದೆ. ಇವುಗಳಲ್ಲಿ ಗದ್ಯಾಣ, ವರಹ, ಮತ್ತು ಪೊನ್ ಒಂದೇ ಮೌಲ್ಯದ ನಾಣ್ಯಗಳು[೧೪].

ಒಂದು ಗದ್ಯಾಣಕ್ಕೆ ೧೦ ಪಣಗಳು ಸಮನಾಗಿದ್ದವು (ತೂಕ ೬.೨ ಗ್ರೇನ್) ಒಂದು ಪಣಕ್ಕೆ ೪ ಹಾಗಗಳಾಗಿದ್ದು ಹಾಗದ ತೂಕ ೧.೫ ಗ್ರೇನ್ ಆಗಿತ್ತು, ೨ ಅದ್ದ ಗಳಿಗೆ ೧ ಪಣ ಸಮವಾಗಿತ್ತು. ೧ ವೀಸದ ತೂಕ ೦.೮ ಗ್ರೇನ್ ಆಗಿದ್ದರೆ, ೧ ಬೇಳೆಯ ತೂಕ ೦.೪ ಗ್ರೇನ್ ಆಗಿತ್ತು,[೧೫] ಹೊಯ್ಸಳರ ಕಾಲದಲ್ಲಿ ರಚಿತವಾದ ಇನ್ನು ಹಲವಾರು ನಾಣ್ಯಗಳು ನಮಗೆ ಕಂಡುಬರುತ್ತವೆ ಮತ್ತು ಚಿತ್ರದುರ್ಗದ ಸುತ್ತಮುತ್ತಲಿನಲ್ಲಿ ದೊರೆತಿರುವ ನಾಣ್ಯಗಳು ಕೆಲವು ಹೊಯ್ಸಳರ ತೂಕವನ್ನು ಹೋಲುತ್ತವೆ. ಇದರಿಂದ ಇವರ ವ್ಯಾಪಾರ ವಹಿವಾಟು ಇತ್ತೆಂದು ನಾವು ತಿಳಿಯಬಹುದು.

೨.೮ ವಿಜಯನಗರದ ಕಾಲದ ಚಿತ್ರದುರ್ಗ

ಕರ್ನಾಟಕದ ಮದ್ಯಭಾಗದಲ್ಲಿ ನೆಲೆಗೊಂಡಿರುವ ಚಿತ್ರದುರ್ಗ ವಿವಿಧ ಕಾಲಘಟ್ಟಗಳಲ್ಲಿ ಹೇಗೆ ಸಾಗಿ ಬಂದಿತೆಂಬುದನ್ನು ನೋಡುವಾಗ ವಿಜಯನಗರ ಸಾಮ್ರಾಜ್ಯದ ಕಾಲಾವಧಿ ಗಮನವನ್ನು ಸೆಳೆಯುತ್ತದೆ. ಅಂತೆಯೇ ಚಿತ್ರದುರ್ಗವು ಕರ್ನಾಟಕದ ಎಲ್ಲಾ ಪ್ರಮುಖ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿರುವುದನ್ನು ನಾವು ನೋಡಬಹುದು.

ಕಲ್ಯಾಣದ ಚಾಲುಕ್ಯರು ಹಾಗೂ ಹೊಯ್ಸಳರ ಕಾಲದಲ್ಲಿ ಹೇಗೊ ಹಾಗೆ ವಿಜಯನಗರದ ಕಾಲದಲ್ಲಿ ಕೂಡ ಇದು ಚಕ್ರವರ್ತಿಮನೆತನದವರ ಹತ್ತಿರದ ಬಂಧುವರ್ಗದವರ ನೇರ ಉಸ್ತುವಾರಿಯಲ್ಲಿ ಸಾಗಿ ಬಂದುದು ಸಹ ಕಾಣುತ್ತೇವೆ. ಆಗ ಇದನ್ನು ಚಿಮ್ಮತ್ತನಕಲ್ಲು ಪಟ್ಟಣ ಎಂದು ಕರೆಯುತ್ತದ್ದರು. ವಿಜಯನಗರ ಸಾಮ್ರಾಜ್ಯ ಕ್ರಿ. ಶ ೧೩೩೬ರಲ್ಲಿ ಅಸ್ಥಿತ್ವಕ್ಕೆ ಬಂದಿತೆಂದು ತಿಳಿದುಬರುತ್ತದೆ. ಕ್ರಿ.ಶ, ೧೩೩೮ರಲ್ಲಿ ಇಲ್ಲಿ ಹಿರಿಯ ಬಲ್ಲಪ್ಪನಾಯಕನು ಆಳುತ್ತಿದ್ದದು ಕಂಡುಬರುತ್ತದೆ. ಅದಕ್ಕೂ ಕೆಲವು ವರ್ಷಗಳ ಮುಂಚಿತವಾಗಿ ಅವನು ಇಲ್ಲಿ ಆಳುತ್ತಿದ್ದಿರಬೇಕು. ಹರಿಹರನ ಆಳ್ವಿಕೆ ಪ್ರಾರಂಭವಾಗಿದ್ದರೂ ಹಿರಿಯ ಬಲ್ಲಪ್ಪ ಇವರ ಕಾಲದಲ್ಲಿ ಮೊದಲಿಗೆ ಮಹಾಪ್ರಧಾನರಾಗಿ ನಂತರ ಬನವಾಸಿಯ ಪ್ರಾಂತ್ಯಪಾಲನಾಗಿ ಕಂಡುಬರುತ್ತಾನೆ.

ಸಿದ್ದಾಪುರ ಮತ್ತು ಹಡವನಹಳ್ಳಿ ರಾಜ್ಯಗಳ ಹೆದ್ದಾರಿಯಲ್ಲಿ ಒಂದೆಡೆ ಪರಿಣಾಮಿ ದೇವಯ್ಯ ಎಂಬುವರು ಅರವಟ್ಟಿಗೆಯನ್ನು ನೆಡೆಸುತ್ತಾ ಅಲ್ಲಿ ಪ್ರಯಾಣಿಕರಿಗೆ ಅಂಬಲಿಯನ್ನು ಸಿದ್ಧೌಷಧಿಗಳನ್ನು ನೀಡುತ್ತಿದ್ದನ್ನು ನೋಡಿದ ಮಾದರಸ ಡಣ್ಣಯಕ ಆ ಧರ್ಮಕಾರ್ಯ ನಿರಂತರವಾಗಿ ನಡೆಯಲಿ ಎಂದು ಆಶಿಸಿ ಒಂದಷ್ಟು ಭೂಮಿಯನ್ನು ನೀಡಿದ ಸಂಗತಿ ಮೇಲೆ ತಿಳಿಸಿದ ಶಾಸನದಿಂದ ತಿಳಿಯುತ್ತದೆ.

ಚಿತ್ರದುರ್ಗದಲ್ಲಿ ವಿಜಯನಗರದ ಕಾಲದ (೧೩೪೬–೧೫೬೫) ಶಾಸನಗಳು ಕ್ರಿ. ಶ. ೧೩೫೬ ರಿಂದ ಎರಡನೇ ದೇವರಾಯನ ಕಾಲದವರೆಗೂ ನಂತರ ಕೃಷ್ಣದೇವರಾಯನ ಕಾಲದಿಂದ ಅಳಿಯ ರಾಮರಾಯನ ಕಾಲದವರೆಗೂ ದೊರೆಯತ್ತವೆ. ಇವುಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದಂತೆ ೫೦ ಶಾಸನಗಳು ಕಂಡುಬರುತ್ತವೆ.[೬]

ವಿಜಯನಗರದ ಮೂಲ

ವಿಜಯನಗರದ ಸಾಮ್ರಾಜ್ಯದ ಸ್ಥಾಪಕರ ಮೂಲ ಮತ್ತು ಸ್ಥಾಪನೆಯಾದ ಸನ್ನಿವೇಶ ಗೊಂದಲಮಯವಾಗಿವೆ. ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರು ವಾರಂಗಲ್ಲಿನ ಕಾಕತೀಯ ಅರಸ ಪ್ರಾತಾಪರುದ್ರನ ಅಧಿಕಾರಿಗಳಾಗಿದ್ದರು. ದೆಹಲಿಯ ಸುಲ್ತಾನ ಮಹಮದ್ ಬಿನ್ ತುಘಲಕ್‌ನು ಕಾಕತೀಯರನ್ನು ಸೋಲಿಸಿ ವಾರಂಗಲ್ಲನ್ನು ಆಕ್ರಮಿಸಿ ಅದರ ಆಳ್ವಿಕೆಯನ್ನು ನೋಡಿಕೊಳ್ಳಲು ಮಲ್ಲಿಕ್ ಮಕ್ಬೂಲನನ್ನು ನೇಮಿಸಿದ. ಹರಿಹರ ಮತ್ತು ಬುಕ್ಕರನ್ನು ಸೆರೆಹಿಡಿದು ದೆಹಲಿಗೆ ಕಳುಹಿಸಲಾಯಿತು.

ಅವರು ಮತಾಂತರವಾಗಿ ಸುಲ್ತಾನನಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಇದರಿಂದ ಸಂತೋಷಗೊಂಡ ಸುಲ್ತಾನನು ಕಂಪಿಲಿ ಪ್ರದೇಶದಲ್ಲಿ ದಂಗೆ ನೆಡೆದಾಗ ಅವರಿಬ್ಬರನ್ನು ಅಲ್ಲಿನ ಆಡಳಿತ ನೋಡಿಕೊಳ್ಳಲು ಕಳುಹಿಸಿದ ಅವರು ಪುನ: ಹಿಂದೂ ಧರ್ಮವನ್ನು ಸ್ವೀಕರಿಸಿ ಸ್ವತಂತ್ರವಾದ ಸಾಮ್ರಾಜ್ಯವನ್ನು ಕಟ್ಟಿದರು. ಅದೇ ವಿಜಯನಗರ ಸಾಮ್ರಾಜ್ಯ. ಎಂದು ಐತಿಹ್ಯವಿದೆ.

ಕಂದಾಯ ಪದ್ಧತಿ

ವಿಜಯನಗರದ ಮೂಲ ಹಾಗೂ ಪ್ರಮುಖ ಆದಾಯ ಕಂದಾಯವಾಗಿತ್ತು. ಇವರು ಕಂದಾಯವನ್ನು ವಸ್ತು ಅಥವಾ ಹಣದ ರೂಪದಲ್ಲಿ ಪಡೆಯುತ್ತಿದ್ದರು. ಭೂಮಿಯನ್ನು ಅಳೆದು ಆ ಮೂಲಕ ತೆರಿಗೆಯನ್ನು ವಿಧಿಸಲಾಗುತ್ತಿತ್ತು ಭೂ ಅಳತೆಯ ಬಗ್ಗೆ ಹಿಂದಿನ ಪದ್ಧತಿಯನ್ನೆ ವಿಜಯನಗರದ ಅರಸರು ಮುಂದುವರೆಸಿದ್ದು ಕಂಡುಬರುತ್ತದೆ. ಇವರು ತೆರಿಗೆ ವಸೂಲಿಗೆ ಅಧಿಕಾರಿಗಳನ್ನು ನೇಮಿಸಿದ್ದರು. ಅವರು ಭೂ ಕಂದಾಯದ ಜೊತೆಗೆ ವಸೂಲು ಮಾಡುವ ಅಧಿಕಾರಿಗಳ ನಿರ್ವಹಣೆಗೂ ಹೆಚ್ಚಿನ ಕರಗಳನ್ನು ತೆರಬೇಕಾಗಿತ್ತು. ಅವುಗಳನ್ನು ಮುಂದಿನಂತೆ ನೋಡಬಹುದು.

ಭೂ ತೆರಿಗೆ, ಆಸ್ತಿ ತೆರಿಗೆ, ವಾಣಿಜ್ಯ ತೆರಿಗೆ, ವೃತ್ತಿ ತೆರಿಗೆ, ಕೈಗಾರಿಕಾ ತೆರಿಗೆ, ಸೇನ ತೆರಿಗೆ, ಸಾಮಾಜಿಕ ಮತ್ತು ಸಮುದಾಯದ ತೆರಿಗಗಳು, ನ್ಯಾಯಾಂಗ ವಿದಿಸುವ ದಂಡ ಇತರೆ ತರಿಗೆಗಳು. ಈ ತೆರಿಗೆಗಳು ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಭೂ ತೆರಿಗೆ ಮತ್ತು ವೃತ್ತಿ ತೆರಿಗೆ ಶಾಸನಗಳಲ್ಲಿ ಉಲ್ಲೇಖವಾಗಿದೆ.

ವಿಜಯನಗರದ ನಾಣ್ಯಗಳು ವಿಜಯನಗರದ ದೊರೆಗಳು ನಾಣ್ಯಗಳನ್ನು ಅಚ್ಚುಮಾಡಿಸುವುದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆದಿದ್ದರು. ಕೇಂದ್ರ ಟಂಕಶಾಲೆಯನ್ನು ಹಂಪಿಯಲ್ಲಿಯು ಇಂತಹ ಟಂಕಶಾಲೆಗಳನ್ನು ಬಾರಕೂರು, ಮಂಗಳೂರು, ನೆಲ್ಲೂರು, ಪೆನುಗೊಡ, ಗುತ್ತಿ, ತಾಡಪತ್ರಿ, ಆದೋನಿ, ಮುಂತಾದ ಸ್ಥಳಗಳಲ್ಲಿ ಸ್ಥಾಪಿಸಿದ್ದರು. ಕೇಂದ್ರ ಟಂಕಶಾಲೆಯ ನಿಯಂತ್ರಣದಲ್ಲಿ ಸಾಮಂತರು ಮತ್ತು ಸ್ಥಳಿಯ ಅಧಿಕಾರಿಗಳು ಇರುತ್ತಿದ್ದರು.

ಇವರ ನಾಣ್ಯಗಳು ಶುದ್ದತೆಯನ್ನು ತಪಾಸಣೆ ಮಾಡುತ್ತಿದ್ದರು. ಇವರು ಚಿನ್ನ, ಬೆಳ್ಳಿ, ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಟಂಕಿಸುತ್ತಿದ್ದರು. ಚಿನ್ನದ ನಾಣ್ಯಗಳ ಶುದ್ದತೆ ಇದ್ದಿತು ಇವರು ಗದ್ಯಾಣ, ವರಹ, ಹೊನ್, ಪಗೋಡ, ಪ್ರತಾಪ, ಕಾಚಿ, ಹಣ, ಚಿನ್ನಮು, ಮಾಡ, ವೀಸ, ಬೇಳೆ, ರೂಕ, ತಾರ, ಮತ್ತು ಕಾಸು ಎಂಬ ವಿವಿಧ ಮೌಲ್ಯದ ನಾಣ್ಯಗಳನ್ನು ಟಂಕಿಸಿದರು.[೧೬] ಇದರಲ್ಲಿ ಕೆಲವು ಚಿತ್ರದುರ್ಗದ ಭಾಗದಲ್ಲಿದ್ದಂತ ನಾಣ್ಯಗಳನ್ನು ನಾವು ನೋಡಬಹುದು

೨.೯ ಚಿತ್ರದುರ್ಗದ ಪಾಳೆಗಾರರು

ಕ್ರಿ. ಶ. ೧೫೫೦-೧೭೭೯ ರ ಕಾಲದಲ್ಲಿ ಪಾಳೆಗಾರರ ಆಳ್ವಿಕೆಯು ಪ್ರಾರಂಭವಾಯಿತು. ವಿಜಯನಗರದ ಕಾಲದಲ್ಲಿ ಪಾಳೆಗಾರರ ಏಳಿಗೆಯಾಯಿತು. ವಿಜಯನಗರೋತ್ತರ ಕಾಲದಲ್ಲಿ ಪಾಳೆಗಾರರು ಎಲ್ಲೆಲ್ಲೂ ಪ್ರಬಲರಾದರು. ಈ ಕಾಲವನ್ನು " ಪಾಳೆಗಾರರ ಕಾಲವೆಂದು" ಕರೆಯಬಹುದು. ಪಾಳೆಗಾರರೆಂದರೆ ಸಣ್ಣಪುಟ್ಟ ಸಾಮಂತ ಅರಸರು ತಮ್ಮ ಸೈನ್ಯ ಅಥವಾ ಪಾಳೆಯವನ್ನು ವಿಜಯನಗರದ ವೈಭವದ ಕಾಲದಲ್ಲಿ ರಾಜಧಾನಿಯ ಹೊರಭಾಗದಲ್ಲಿ ಬೀಡು ಬಿಡುತ್ತಿದ್ದರು ಆದ್ದರಿಂದ ಇವರನ್ನು ಪಾಳೆಗಾರ ಅಥವಾ ಪಾಳೆಗಾರರೆಂದು ಕರೆಯುವುದು ರೂಢಿಯಾಗಿದೆ.

ಕರ್ನಾಟಕದ ಉದ್ದಗಲಕ್ಕೂ ಪಾಳೆಗಾರರು ಅತ್ಯಧಿಕ ಸಂಖ್ಯೆಯಲ್ಲಿ ಆಳ್ವಿಕೆ ನಡೆಸಿರುವುದನ್ನು ಕಾಣಬಹುದು. ಇವರು ಬಲವಾದ ಕೋಟೆಕೊತ್ತಲುಗಳನ್ನು ತಮ್ಮ ರಾಜಧಾನಿಯ ಸುತ್ತಲು ನಿರ್ಮಿಸಿಕೊಂಡರು. ಅನನ್ಯವಾದ ರಕ್ಷಣಾ ವ್ಯೂಹವನ್ನು ರೂಪಿಸಿಕೊಂಡಿದ್ದರು. ಹಾಗಲವಾಡಿ, ಆವಂತಿ, ಮಾಗಡಿ, ಚತ್ರದುರ್ಗ, ಸುಗಟೂರು, ಸಂತೆಬೆನ್ನೂರು, ಉಮ್ಮತ್ತೂರು, ನಾಯಕನಹಟ್ಟಿ, ಕಳಲೆ, ಬೇಲೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ದೇವನಹಳ್ಳಿ, ನಿಡುಗಲ್ಲು, ಶಿರಾ, ಬಸವಪಟ್ಟಣ, ತರೀಕೆರೆ, ಬಿಳಗಿ, ಗೇರುಸೊಪ್ಪ ಮುಂತದ ಪಾಳೆಗಾರರು ವಿಜಯನಗರೋತ್ತರ ಕಾಲದಲ್ಲಿ ಪ್ರಸಿದ್ದಿಗೆ ಬಂದರು. ಇವರೇಲ್ಲರೂ ಸಹ ಚಿತ್ರದುರ್ಗದ ಪಾಳೆಗಾರರು. ಕರ್ನಾಟಕದ ಇತಿಹಾಸದಲ್ಲಿ ಗಣನೀಯವಾದ ಪಾತ್ರವನ್ನು ವಹಿಸಿದ್ದರು[೧೭]. ಎಂಬುದು ನಮಗೆ ಶಾಸನಗಳಿಂದ ತಿಳಿದುಬರುತ್ತದೆ.

ಚಿತ್ರದುರ್ಗದ ಪಾಳೇಗಾರರ ಮೂಲ ಪುರುಷ ಚಿತ್ರನಾಯಕನೆಂದು, ಇವನು ದೆಹಲಿ ಸುಲ್ತಾನರ ವಜೀರನಾದ್ದನೆಂದು ಭಾವಿಸಲಾಗಿದೆ. ಇವನು ಮದಿಸಿದ ಕರಿ(ಆನೆ) ಯನ್ನು ನಿಯಂತ್ರಿಸಿದ್ಧರಿಂದ ಇವನನ್ನು "ಮದಕರಿ ನಾಯಕ" ಎಂದು ಕರೆಯಲಾಗಿತ್ತೆಂದು ಹೇಳಿಕೆ ಇದೆ. ಇವನಿಂದ ಈ ದುರ್ಗಕ್ಕೆ ಚಿತ್ರದುರ್ಗವೆಂಬ ಹೆಸರು ಬಂದಿತೆಂದು ನಂಬಲಾಗಿದೆ.[೧೮]

ಈ ವಂಶದ ಮೂಲಪುರಷರು ತಿರುಪತಿಯ ಹತ್ತಿರದಲ್ಲಿರಬಹುದಾದ ಜಡೆಕಲ್ಲು ಗ್ರಾಮದಿಂದ ಬಂದವರೆಂದು ಕಂಡುಬರುತ್ತದೆ. ಚಿತ್ರದುರ್ಗದ ಪಾಳೆಗಾರ ವಂಶದ ಮೊದಲ ಐತಿಹಾಸಿಕ ವ್ಯಕ್ತಿ ಮತ್ತಿ ತಿಮ್ಮಣ್ಣನಾಯಕ ಇವನ ವಂಶದ ಅರಸರನ್ನು ಶಾಸನಗಳು ಮತ್ತು ಇತರೆ ಆಕರಗಳಲ್ಲಿ "ಮೆದಕೇರಿ ನಾಯಕ, ಮೆದೆಕರಿ ನಾಯಕ, ಮದಿಕರೆ ನಾಯಕ" ಎಂದೆಲ್ಲಾ ಕರೆಯಲಾಗಿದೆ. ಈ ವಂಶದ ಎರಡನೇ ನಾಯಕನಾದ ಓಬಣ್ಣನನ್ನು ಸಿದ್ಧಪುರುಷರೊಬ್ಬರು "ಮೆದೆಕೇರಿ ನಾಯಕ" ಮದಕರಿ ನಾಯಕ ಎಂದು ಹೆಸರಾದರೆಂದು ಚಿತ್ರದುರ್ಗದ ನಾಯಕರ ವಂಶಾವಳಿಗಳು ತಿಳಿಸುತ್ತವೆ. ಇದರಿಂದ ಓಬಣ್ಣನಾಯಕನು ಒಂದನೇ ಮೆದಕರಿ ನಾಯಕನಾದನೆಂದು ಹೆಸರಾದನು. ಆ ಸಿದ್ದಪುರುಷರು ಇವನನ್ನು ಆ ಹೆಸರಿನಿಂದ ಏಕೆ ಕರೆದರೆಂಬುದು ತಿಳಿಯುವುದಿಲ್ಲ. ಈ ಮನೆಯ ನಾಯಕರ ಮನೆಯ ದೈವ ಓಬಳದೇವರು

ಅಂದರೆ 'ಅಹೋಬಲ ನರಸಿಂಹ' ಇದರ ಮೂಲಸ್ಥಳ ಆಧ್ರದ ಅಹೋಬಲ. ಮೆದಕೇರಿ ಗ್ರಾಮವು ಅಹೋಬಲ ಪ್ರದೇಶದಲ್ಲಿ ಇದ್ದಿರಬಹುದು ಎಂಬುದನ್ನು ಊಹಿಸಲಾಗಿದೆ. ಆ ಪ್ರದೇಶದಿಂದ ಚಿತ್ರದುರ್ಗದ ನಾಯಕರು ಬಂದಿರುವುದರಿಂದ "ಮೆದಕೇರಿ" ಎಂಬ ಹೆಸರು ಪ್ರಾಪ್ತವಾಗಿರುವ ಸಂಗತಿಯನ್ನು ಅಲ್ಲೆಗಳೆಯುವಂತಿಲ್ಲ.

ಚಿತ್ರದುರ್ಗ ಫಾಳೆಗಾರರಲ್ಲಿ ಮೊದಲ ಪಾಳೆಗಾರರೆಂದರೆ ಮತ್ತಿ ತಿಮ್ಮಣ್ಣನಾಯಕ. ವಿಜಯನಗರದ ಅರಸರು ಇವನನ್ನು ಮೊದಲು ಹೊಳಲ್ಕೆರೆಗೆ, ಅನಂತರ ಹಿರಿಯೂರಿಗೆ ನಾಯಕನನ್ನಾಗಿ ನೇಮಿಸಿದ್ದ ಸಾಹಸ ಮತ್ತು ಪರಾಕ್ರಮಕ್ಕೆ ಹೆಸರಾಗಿದ್ದ ಇವನು ಒಮ್ಮೆ ಸಾಳುವ ನರಸಿಂಹನ ಪಾಳಯಕ್ಕೆ ನುಗ್ಗಿ ಅವನ ಖಾಸಾ ಕುದುರೆಯನ್ನು ಅಪಹರಿಸಿ ತಂದನು. ಈ ಸಾಹಸದಲ್ಲಿ ಇವನು ತನ್ನ ಮುಂಗೈಯನ್ನು ಕತ್ತರಿಸಿಕೊಳ್ಳಬೇಕಾಯಿತು ಇಂತಹ ಶೌರ್ಯದ ರೋಮಾಂಚಕ ಕಥೆ ಇದೆ. ಇದರ ಫಲವಾಗಿ ಹದಿನಾರನೆ ಅಭೇದ್ಯವಾದ ಕೋಟೆ ಕೊತ್ತಲಗಳನ್ನು ಕಟ್ಟಿಸಿದನು.

ಚಿತ್ರದುರ್ಗವನ್ನು ಆಳ್ವಿಕೆ ಮಾಡಿದಂತಹ ಇತರೆ ಪಾಳೇಗಾರರೆಂದರೆ. ಓಬಣ್ಣ ನಾಯಕ, ಅಥವಾ ಒಂದನೇ ಮದಕರಿ ನಾಯಕ, ೧೬೦೨ ಕಸ್ತೂರಿ ರಂಗಪ್ಪನಾಯಕ, ಇಮ್ಮಡಿ ಮೆದೆಕರಿ ನಾಯಕ, ಎರಡನೇ ಓಬಣ್ಣನಾಯಕ ಮತ್ತು ಚಿಕ್ಕಣ್ಣ ನಾಯಕ, ಬಿಚ್ಚುಗತ್ತಿ ಭರಮಣ್ಣ ನಾಯಕ, ಹಿರೇಮದಕರಿ ನಾಯಕ, ಎರಡನೇ ಕಸ್ತೂರಿ ರಂಗಪ್ಪನಾಯಕ, ವೀರ ಮೆದೆಕರಿನಾಯಕ ಮುಂತಾದವರು. ಚಿತ್ರದುರ್ಗವನ್ನು ಆಳಿದರು.

ಚಿತ್ರದುರ್ಗದ ಕೃಷಿ

"ಮಳೆ ಬಂದು ಬೆಳೆ ಬೆಳೆದು ಇಳೆ ತಣಿಯಲೆಂದು

ಲೇಸಾಗಿ ಹರಸಿದೆವು ಬಾಲಕರು ಬಂದು"[೧೯]

ಈ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಇತ್ತೀಚಿನ ತನಕ ರೂಢಿಯಲ್ಲಿದ್ದ "ಮನೋಮಿ ಪದ"ಗಳ ತುಣುಕ ಇದು. ರೈತಾಪಿ ಜನಕ್ಕೆ ಸಕಾಲದಲ್ಲಿ ಮಳೆಬಿದ್ದರೆ ಅದಕ್ಕಿಂತ ಭಾಗ್ಯ ಬೇರೆ ಬೇಕಿಲ್ಲ. ಜಾನಪದ ಇತಿಹಾಸವಾಗದು; ಕೃಷಿಯ ಬಗ್ಗೆ ಶಾಸನಗಳಲ್ಲಿ ದಾಖಲಾಗಿರುವುದು ಕಡಿಮೆಯೆಂದೇ ಹೇಳಬಹುದು. ಸರ್ವಜ್ಞನ ತ್ರಿಪದಿಗಳಲ್ಲಿ ಜನಪದ ನುಡಿಗಳಲ್ಲಿ ದಾಖಲಾಗಿರುವುದು ಮಳೆ ಬೆಳೆಗಳ ವಿಷಯಗಳಾಗಿವೆ.

ಉತ್ತರೆಯು ಬತ್ತಿದರೆ ಹೆತ್ತಮ್ಮ ತೊರೆದಿರೆ

ಸತ್ಯರು ತಪ್ಪಿ ನಡೆದರೆ ಲೋಕವಿ

ನ್ನೆತ್ತ ಸೇರುವುದು ಸರ್ವಜ್ಞ

ಪರಮ ಸತ್ಯವನ್ನು ನುಡಿದಿದ್ದಾನೆ ಸರ್ವಜ್ಞ"[೨೦]

ಎಂಬ ಪದ್ಯಗಳು ಕೃಷಿಕರ ಬದುಕಿನ ನಿಜಸ್ಥಿತಿಯನ್ನು ತಿಳಿಸುವಲ್ಲಿ ಪೂರಕವಾದ ಮಾಹಿತಿಯನ್ನು ಕೊಡುತ್ತದೆ. ರೈತರು ಸತ್ಯದಿಂದ ನೆಡೆಯಬೇಕು ಇಲ್ಲದೆ ಹೊದರೆ ಪರಮಾತ್ಮನು ರೈತರಿಗೆ ಮಳೆಯ ಪ್ರಮಾಣ ತಗ್ಗಿಸುತ್ತಾನೆ ಎಂಬುದು ಇಲ್ಲಿಯ ರೈತರ ನಂಬಿಕೆ.

ತೆರಿಗೆ ಪದ್ಧತಿ

ಚಿತ್ರದುರ್ಗ ಭಾಗದಲ್ಲಿ ತೆರಿಗೆ ಬಗ್ಗೆ ತಿಳಿಯುವುದಾದರೆ ವ್ಯಾಪಾರವು ತೆರಿಗೆ ಸಂಗ್ರಹವಾಗುತ್ತಿದ್ದ ಒಂದು ದೊಡ್ಡ ಮಾರ್ಗವಾಗಿತ್ತು. ವ್ಯಾಪಾರವನ್ನು ಒಂದು ನಿರ್ದಿಷ್ಟ ದಿನದಲ್ಲಿ ನಿಗದಿತ ಸಮಯದಲ್ಲಿ ನಡೆಸುಂತಹ ಮಾರುಕಟ್ಟೆಯನ್ನು 'ಸಂತೆ' ಎಂದು ಕರೆಯುತ್ತೇವೆ. ಇಂತಹ ಸಂತೆಗಳಲ್ಲಿ ವಸೂಲಾಗುವ ಸುಂಕವು ಅಥವಾ ತೆರಿಗೆಯು ರಾಜ್ಯಕ್ಕೆ ಪ್ರಮುಖ ಆದಾಯವಾಗಿತ್ತು. ಕೆಲವೊಮ್ಮೆ ರಾಜ ಈ ಸುಂಕವನ್ನು ಸ್ಥಳೀಯರಿಗೆ ಅವರ ಅನುಕೂಲಕ್ಕೆ ವೆಚ್ಚಮಾಡಲು ಆದೇಶಿಸುತ್ತಿದ್ದನು.

ಈ ಭಾಗದಲ್ಲಿ ವಿವಿಧ ರಾಜಮನೆತನಗಳು ಆಳ್ವಿಕೆ ಮಾಡಿ ಪತನ ಹೊಂದಿರುವುದರಿಂದ ಹಲವಾರು ತೆರಿಗೆ ಪದ್ದತಿಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವನ್ನು ನೊಡುವುದಾದರೆ ವಸ್ತುಗಳ ಮೇಲಿನ ತೆರಿಗೆ, ಮದುವೆ ಸುಂಕ, ವೃತ್ತಿ ತೆರಿಗೆ, ಭೂ ತೆರಿಗೆ, ಕುರಿ ತೆರಿಗೆ, ಮುಂತಾದ ತೆರಿಗೆಗಳನ್ನು ನೋಡಬಹುದು.

ನಾಣ್ಯಗಳು: ನಾಣ್ಯಗಳು ಸಹ ಈ ಜಿಲ್ಲೆಯಲ್ಲಿ ಇದ್ದವೆನ್ನುವುದಕ್ಕೆ ಕ್ರಿ. ಶ. ೧೧೧೩ ರ ಕೋಗುಂಡಿ ಶಾಸನದಲ್ಲಿ ಕಮ್ಮಟದ ಉಲ್ಲೇವಿದೆ. ಕಂಮಟದವನು ಎಂದರೆ ನಾಣ್ಯಗಳ ಅಚ್ಚುಹಾಕುವವನು ಎಂದರ್ಥ. ಶ್ರೀ ಮನ್ಮಹಾವಡ್ಡ ವ್ಯವಹಾರಿ ರಾಜ ಶ್ರೇಷ್ಟ ಕಾಶ್ಯಾಪಗೋತ್ರದ ಕಂಮ್ಮೆಕುಲದ ಕಂಮಟದ ಶ್ರೀ ಮಲ್ಲಿಯೋಗಪ್ಪ ಎಂಬುವನ ಉಲ್ಲೇಖ ಬಂದಿದೆ. ಇವನು ಈ ಪ್ರದೇಶದ ನಾಣ್ಯ ಚಲಾವಣಾಧಿಕಾರಿಯಾಗಿದ್ದಿರಬೇಕು. ಎಂಬುದು ಶಾಸನದಿಂದ ತಿಳಿದು ಬರುತ್ತದೆ. ಜಟಂಗ ರಾಮೇಶ್ವರ ಸಮೀಪ ಸಿದ್ದಾಪುರ ದೇವಾಲಯದ ಶಾಸನದಲ್ಲಿ ನಾಣ್ಯಗಳಿಗೆ ಹಾಗೂ ಅಳತೆಗಳಿಗೆ ಸಂಬಂಧಿಸಿದಂತೆ ಉಲ್ಲೇಖಗಳು ಬಂದಿವೆ ಅವುಗಳೇಂದರೆ "ಸುವರ್ಣ ಗದ್ಯಾಣ" ಪ್ರತಾಪ ಗದ್ಯಾಣ, ಧರಣ, ಕೊಳಗ, ಖಂಡುಗ, ಸೊಲ್ಲಗೆ, ಅದ್ದ, ಬಳ್ಳ, ಮುಂತಾದವು. ಇನ್ನೊಂದು ಶಾಸನದಲ್ಲಿ ವೀಸದ ಉಲ್ಲೇಖವಿದೆ. ಇವುಗಳಲ್ಲದೆ ಇನ್ನು ಮುಂತಾದ ತೆರಿಗೆಗಳ ವಿವರಗಳು ಪಾಳೆಗಾರರ ಆಳ್ವಿಕೆಯಲ್ಲಿ ಕಂಡುಬರುತ್ತವೆ.ಒಟ್ಟಾರೆಯಾಗಿ ಮೌರ್ಯರ ಕಾಲದಿಂದ ವಿಜಯನಗರೋತ್ತರದ ಪಾಳೇಗಾರರ ಕಾಲದವರೆಗಿನ ಚಿತ್ರದುರ್ಗದ ಆಡಳಿತ ಪದ್ಧತಿಯನ್ನು ಮತ್ತು ಅವರ ಆಡಳಿತ ಪದ್ದತಿಯ ಚಿತ್ರಣವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಡಿಟಿಪ್ಪಣಿ

೧. .ಶಿವರುದ್ರಸ್ವಾಮಿ ಡಾ.ಎಸ್.ಎನ್. ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಪುಟ ೪೭

೨. ಅದೇ ಪುಟ ೬೫

೩. ಅದೇ ಪುಟ ೬೬

೪. ಅದೇ ಪುಟ ೭೪

೫. ಗೋಪಾಲ್. ಡಾ. ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ :೬೭

೬. ಆರ್.ಡಿ.ಜಿ. ಕರ್ನಾಟಕದ ಇತಿಹಾಸ ಮಾಲಿಕೆ. ಸ್ವಪ್ನ ಬುಕ್ ಹೌಸ್. ಪುಟ ೨

೭. ಅದೇ ಪುಟ ೩

೮. ಗೋಪಾಲ್. ಡಾ. ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೬೮

೯. ಆರ್.ಡಿ.ಜಿ. ಕರ್ನಾಟಕದ ಇತಿಹಾಸ ಮಾಲಿಕೆ. ಸ್ವಪ್ನ ಬುಕ್ ಹೌಸ್. ಪುಟ ೬೮

೧೦. ಅದೇ ಪುಟ ೬೯

೧೧. ಗೋಪಾಲ್. ಡಾ. ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೧೬೭

೧೨. ಅದೇ ಪುಟ ೧೭೫

೧೩. .ನಾಗರಾಜು ಡಾ.ಡಿ.ಎಂ. ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ ೮೪

೧೪. ನರಸಿಂಹಮೂರ್ತಿ, ಡಾ.ಎ.ವಿ. ಕರ್ನಾಟಕದ ನಾಣ್ಯಗಳು. ಪುಟ ೨೨

೧೫. ಅದೇ ಪುಟ ೨೩

೧೬. ಅದೇ ಪುಟ ೩೦

೧೭. .ಶಿವರುದ್ರಸ್ವಾಮಿ. ಡಾ.ಎಸ್.ಎನ್ ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಪುಟ ೪೯೫

೧೮. ಅದೇ ಪುಟ ೪೪೬

೧೯. ಗೋಪಾಲ್. ಡಾ. ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೨೫೪

೨೦. ಅದೇ ಪುಟ ೨೫೪.

ಅಧ್ಯಾಯ ೩

ಶಾಸನಗಳಲ್ಲಿ ತೆರಿಗೆ ಪದ್ಧತಿ

೩.೧ ತೆರಿಗೆ ಪದ್ಧತಿಯ ಮೂಲ ಮತ್ತು ಪರಿಚಯ
೩.೨ ತೆರಿಗೆಯ ವಿಧಗಳು
೩.೩ ಚಿತ್ರದುರ್ಗದ ಶಾಸನಗಳಲ್ಲಿ ತೆರಿಗೆ ಪದ್ಧತಿ.

ಅಧ್ಯಾಯ : ೩

ಶಾಸನಗಳಲ್ಲಿ ತೆರಿಗೆ ಪದ್ಧತಿ

೩.೧ ತೆರಿಗೆ ಪದ್ಧತಿ ಮೂಲ ಮತ್ತು ಪರಿಚಯ :

ಯಾವುದೇ ಒಂದು ದೇಶದ ಅಭಿವೃದ್ಧಿ ಆಗಬೇಕಾದರೆ ಆರ್ಥಿಕ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆರ್ಥಿಕ ಸಧೃಡತೆ ಆ ದೇಶದ ಬೆನ್ನೆಲುಬಾಗಿರುತ್ತದೆ. ದೇಶದ ಬೆಳವಣಿಗೆಯಲ್ಲಿ ಆರ್ಥಿಕ ಪ್ರಗತಿಯ ಪಾತ್ರ ಮಹತ್ತರವಾದದ್ದು ಮತ್ತು ಆರ್ಥಿಕ ಬೆಳವಣಿಗೆಯ ಭಾಗವಾಗಿ ಕೃಷಿಗೆ ಸಂಬಂಧಿಸಿದಂತೆ ನೀರಾವರಿ, ನೀರಾವರಿಗೆ ಪೂರಕವಾಗಿ ಕೆರೆಕಟ್ಟೆಗಳ ನಿರ್ಮಾಣ, ಆ ಕಾಲದಲ್ಲಿ ಬೆಳೆಯುತ್ತಿದ್ದ ವಿವಿಧ ರೀತಿಯ ಬೆಳವಣಿಗೆಗಳು ಒಂದು ಭಾಗವಾದರೆ, ಇನ್ನೊಂದು ಭಾಗ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ್ದು ವ್ಯಾಪಾರ ಆ ಕಾಲದ ಪ್ರಮುಖ ಆರ್ಥಿಕ ಬೆಳವಣಿಗೆಯಲ್ಲಿ ಒಂದು ಅಂಗವಾಗಿತ್ತು. ಅದೇರೀತಿಯಾಗಿ ಹೇಳುವುದಾದರೆ ಹಲವಾರು ರಾಜಮನೆತಗಳು ಆಡಳಿತವನ್ನು ನಡೆಸಲು ವಿವಿಧ ರೀತಿಯ ತೆರಿಗೆಗಳನ್ನು ವಸೂಲಿಮಾಡಿಕೊಂಡು ಅದರಿಂದ ಬಂದಂತಹ ಹಣದಲ್ಲಿ ದೇವಾಲಯಗಳನ್ನು ಕಟ್ಟಿಸುವುದು, ಕೆರೆಕಟ್ಟೆಗಳನ್ನು ನಿರ್ಮಿಸುವುದು, ಧಾರ್ಮಿಕ ಕಾರ್ಯಗಳನ್ನು ಮಾಡುವುದು ಮತ್ತು ರೈತರಿಗೆ ನೆರವಾಗುವುದು ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದದು ನಮಗೆ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿ ಪೂ. ೧೨೦೦-೮೦೦ ರ ಕಾಲಕ್ಕೆ ಸೇರಿದ 'ಋಗ್ವೇದಸಂಹಿತೆ' ಎಂದು ಕರೆಯಲ್ಪಡುವ ಸೂಕ್ತ ಹಾಗೂ ಪ್ರಾರ್ಥನೆಗಳ ಸಂಕಲನಗಳಲ್ಲಿ ದೊರೆಯುತ್ತದೆ. ಭಾರತಕ್ಕೆ 'ಆರ್ಯ'ರಿಗಿಂತ ಮೊದಲು ವಲಸೆ ಬಂದ ವಿದೇಶಿ ಜನಾಂಗಗಳಲ್ಲಿ ದ್ರಾವಿಡರು ತಮ್ಮ ಇತಿಹಾಸದ ಆರಂಭದಲ್ಲಿಯೇ ಉತ್ತಮ ನಾಗರೀಕತೆಯನ್ನು ಹೊಂದಿದ್ದರು. ಇತ್ತೀಚೆಗೆ ಪ್ರಾಚೀನ ಭಾರತದ ಆಡಳಿತದ ಇತಿಹಾಸ ಇಂಡೋ ಆರ್ಯರ ಸಾಹಿತ್ಯದಲ್ಲಿ ಪ್ರಾಚೀನತಮ ಸೃಷ್ಟಯಾದ "ಋಗ್ವೇದಸಂಹಿತೆ' ಯಿಂದ ವಿಷಯ ಪ್ರಾರಂಭಿಸುವುದು ಅನಿವಾರ್ಯವಾಗುತ್ತದೆ.

ಋಗ್ವೇದದ ಕಾಲಕ್ಕಾಗಲೆ ಆರ್ಯ ಪಂಗಡಗಳು "ಸಭಾ ಅಥವಾ ಸಮಿತಿ" ಎಂದು ಕರೆಯುಲು ಪಂಗಡದ ಸಭೆಯ ಸಹಾಯ ಪಡೆಯುತ್ತಿದ್ದ ರಾಜನ ಆಡಳಿತದಲ್ಲಿ ಒಂದು ವಿವಿಧ ಪ್ರೌಢವಲ್ಲದಿದ್ದರೂ ರಾಜಕೀಯ ಸಂಸ್ಥೆಯನ್ನು ಹೊಂದಿತ್ತು. ಈ ಸಂಗತಿಗೆ ಸಂವಾಧಿಯಾಗಿ ರಾಜನು ಅಂಶತಃ ತನ್ನ ಪ್ರಜೆಗಳ ಕಾಣಿಕೆಯ ರೂಪದಲ್ಲಿ ಕರಾಕರಣೆ ಮಾಡುತ್ತಿರುವಂತೆ ಕಂಡುಬರುತ್ತದೆ. ಪಾರಿಭಾಷಿಕವಾಗಿ ಇದಕ್ಕೆ "ಬಲಿ" ಎಂದು ಹೆಸರು. ರಾಜನ ಪಟ್ಟಾಭಿಷೇಕಕ್ಕೆ ಸಂಬಂದಿಸಿದ " ಋಗ್ವೇದ ಸೂಕ್ತ" ದಲ್ಲಿ ರಾಜನಿಗೆ ಪ್ರಜೆಗಳು (ವಿಶಸ್) "ಬಲಿ" ಕೊಡುವಂತೆ ಮಾಡಲು ಇಂದ್ರನನ್ನು ಪ್ರಾರ್ಥಿಸಿದ ಸೂಕ್ತಿಗಳಿವೆ "ಬಲಿ" ಯು ಸ್ವಯಂಸ್ಫೂರ್ತಿಯ ಕಾಣಿಕೆಯಾಗಿದೆ. ಶಾಸನಬದ್ದ ನಿಶ್ಚಿತ ಉತ್ಪನ್ನವಾಗಿದ್ದು ಈ ಹೇಳಿಕೆ ಅರ್ಥಹೀನವೆಂದು ಒಂದು ಸೂಚನೆಯು ಇದೆ.

ಇದಕ್ಕೆ ವಿರುದ್ದವಾಗಿ ವೇದಕಾಲದ ಭಾರತೀಯರು ಖಂಡಿತವಾಗಿಯೂ ವಿಜಯಿ ಹಾಗೂ ಆಕ್ರಮಣ ಶೀಲರಾಗಿದ್ದರಿಂದ ಪ್ರಜೆಗಳಿಂದ ಕೇವಲ ಸ್ವಯಂ ಸ್ಫೂರ್ತಿ ಕಾಣಿಕೆಯ ವ್ಯವಸ್ಥೆ ಅವರ ವಿಷಯದಲ್ಲಿ ಅಸಾದ್ಯವೆಂಬ ವಾದವೂ ಇದೆ. ಆದಿವಾಸಿಗಳ ಸಮಾಜಗಳ ಬೆಳವಣಿಗೆಯ ಸಹಜ ಗತಿಯನ್ನು ಅವಲೋಕಿಸಿದಾಗ ಪ್ರಾರಂಭದಲ್ಲಿ ಸ್ವಯಂ ಸ್ಫೂರ್ತಿ ಸ್ವರೂಪವನ್ನು ಹೊಂದಿದ 'ಬಲಿ' ಯು ಮುಂದೆ ಕಡ್ಡಾಯ ಕೊಡುಗೆಯಾಯಿತೆಂದು ಹೇಳಬಹುದು. ಕಾಲ ಕಳೆದಂತೆ ಕೇವಲ ಕೃಷಿ ಹುಟ್ಟುವಳಿಗಳ ಮೇಲೆ "ಬಲಿ" ಯನ್ನು ಹೇರಲ್ಪಡುತಿತ್ತೆ ಎಂಬುದನ್ನು ಋಗ್ವೇದದ ಆಧಾರದ ಮೇಲೆ ಖಚಿತವಾಗಿ ಹೇಳಲು ಸಾದ್ಯವಿಲ್ಲ ಆದರೂ ಈ ಕಲ್ಪನೆಯೇ ಹೆಚ್ಚು ಸಂಭಾವ್ಯವಾಗಿದೆ.[೧]

ಋಗ್ವೇದ ಕಾಲದಲ್ಲಿ ಸೂಚಿಸಿದಂತೆ ಕರಕಾರಣಿಕೆಯ ಇನ್ನೊಂದು ಮೂಲವೆಂದರೆ ಇಂಡೋ – ಆರ್ಯರಿಂದ ಆರ್ಯ ಅಥವಾ ಅನಾರ್ಯ ಬುಡಕಟ್ಟಿಗೆ ಸೇರಿದ ಗುಂಪುಗಳಿಂದ ಬರುತ್ತಿದ್ದ ಕಾಣಿಕೆಯೇ ಆಗಿದೆ. ಅಗ್ನಿಗೆ ಸಂಬಂಧಿಸಿದ ಸೂಕ್ತವೊಂದರಲ್ಲಿ ದೇವತೆಯ ಕಾರ್ಯವನ್ನು ವಿಶೇಷವಾಗಿ ಶ್ಲಾಘಿಸುತ್ತಾ ಕವಿಯು ನಹುಷರಾಜನಿಗೆ ಜನ "ಬಲಿ" ಕೊಡುವಂತೆ ಅವನು ಒತ್ತಾಯಿಸಿದ ಉಲ್ಲೇಖವಿದೆ. ಹೀಗೆ ವೇದಗಳ ಕಾಲದಲ್ಲಿ ತೆರಿಗೆ ಪದ್ಧತಿಯು "ಬಲಿ" ಎಂಬ ಹೆಸರಿನಲ್ಲಿಯೇ ಇದ್ದದ್ದು ನಮಗೆ ಕಂಡುಬರುತ್ತದೆ. ಅದರ ಬಳಕೆ ಮುಂಚಿತವಾಗಿ ಇದ್ದರೂ ಸಹ ಆಧಾರಗಳ ಕೊರತೆಯಿಂದ ಮಾಹಿತಿ ಲಭ್ಯವಿಲ್ಲ.

ಸುಂಕ: ವ್ಯಾಪಾರದಲ್ಲಿ ಸರಕುಗಳ ಮೇಲೆ ಹಾಕುವ ತೆರಿಗೆಯೇ ಸುಂಕ. ಈ ಶಬ್ದವು ಸಂಸ್ಕೃತದ 'ಶುಲ್ಕ' ಎಂಬುದರ ತದ್ಭವ. ಪ್ರಾಕೃತದಲ್ಲಿಯೂ ಇದು ಸುಂಕ ಎಂದಾಗಿದೆ, ತೆಲುಗು, ತುಳುಗಳಲ್ಲಿಯೂ ಇದೇ ರೂಪವಿದೆ. ತಮಿಳಿನಲ್ಲಿ ಚುಙ್ಕ ಚುಕ್ಕ ಎಂದೂ, ಮಲಯಾಳಂನಲ್ಲಿ ಚುಂಗ ಎಂದೂ ಆಗುತ್ತದೆ. ಈಗ ಸರಕಾರವು ಮಾಡುವ ರೀತಿಯಲ್ಲಿ ಹಿಂದೆ ರಾಜನೂ ಸುಂಕ ವಿಧಿಸುತ್ತಿದ್ದ. ಇದು ಪ್ರಾಚೀನ ಪದ್ಧತಿಯಾಗಿದೆ. ಸುಂಕ ವಸೂಲಿಗೆಂದು ನೌಕರರಿರುತ್ತಿದ್ದರು, ನಿರ್ದಿಷ್ಟ ಜಾಗವೂ ಇರುತ್ತಿತ್ತು. "ಸುಂಕವೆರ್ಗಡೆ ಮಲ್ಲಿಯಣ ದಂಡನಾಯಕ"ನ ಉಲ್ಲೇಖ ಹತ್ತನೆಯ ಶತಮಾನದ ಶಾಸನದಲ್ಲಿದೆ. ಇದು ಮುಂದೆ ನಡುಗನ್ನಡದಲ್ಲಿ 'ಸುಂಕದ ಹೆಗ್ಗಡೆ" ಎಂದಾಗಿದೆ 'ಸುಂಕದ ಹೆಗ್ಗಡೆ ಬೊಪ್ಪಡೆ ಒಳಗಾಗಿ" ಎಂಬ ಪ್ರಯೋಗವು ಹನ್ನೆರಡನೆಯ ಶತಮಾನದ ಶಾಸನದಲ್ಲಿದೆ. ಹೆಸರೇ ಸೂಚಿಸಿವಂತೆ ಈ ಹೆಗ್ಗಡೆ ಪ್ರಯಶಃ ಹಿರಿಯ ಅಧಿಕಾರಿ. ಆದರೆ ಸಾಮಾನ್ಯ ನೌಕರನನ್ನು "ಚಾವುಂಡರಾಯಪುರಾಣ'ವು 'ಸುಂಕಿ' ಎನ್ನುತ್ತದೆ. ("ಮೊಕ್ಕಳಂ ಒಡಮೆವಡೆದು ಪೊಳಲಂ ಪುಗುವಲ್ಲಿ ಸುಂಕಿಗಳ್ಗಳ್ಕಿ ಮಗುಳ್ದು ಬಂದು") 'ಸುಂಕಿಗ' ಎಂಬುದು ಇದರ ಇನ್ನೊಂದು ರೂಪ. ಊರಲ್ಲಿನ ಅಂಗಡಿ ಮುಂತಾದವುಗಳಿಂದ ಸುಂಕ ವಸೂಲು ಮಾಡುತ್ತಿದ್ದವನೇ 'ಹೊಳಲ ಸುಂಕಿಗ'. ಈ ಮಾತನ್ನು ಮಹಾದೇವಿಯಕ್ಕ ಬಳಸುತ್ತಾಳೆ. ಸುಂಕದ ಬಂಕಣ್ಣ ಎಂಬೊಬ್ಬ ವಚನಕಾರ ತನ್ನೊಂದು ವಚನದಲ್ಲಿ 'ಹೊರೆಸುಂಕ' 'ಪಸರಸುಂಕ'ಗಳನ್ನು (ಪಸರ=ಅಂಗಡಿ) 'ಸುಂಕಂಗೊಳ್' ("ಒದ್ದಾಯನಮಹಾರಾಜನ ಬಿಂಕಮಂ ಸುಂಕಗೊಂಡು"–

ನಯಸೇನನ 'ಧರ್ಮಾಮೃತ) ಸುಂಕ ವಸೂಲು ಮಾಡುವ ನಿಗದಿತ ಜಾಗ ಅಥವಾ ಉಕ್ಕಡವೇ 'ಸುಂಕದಕಟ್ಟೆ'. ಈ ಪದವು ಈಚಿನದೆಂದು ತೋರುತ್ತದೆ. ಹಿಂದೆ ಇಂತಹ ಜಾಗವನ್ನು 'ಡಂಗ' ಎಂದು ಕರೆಯುತ್ತಿದ್ದರು. ಇದನ್ನು ಹತ್ತೊಂಬತ್ತನೆ ಶತಮಾನದ ಶಾಸನವೊಂದು 'ಸುಂಕಠಾಣೆ'ಎನ್ನುತ್ತದೆ. ಸುಂಕ ಕೊಟ್ಟವರಿಗೆ ರಸೀದಿಯನ್ನು ಕೊಡುತ್ತಿದ್ದರು. ಇದನ್ನು ಕೋಲಶಾಂತಯ್ಯ ಎಂಬ ವಚನಕಾರನು 'ಒಪ್ಪದ ಚೀಟು' (ಒಪ್ಪ=ಸಹಿ) ಎನ್ನುತ್ತಾನೆ. ಸುಂಕವನ್ನು ತಪ್ಪಿಸಿಕೊಳ್ಳಲು ಕೆಲವರು ರಾತ್ರಿ ಕಾಲದಲ್ಲಿ ಪಯಣಿಸುತ್ತಿದ್ದರು ("ಇರುಳೆಲ್ಲ ನಡೆದನಾ ಸುಂಕಕಂಜಿ"– ಜೇಡರದಾಸಿಮಯ್ಯನ ವಚನ). "ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ಹೋಗಬಾರದು.. .. ಕಳ್ಳನಾಣ್ಯವ ಸಲ್ಲಲೀಯರಯ್ಯ" ಎಂಬ ಬಸವಣ್ಣನ ಮಾತಿನಲ್ಲಿ ಸುಂಕ ಕೊಡುವಾಗ ಕಳ್ಳನಾಣ್ಯದ ಚಲಾವಣೆಗೆ ಪ್ರಯತ್ನಿಸುತ್ತಿದ್ದ ಸೂಚನೆಯಿದೆ. ಈಗೆ ವಚನಕಾರರಲ್ಲಿ ಇದ್ದಂತಹ ತೆರಿಗೆಗಳ ವಿವಿಧ ರೀತಿಯನ್ನು ನೋಡಬಹುದು.

ಚಿತ್ರದುರ್ಗದ ಸುತ್ತಮುತ್ತಲಿನ ಶಾಸನಗಳಲ್ಲಿ ತೆರಿಗೆಯ ಬಗ್ಗೆ ನೊಡುವುದಾದರೆ ನಮಗೆ ದೊರಕುವುದು ರಾಜಮನೆತನಗಳ ತೆರಿಗೆ ವಿಧಾನಗಳು. ಅದರಲ್ಲಿಯು ಹೆಚ್ಚಾಗಿ ನಮಗೆ ತೆರಿಗೆ ವಿಚಾರಗಳು ದೊರಕುವುದು ಪಾಳೆಗಾರರ ಆಳ್ವಿಕೆಯಲ್ಲಿ. ಚಿತ್ರದುರ್ಗ ಕ್ರಿ. ಪೂರ್ವದಿಂದಲೇ ಜನವಸತಿಯ ಬೀಡಾಗಿದ್ದು ವಿದೇಶಿ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರಿಂದ ಇಲ್ಲಿ ಉತ್ತಮವಾದ ಆಡಳಿತವು ಏರ್ಪಟ್ಟಿರಬೇಕೆಂದು ಅರ್ಥೈಸಬಹುದಾಗಿದೆ. ಈ ಪ್ರದೇಶವು ಅನೇಕ ರಾಜಮನೆತನಗಳಿಂದ ಆಳಲ್ಪಟ್ಟು ವಿವಿಧ ರೀತಿಯ ಆಡಳಿತ ಪದ್ಧತಿಗಳ ಪ್ರಯೋಗಾಲಯವಾಗಿದ್ದಿತು.

"ಬಿ.ಎ.ಸಾಲೊತ್ತರ್ ಪ್ರಕಾರ: ಗ್ರಾಮದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಜನಸಾಮನ್ಯರು ವ್ಯಕ್ತಪಡಿಸಿದ ಸಹಕಾರ ಕ್ರಮೇಣ ರಾಜಕೀಯಕ್ಕೂ ವಿಸ್ತರಿಸಿ ಪಾಳೆಗಾರ ಪದ್ಧತಿಯನ್ನು ಹುಟ್ಟುಹಾಕಿತು. ಮುಂದುವರೆದು ಅವರು ಈ ಪದ್ಧತಿಯಿಂದ ಕೆಡಕುಗಳು ಏನೇ ಇದ್ದರು ಅಂದಿನ ರಾಜಕೀಯ ಪದ್ಧತಿಯಲ್ಲಿ ದಕ್ಷಿಣ ಭಾರತದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವಲ್ಲಿ ಎಲ್ಲಾ ರಾಜಮಂತ್ರಿಗಳಿಗಿಂತಲು ಪಾಳೆಗಾರರ ಪದ್ಧತಿ ಪರಿಣಾಮಕಾರಿಯಾಗಿತ್ತು ಎನ್ನುತ್ತಾರೆ.[೨]

ಚಿತ್ರದುರ್ಗದ ಪಾಳೆಪತ್ತಿನ ಉಗಮಕ್ಕೆ ಕಾರಣವಾದ ನಾಯಕ ಪದ್ಧತಿಯ ಆಡಳಿತ ಮೂಲವು ವಿಜಯನಗರದ ಆಡಳಿತದಲ್ಲಿ ಕಂಡುಬರುತ್ತದೆ. ಪಾಳೆಗಾರರೆಂದರೆ, ದಂಡಿನೊಳಗೆ ಪಾಳೆಯವನ್ನೇರ್ಪಡಿಸಿಕೊಂಡು ಕದನಕ್ಕೆ ಸಿದ್ಧವಾಗಿರತಕ್ಕ ಮುಖ್ಯರೆಂದರ್ಥ. ಗಡಿಪ್ರದೇಶಗಳ ರಕ್ಷಣೆಗಾಗಿ ವಿಜಯನಗರದ ವಿಸ್ತಾರವಾದ ಸಾಮ್ರಾಜ್ಯದಲ್ಲಿ ತೆರಿಗೆ ವಸೂಲಿಯ ಕ್ರಮಕ್ಕಾಗಿ ನಿರಂತರವಾಗಿ ಬಹುಮನಿಗಳೊಡನೆಯೂ, ಇತರ ಶತ್ರುಗಳೊಡನೆಯೂ, ಹೋರಾಡಲು ಬೇಕಾಗುವ ಸೈನ್ಯದ ನೆರವಿಗಾಗಿಯೂ ಈ ಪಾಳೆಗಾರ ಪದ್ಧತಿಯು ಏರ್ಪಟ್ಟಿತು.

ಮುಖ್ಯವಾಗಿ ಚಿತ್ರದುರ್ಗದ ರಾಜ್ಯದ ಬೊಕ್ಕಸದ ಆದಾಯದ ಮುಖ್ಯ ಮೂಲಗಳೆಂದರೆ ಗದ್ದೆ, ಬೆದ್ಧಲು, ಕಾಡಾರಂಬ, ಮಾರ್ಗಸುಂಕ, ಸ್ಥಳಸುಂಕ, ಹುಲ್ಲುಬನ್ನಿ, ಷರಾಬು, ಉಪ್ಪಿನಮೂಳೆ, ಆಚಾರಗಾಣಿಕೆ, ಯುದ್ದದಲ್ಲಿ ಶಸ್ತ್ರಾಸ್ತ್ರ ಇತ್ಯಾದಿ. ಖರ್ಚಿನ ಬಾಬ್ತಿನಲ್ಲಿ ಸುದ್ದಿತಂದ ಸುದ್ದಿಚಾರರಿಗೆ ಬಾಯಿತುಂಬ ಹೊನ್ನು ತುಂಬುವ, ಕಡೆತೋಡು, ಶಾಲ್‌ಜೋಡಿ. ಶತೃಉಗಳ ತಲೆ ಒಂದಕ್ಕೆ ೧೨೦ ರಿಂದ ೩೨೦ ವರಹ ಇನಾಮು ಕೊಡುವ ಪದ್ಧತಿ ಇತ್ಯಾದಿ. ಸಂಪತ್ತಿನಿಂದ ಕೂಡಿ ಚಿನ್ನದ ನಾಣ್ಯಗಳಿಂದ ಕೂಡಿದ್ದು ನೆರವು ನೀಡಲು ಅತುಳೇಶ್ವರದ ವರ್ತಕರು, ಶ್ರೀಮಂತರು ಸಿದ್ದರಾಗಿದ್ದರು. ಮತ್ತು ಚಿತ್ರದುರ್ಗದ ಗ್ರಾಮಗಳ ಆಳ್ವಿಕೆಗಾಗಿ ಬಾರಾಬಲೂತಿಯನ್ನು ಏರ್ಪಡಿಸಲಾಗಿತ್ತು. ಇದರಲ್ಲೆ ನಿಜ ಆಯಗಾರರು ಎಂದರೆ ಬಡಗಿ, ಕಮ್ಮಾರ, ತಳವಾರ, ಬೇಗಾರರು, ಅದೇ ಆಯಗಾರರಾದ, ಕುಲಾಲ, (ಕುಂಬಾರ) ನಾಪಿತ, ರಜತ, (ಅಗಸ) ಬಾರಿಕ, (ನಿರಗಂಟಿ) ಅಕ್ಕಸಾಲಿ ಮುಂತಾದವರು.

ಆಡಳಿತದ ಸುಗಮಕ್ಕಾಗಿ ನಾಯಕರು ಸಂಸ್ಥಾನವನ್ನು ಹಲವಾರು ವಿಭಾಗಗಳಾಗಿ ವಿಂಗಡಿಸಿದ್ದರು. ಅವುಗಳೆಂದರೆ ಗ್ರಾಮ, ಸೀಮೆ, ಮಾಗಣಿ, ಸ್ಥಳ, ಸಮ್ಮತು, ನಾಡು, ಪಟ್ಟಡಿ ಇತ್ಯಾದಿ. ಇವುಗಳನ್ನು ತೆರಿಗೆ ಉತ್ಪನ್ನದ ಆಧಾರದ ಮೇಲೆ ವಿಂಗಡಿಸಲಾಗಿತ್ತು. ಉದಾಹರಣೆಗೆ ಇಮ್ಮಡಿ ಮೆದಕೇರಿನಾಯಕರು ಮರಣ ಹೊಂದಿದಾಗ ಅವರ ಒಟ್ಟು ಆಳ್ವಿಕೆಯಲ್ಲಿ ೧೦.೦೦೩೦ ವರಹ ತೆರಿಗೆಯ ಸೀಮೆಯಿತ್ತು ಈ ಸೀಮೆಯನ್ನು ಭಾಗಗಳಾಗಿ ವಿಂಗಡಿಸಿ ಗುರುಕರಣ, ಕರಣಿಕ ಭೋನಪ್ಪ, ಅಬಿಗೆರೆ ಮಲ್ಲಣ್ಣ, ಕರಣಿಕ ಅಪ್ಪಣ್ಣ, ಮುಂತಾದವರನ್ನು ನೇಮಿಸಲಾಯಿತು. ಆಡಳಿತದ ನೆರವಿಗೆ ದಳವಾಯಿಗಳನ್ನು ನೇಮಿಸಲಾಯಿತು. ನಾಯಕರ ಅಂಗರಕ್ಷಕರು ಉದಾಹರಣೆಗೆ ಇಮ್ಮಡಿ ಮದಕರಿನಾಯಕನಿಗೆ ಬಿಳಿಚೋಡು ಹನುಮಯ್ಯ, ಭಾಣದ ನಿಂಗಯ್ಯ, ಹಿರೇಸೇರುಗಾರ ಕೆಂಚಯ್ಯ, ಸರಳಮ್ಮೆ, ಕಾಟಮ್ಮ, ಅಪ್ಪರಸಯ್ಯ, ಅಕ್ಕಸಾಲೆ, ಕಂಠಸಾಲೆ, ಕಂಠಮಾಲೆ, ಮುಂತಾದವರು.[೩]

ಪ್ರಾಚೀನ ಕಾಲದಲ್ಲಿ ಚಿತ್ರದುರ್ಗದ ಪ್ರದೇಶದಲ್ಲಿ ಕೃಷಿ ಅಭಿವೃದ್ಧಿಗೆ ಕೆರೆ ನೀರಾವರಿ, ಜೊತೆಗೆ ಕಪಿಲೆ ಬಾವಿ ನೀರಾವರಿಗೂ ಗಮನ ಕೊಟ್ಟಿದ್ದರು. ಕಪಿಲೆ ನೀರಾವರಿಯಲ್ಲಿ ರಾಗಿ, ಜೋಳ, ಮುಂತಾದ ತರಿಪಸಿಲು, ಬೆಳೆಯುತ್ತಿದ್ದರು. ಹೊಸದುರ್ಗ ತಾಲೂಕಿನ ಬಾಗೂರು ತನ್ನ ವಿಶಿಷ್ಟ ಭತ್ತದ ಬೆಳೆಯಿಂದಾಗಿ "ಸಣ್ಣಕ್ಕಿ ಬಾಗೂರು" ಎಂಬ ಹೆಸರನ್ನು ಪಡೆದುಕೊಂಡಿದ್ದನ್ನು ನಾವು ಗಮನಿಸಬಹುದು.

ಐಮಂಗಲದ ಕೆರೆಯ ಮಾಗಣಿಯಲ್ಲಿ ಬೆಳೆಯುತ್ತಿದ್ದ ವೀಳ್ಯಯದೆಲೆ ತುಂಬಾ ಹೆಸರನ್ನು ಪಡೆದುಕೊಂಡಿತ್ತು. ಆಗಿನ ಕಾಲದ ಬೆಳೆಗಳು ಈ ಪ್ರದೇಶದ ಮಳೆಯಾಧಾರಿತ ಕೃಷಿಯಿಂದಾಗಿ ಈಗಲೂ ಉಳಿದುಬಂದಿವೆ. ಪ್ರಾಚೀನ ಕಾಲದಲ್ಲಿ ರಾಗಿ, ಜೋಳ, ನವಣೆ, ಹತ್ತಿ, ಎಣ್ಣೆಕಾಳು, ಹುರುಳಿ, ಮುಂತಾದವನ್ನು ಕಾಡಾರಂಭದಲ್ಲಿ, ನೆಲ್ಲು, ವೀಳ್ಯದೆಲೆ, ಅಡಕೆ, ಬಾಳೆ, ಆಲೇಕಬ್ಬು, ಮೆಣಸು, ಶುಂಠಿ, ಮತ್ತು ಅರಿಸಿನ ಮುಂತಾದವನ್ನು ನೀರಾರಂಬದಲ್ಲೂ ಬೆಳೆಯುತ್ತಿದ್ದರು. ಇವುಗಳಿಗೆ ಸುಂಕಗಳನ್ನು ಕಟ್ಟುತ್ತಿದ್ದರು ಎಂಬುದು ತಿಳಿದುಬರುತ್ತದೆ. ಭತ್ತದ ಬೆಳೆಯಲ್ಲಿ ಸೋಜಿಗ ಭತ್ತ, ಮತದ ಭತ್ತ, ಮುಂತಾದ

ತಳಿಗಳು ಬಳಕೆಯಲಿದ್ದು ಕಣದ ಕೆಲಸ ಮಾಡುವವನಿಗೆ, ಹೊರೆಹುಲ್ಲು" ಮೊರಭತ್ತದ ಕೂಲಿ ಕೊಡುತ್ತಿದ್ದರು. ಗದ್ದೆಕೊರು ಕೂರಿಗೆ ಹೊಲ ಮುಂತಾದ ಅಳತೆಯನ್ನು ತಿಳಿಸುವ ಪಾರಿಭಾಷಿಕ ಶಬ್ದಗಳು ಈ ಪ್ರದೇಶದಲ್ಲಿ ಬಳಕೆಯಲ್ಲಿದ್ದವು. ಒಂದು ದಿನದಲ್ಲಿ ಒಂದು ಕೂರಿಗೆಯಲ್ಲಿ ಬಿತ್ತುವನೆಲವನ್ನು ಕೂರಿಗೆ ಹೊಲ ಎಂದು ಈಗಲು ಕರೆಯಲಾಗುತ್ತದೆ.

೩.೨ ತೆರಿಗೆಯ ವಿಧಗಳು

ತೆರಿಗೆ ಬಗ್ಗೆ ಹೇಳುವುದಾದರೆ ಸಾಮಾನ್ಯವಾಗಿ ಹಲವಾರು ರೀತಿಯ ತೆರಿಗೆಗಳನ್ನು ನಾವು ನೋಡಬಹುದು. ಪ್ರಾದೇಶಿಕವಾಗಿ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ತೆರಿಗೆಗಳು ಕಂಡು ಬರುತ್ತವೆ. ಇದನ್ನು ವಸ್ತು ಅಥವಾ ಹಣದ ರೂಪದಲ್ಲಿ ಪಡೆಯಲಾಗುತ್ತಿತ್ತು. ಭೂಮಿಯನ್ನು ಅಳೆದು ಆ ಮೂಲಕ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಮತ್ತೊಂದೆಡೆ ಹಣದ ರೂಪದಲ್ಲಿ ಸುಂಕವನ್ನು ವಿದಿಸುತ್ತಿದ್ದರು ಇವುಗಳು ರಾಜ್ಯದ ಆದಾಯಗಳಾಗಿದ್ದವು.

ಅದೇ ರೀತಿಯಾಗಿ ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ ವ್ಯಾಪರ ಸುಂಕ, ಭೂಕಂದಾಯ, ವಸ್ತುಗಳ ಮೇಲಿನ ಸುಂಕ, ವೃತ್ತಿ ಸುಂಕ, ಮನೆ ಸುಂಕ, ಪದಾರ್ಥಗಳ ಮೇಲಿನ ಸುಂಕ, ಇನ್ನೂ ಅನೇಕ ರೀತಿಯ ತೆರಿಗೆಗಳನ್ನು ನಾವು ಕಾಣಬಹುದಾಗಿದೆ. ಈ ಎಲ್ಲಾ ತೆರಿಗೆಗಳು ನಾಡಿನ ಆಡಳಿತಕ್ಕೆ ಮತ್ತು ರಾಜ್ಯದ ಬೊಕ್ಕಸಕ್ಕೆ ಆದಾಯಗಳಾಗಿದ್ದವು. ಇದರಿಂದ ಬಂದ ಹಣದಲ್ಲಿ ರಾಜ್ಯಾಡಳಿತವನ್ನು ನಿರ್ವಹಿಸುತ್ತಿದ್ದರು. ವಿವಿಧ ರೀತಿಯ ತೆರಿಗೆಗಳನ್ನು ಈ ಮುಂದಿನಂತೆ ನೋಡಬಹುದು.

ಭೂಕಂದಾಯ

ಭೂಕಂದಾಯವು ಸಾಮಾನ್ಯವಾಗಿ ಭೂಮಿಗೆ ವಿಧಿಸುತ್ತಿದ್ದ ಕಂದಾಯವಾಗಿದೆ. ಈ ಪದ್ಧತಿಯಲ್ಲಿ ಭೂಮಿಯನ್ನು ಊಳಲು ಅಗತ್ಯವಾದ ನೇಗಿಲುಗಳ ಸಂಖ್ಯೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು. ಬಿ. ಎಲ್. ರೈಸ್ ಹೇಳುವಂತೆ ಚಿತ್ರದುರ್ಗದ ನಾಯಕರು ಪ್ರತಿ ನೇಗಿಲು ಒಂದಕ್ಕೆ ಒಂದೂವರೆ ದುರ್ಗಿ ಪಗೊಡ ಕಂದಾಯ ವಿಧಿಸುತ್ತಿದ್ದರು ಎಂದಿದ್ದಾರೆ. ನೆಲದ ಸ್ವರೂಪ ಮತ್ತು ಬೆಳೆಯನ್ನು ಅನುಸರಿಸಿ ಭೂಕಂದಾಯವನ್ನು ನಿಗಧಿಪಡಿಸುತ್ತಿದ್ದರು. ಹಾಗೆಯೇ ಕೆರೆ, ಬಾವಿ, ನದಿ ನೀರಿನಿಂದ ಕೃಷಿಗೊಳಪಟ್ಟ ಭೂ ಹಿಡುವಳಿಗಳ ಮೇಲೆ ಕೆಲವು ಸಲ ಪ್ರತಿಯೊಂದು ನೇಗಿಲಿಗೆ ಎರಡರಿಂದ ಮೂರರಷ್ಟು ಭೂ ಕಂದಾಯವು ಭೂಮಿಯ ಒಟ್ಟು ಆದಾಯದ ಮೂಲವಾಗಿತ್ತು.

ಭೂ ಕಂದಾಯವನ್ನು ಸಾರ್ವಜನಿಕ ಸೇವಕರು, ಸಣ್ಣ ರೈತರು ಕಂದಾಯವನ್ನು ಸಲ್ಲಿಸುತ್ತಿದ್ದರು ಆದರೆ ಗೌಡರು, ಶ್ರೀಮಂತರು, ಭೂ ಮಾಲೀಕರು, ಹಾಗೂ ಅವರ ಸ್ನೇಹಿತರು ಕಂದಾಯವನ್ನು ಸಲ್ಲಿಸುತ್ತಿರಲಿಲ್ಲ. ಭೂಮಿಯನ್ನು ವರ್ಗೀಕರಣ ಮಾಡಿಕೊಂಡಿದ್ದರು. ಎರೆಭೂಮಿ, ಬೆದ್ದು ಭೂಮಿ, ಕೆನ್ನೆಲ ಮತ್ತು ತೋಟ ಇತ್ಯಾದಿ. ಭೂಮಿಯ ಫಲವತ್ತತೆಯ ಆಧಾರದ ಮೇಲೆ ಭೂಮಿಯ ಕಂದಾಯವನ್ನು

ವಸೂಲಿ ಮಾಡುತ್ತಿದ್ದರು. ಅಂದರೆ ಎರೆ ಭೂಮಿಗೆ ಪ್ರತ್ಯೇಕವಾದ ಕಂದಾಯ, ಬೆದ್ದು ಭೂಮಿಗೆ ಪ್ರತ್ಯೇಕವಾದ ಕಂದಾಯ, ಮತ್ತು ಗದ್ದೆ ನೀರಾವರಿಗೆ ಪ್ರತ್ಯೇಕವಾದ ಕಂದಾಯವನ್ನು ವಸೂಲಿ ಮಾಡುತ್ತಿದ್ದರು.

ವೀಳ್ಯದೆಲೆ ಸುಂಕ

ನೀರಿನ ಆಸರೆ ಇರುವ ಕಡೆಗಳಲ್ಲಿ ಈ ವಾಣಿಜ್ಯ ಬೆಳೆ ಬೆಳೆಯುತ್ತಿದ್ದರು. ವೀಳ್ಯದೆಲೆಯ ಬಳಕೆಯು ವ್ಯಾಪಕವಾಗಿತ್ತು ಈ ಎಲೆ ತೋಟವಾದ್ದರಿಂದ ವ್ಯವಸಾಯದ ಬೆಳವಣಿಗೆಯಲ್ಲಿ ಬೆಳೆಯ ಪಾತ್ರ ಪ್ರಮುಖವಾದದು. ನೀರಿನ ಆಸರೆ ಇರುವ ಕಡೆಗಳಲ್ಲಿ ಈ ವಾಣಿಜ್ಯ ಬೆಳೆ ತೆಗೆಯುತ್ತಿದ್ದರು ವೀಳ್ಯದೆಲೆಯನ್ನು ಸಂತೆಗೆ ತಂದು ಮಾರಾಟ ಮಾಡುತ್ತಿದ್ದ ವ್ಯಾಪಾರಿಗಳು ಸಾಮಾನ್ಯವಾಗಿ ಎಲೆಯನ್ನು ಬೆಳೆಯುತ್ತಿದ್ದವರೇ ಆಗಿರುತ್ತಿದರು. ಈ ವ್ಯಾಪಾರಿಗಳು ಸುಂಕವನ್ನು ತಾವು ಬೆಳೆದ ಸರಕಿನ ರೂಪದಲ್ಲಿಯೇ ನೀಡಬೇಕಾಗಿದ್ದಿತು. ಅವರು ಮಾರುತ್ತಿದ್ದ ಎಲೆಯ ಪ್ರಮಾಣಕ್ಕೆ ತಕ್ಕಂತೆ ಅವರು ನೀಡಬೆಕಿದ್ದ ಸುಂಕದ ಎಲೆಯ ಪ್ರಮಾಣವನ್ನು ನಿರ್ಧರಿಸಲಾಗುತ್ತಿತ್ತು. ಈ ತೆರಿಗೆ ಯಾವುದೇ ಅಧಿಕಾರಿಗೆ ಸೇರುತ್ತಿರಲಿಲ್ಲವೆಂಬುದು ಗಮನಿಸಬೇಕಾದ ವಿಷಯ, ಇದನ್ನು ಸ್ಥಳೀಯ ದೇವಾಲಯಕ್ಕೆ ನೀಡಲಾಗುತ್ತಿತ್ತು, ನೀಡಬೇಕಿದ್ದ ಎಲೆಯ ಪ್ರಮಾಣ ಹೇರಿಗೆ ಅಂದರೆ ಬಂಡಿಯಲ್ಲಿ ಬಂದರೆ ೧೦೦ ಎಲೆ, ತಲೆ ಮೇಲೆ ಹೊತ್ತು ತಂದರೆ ೫೦ ಎಲೆ ಆಗಿತ್ತು, ಸುಂಕವನ್ನು ಎಲೆಯ ರೂಪದಲ್ಲಿ ಕೊಡುತ್ತಿದ್ದರು. ಇದನ್ನೇ ವೀಳ್ಯದೆಲೆ ಸುಂಕವೆಂದು ಕರೆಯುತ್ತಿದ್ದರು.

ಕುರಿ ಸುಂಕ

ಸಾಮಾನ್ಯವಾಗಿ ಪಶುಪಾಲನೆಯಿಂದಲು ರಾಜ್ಯಾದಾಯವಾಗುತ್ತಿತ್ತು. ಇದರಲ್ಲಿ ಕುರಿ ತೆರಿಗೆಯೂ ಒಂದು ಈ ತೆರಿಗೆ ಪ್ರಮಾಣ ಹೆಚ್ಚಾಗಿದ್ದು ಇದರಿಂದ ಕುರಿಗಾಯಿಗಳು ಈ ತರಿಗೆಯನ್ನು ಕಡಿಮೆಮಾಡಿಕೊಳ್ಳುವಂತೆ ವಿಜ್ಞಾಪನೆ ಮಾಡಿಕೊಳ್ಳುತ್ತಿದ್ದರು. ಇವರ ಮನವಿಯನ್ನು ರಾಜ ಅನೇಕ ವೇಳೆ ಪುರಷ್ಕರಿಸುತ್ತಿದ್ದು ಕಂಡುಬರುತ್ತದೆ ಮತ್ತು ಕುರಿಯ ಸಾಕಾಣಿಯ ಬಾಬ್ತು ಕುರಿಯ ಪ್ರಮಾಣದಲ್ಲಿ ಕುರಿಯ ರೂಪದಲ್ಲಿ ತೆರಿಗೆಯನ್ನು ಸಲ್ಲಿಸುತ್ತಿದ್ದರು. ಇದರಿಂದ ಕುರಿಯ ಸುಂಕವನ್ನು ನೀಡುತ್ತಿದ್ದದು ತಿಳಿದುಬರುತ್ತದೆ. ಇಂತಹ ತೆರಿಗೆ ಮನ್ನಣೆ ನೀಡಿರುವುದನ್ನು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ (ಶಾಸನ ಸಂ. ೭೬ ಮತ್ತು ಅದೇ ತಾಲ್ಲೂಕಿನ ೪೮ನೆಯ ಶಾಸನಗಳು ಉಲ್ಲೇಖಿಸುತ್ತವೆ.

ಉಪ್ಪಿನ ಮೋಳೆಗಳ ಸುಂಕ. ಈ ಉಲ್ಲೇಖ ಹೆಚ್ಚಾಗಿ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದೊರಿಯುತ್ತದೆ. ಒಂದು ಶಾಸನದಲ್ಲಿ ಉಪ್ಪಿನ ಮೋಳೆಯ ಅಳತೆಯನ್ನು ನೀಡಲಾಗಿದೆ. ನಾಲ್ಕು x ಮೂರು (೪ x ३) ಹಾಗೂ ಎರಡು ಮೊಳ ಆಳದ ಚವುಕದಲ್ಲಿ ನೀರು ಹರಿಸಿ ಉಪ್ಪನ್ನು ತೆಗೆಯುತ್ತಿದ್ದರು ಎಂಬ ಸಂಗತಿ

ತಿಳಿಯುತ್ತದೆ. (ಮೊಳಕಾಲ್ಮೂರು ೯) ಅದೇ ಗ್ರಾಮದ ಉಪ್ಪಾರರಿಗೆ ಉಪ್ಪಿನ ಮೋಳೆಯನ್ನು ಸರ್ವಮಾನ್ಯ ಮಾಡಿದ ದಾಖಲೆಗಳು ಕಂಡುಬರುತ್ತವೆ.

ಪಿಂಜಣಿಗರ ಸುಂಕ

ಹತ್ತಿಯನ್ನು ಹಿಂಜುವ ಇವರೂ ಬಟ್ಟೆ ಕೈಗಾರಿಕೆಯ ಮೊದಲ ಹಂತದ ಕೆಲಸಗಾರರು ಇವರಿಗೆ ಸದಾಶಿವರಾಯನು ಕೆಲವೂ ರಿಯಾಯಿತಿಗಳನ್ನು ನೀಡುತ್ತಾನೆ. ಇಲ್ಲಿ ಹತ್ತಿ ಬಟ್ಟೆಯನ್ನು ಹಿಂಜುವ ಪಿಂಜಣಿಗರಿಗೆ ಸುಂಕವನ್ನು ನಿಗಧಿ ಮಾಡಲಾಗಿತ್ತು ಇದರಿಂದ ಈ ಭಾಗದ ಜನರು ಕಟ್ಟುತ್ತಿದ್ದದು ಕಂಡುಬರುತ್ತದೆ.

ಆಯಗಾರರು

ಚಿತ್ರದುರ್ಗದ ಪ್ರದೇಶದಲ್ಲಿ ನಾಯಕ ಅರಸರ ಕಾಲದಿಂದಲೂ ಸ್ವತಂತ್ರ್ಯ ನಂತರದವರೆಗೂ ರೂಢಿಯಲ್ಲಿದ್ದ ಪದ್ಧತಿ ಎಂದರೆ ಆಯಗಾರಿಕೆ, ಪದ್ಧತಿಯಾಗಿತ್ತು. “ಆಯಗಾರ” ಎಂಬ ಪದ ಜಾಗತಿಕ ಪದವಲ್ಲ, ಉದ್ಯೋಗವನ್ನು ಸೂಚಿಸುವ ವೃತ್ತಿ ವಾಚಕ ಪದ. ಸೇವೆಯಿಂದ ಧಾನ್ಯದ ರೂಪದಲ್ಲಿ ಆದಾಯ ಪಡೆಯುವುದು ಎಂಬರ್ಥ. ಆಯಗಾರಿಕೆ ಪದ್ಧತಿ ಗ್ರಾಮೀಣ ಪ್ರದೇಶದಲ್ಲಿ ಭೂಹಿಡುವಳಿದಾರರಿಗೂ ಹಾಗೂ ಭೂರಹಿತ ಕಸುಬುದಾರರಿಗೂ ಇರವ ವೃತ್ತಿ ಸಂಬಂಧದ ವ್ಯವಸ್ಥೆಯಾಗಿದೆ. ಇದು ಪರಸ್ಪರ ಬದುಕಿಗೆ ಪೂರಕ ಹಾಗೂ ಪೋಷಕವಾಗಿತ್ತು. ಭೂಹಿಡುವಳಿದಾರರಿಗೂ ಹಾಗೂ ಆಯಗಾರರಿಗೂ ಇರುವ ಸಂಬಂಧ ತುಂಬ ನಿಕಟವಾಗಿತ್ತು.[೫] ಆದುದರಿಂದ ಒಕ್ಕಲು ಕುಟುಂಬಗಳಿಗೆ ಕುಂಬಾರ, ಬಡಗಿ, ಕಮ್ಮಾರ, ಕ್ಷೌರಿಕ ಮುಂತಾದ ಆಯಗಾರರ ನೆರವು ಅವಶ್ಯಕವಾಗಿತ್ತು. ಆಯ ಕರಾರುವಕ್ಕಾದ ಕೂಲಿಯಲ್ಲಿ, ಆರ್ಥಿಕ ಒಡಂಬಡಿಕೆಯೂ ಅಲ್ಲ. ಪರಸ್ಪರ ಕೊಡುಕೊಳ್ಳುವಿಕೆಯನ್ನು ಒಪ್ಪಿಕೊಂಡಿರುವ ಸಾಮಾಜಿಕ ಸೌಹಾರ್ದಯುತ ಸಂಬಂಧವನ್ನು ಹೊಂದಿರುವ ವ್ಯವಸ್ಥೆ, ಚಿತ್ರದುರ್ಗದ ಪಾಳೆಗಾರರ ಕಾಲದಲ್ಲಿ ಹನ್ನೆರಡುಜನ ಕೈವಾಡದವರು ಗ್ರಾಮದಲ್ಲಿ ವಾಸಿಸುವ ಜೋಯಿಸ, ಬಡಗಿ ಕಮ್ಮಾರ, ಕುಂಬಾರ, ಅಕ್ಕಸಾಲಿಗ, ತೋಟ, ತಳವಾರ, ಓಲೇಕಾರ, ಪೂಜಾರಿ, ಕ್ಷೌರಿಕ, (ಕೆಲಸಿಗ) ನೇಕಾರ, (ಜೇಡ) ಇವರೆ ಮೊದಲಾದ ಆಯಾಗಾರರು ಇದ್ದರು. ಇವರು ತಮ್ಮ ಇಡೀವರ್ಷ ತಮ್ಮ ತಮ್ಮ ಉದ್ಯೋಗದಿಂದ ರೈತರಿಗೆ ನೆರವಾಗುತ್ತಿದ್ದರು. ಇದರಿಂದ ಪ್ರತಿಕುಳದಿಂದ ಎಂದರೆ ಎರಡೆತ್ತಿನ ಬೇಸಾಯ ಒಂದಕ್ಕೆ ಮೊರಬತ್ತ, ಹೊರೆಹುಲ್ಲು ಪಡೆದು ಜೀವಿಸುತ್ತಿದ್ದರು. ‘ಹೊರೆಹುಲ್ಲು’ ಎಂದರೆ ತೆನೆ ಸಮೇತವಾಗಿ ಬತ್ತದ ಹುಲ್ಲು ಅಥವಾ ಜೋಳದ ಸಪ್ಪೆ ಎಂದರ್ಥ. ಆಯಾಗಾರರು ಆಗಿನ ಗ್ರಾಮೀಣ ಜೀವನದಲ್ಲಿ ಬಹುಮುಕ್ಯ ಪಾತ್ರವಹಿಸಿದ್ದರು. ಅವರು ಗ್ರಾಮದ ಜೀವನಾಡಿ ಎನಿಸಿದ್ದರು. ಒಂದೊಂದು ಗ್ರಾಮದ ವ್ಯವಸಾಯ ಜೀವನವು ಆಯಾಗಾರ ಸಹಕಾರದಿಂದ ಸ್ವಯಂ ಪೂರ್ಣವಾಗಿತ್ತು ಎನ್ನಬಹುದು. ಈ ವ್ಯವಸ್ಥೆ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲಿಯೂ, ಹಲವು ಶತಮಾನಗಳಿಂದಲೂ ಇತ್ತು.

ಈ ಆಯಾಗಾರರು ಗ್ರಾಮದ ಅವಶ್ಯಕತೆಗಳನ್ನು ಪೂರೈಸುತ್ತಿದ್ದರು. ಉದಾಹರಣೆಗೆ ರೈತನಿಗೆ ಬೇಕಾದ ನೇಗಿಲು, ಕುಂಟೆ, ರಂಟೆ ಮುಂತಾದ ಮರದ ಕೃಷಿಸಾಮಗ್ರಿಗಳನ್ನು ಬಡಗಿ ಒದಗಿಸುತ್ತಿದ್ದನು. ಕಬ್ಬಿಣದ ಉಪಕರಣಗಳನ್ನು ಕಮ್ಮಾರ ಒದಗಿಸುತ್ತಿದ್ದನು. ಮಡಕೆ, ಕುಡಿಕೆ ಮುಂತಾದ ಮಣ್ಣಿನ ಪಾತ್ರೆಗಳನ್ನು ಕುಂಬಾರ ಮಾಡಿಕೊಡುತ್ತಿದ್ದನು. ಅಗಸ ಬಟ್ಟೆಗಳನ್ನು ಮಡಿಮಾಡುತ್ತಿದ್ದನು. ಕ್ಷೌರಿಕ ತಲೆ ಕೂದಲುಗಳನ್ನು ಕತ್ತರಿಸುವ ಸೇವೆ ಮಾಡುತ್ತಿದ್ದನು, ಚಮ್ಮಾರ ಹಗ್ಗ, ಮಿಣಿ, ಚಪ್ಪಲಿಗಳನ್ನು ತಯಾರಿಸುತ್ತಿದ್ದನು. ಇವರ ಸೇವೆಯು ಭೂಹಿಡುವಳಿದಾರರಲ್ಲದೆ ವಿವಿಧ ಕುಟುಂಬಗಳಿಗೂ ದೊರೆಯುತ್ತಿತ್ತು. ಗ್ರಾಮಗಳಲ್ಲಿ ನೆಡೆಯುವ ಹುಟ್ಟು, ಸಾವು, ಮದುವೆ, ಹಬ್ಬ, ಜಾತ್ರೆ, ಮುಂತಾದ ಸಾಂಸ್ಕೃತಿಕ ಸಂದರ್ಭಗಳಲ್ಲಿಯೂ ಆಯಾಗಾರರು ಪ್ರಮುಖವಾಗಿ ನೆರವಾಗುತ್ತಿದ್ದರು.[೬] ಇವರುಗಳು ಪ್ರತಿಯೊಬ್ಬರೂ ಸಹ ತಮ್ಮ ತಮ್ಮ ವೃತ್ತಿಗೆ ಅನುಸಾರವಾಗಿ ತೆರಿಗೆಗಳನ್ನ ರಾಜ್ಯಕ್ಕೆ ನೀಡುತಿದ್ದರು. ಊರಿನ ಒಂದೊಂದು ಬೀದಿಯಲ್ಲಿ ವಾಸಿಸುತ್ತ ತಮ್ಮ ಕಸುಬನ್ನು ಮಾಡುತ್ತಿರುತ್ತಿದ್ದರು. ಬಾಗೂರಿನ ಶಾಸನವೂಂದರಲ್ಲಿ ಕೆಲವರೊಂದಿಗೆ ಹೆಸರಿಸುವಾಗ ಬಡಿಗೆಯ ಮಾದಪ್ಪ ಶೆಟ್ಟಿ, ಎಂಬ ವ್ಯಕ್ತಿಯನ್ನು ಹೆಸರಿಸಿದೆ. ಇವರು ವೃತ್ತಿ ತೆರಿಗೆಯನ್ನು ಕೊಡಬೇಕಾಗಿದ್ದುದು ಕಂಡುಬರುತ್ತದೆ. ಮತ್ತೊಂದೆಡೆ ಇವರಿಗೆ ತೆರಿಗೆ ವಿನಾಯಿತಿಯನ್ನು ನೀಡಿದ್ದನ್ನು ಹೇಳುವಂತಹ ಶಾಸನಗಳು ಬಾಗೂರು, ಕೊಗುಂಡಿ, ಮತ್ತೊಡುಗಳಲ್ಲಿ ಕಂಡುಬರುತ್ತವೆ. ಇಲ್ಲಿ ಕಮ್ಮಾರರಿಗೆ ಕಮ್ಮಾರಿ ಸುಂಕ, ಬಡಗಿಗೆ ಮತ್ತು ಚಮ್ಮಾರರಿಗೆ ಪ್ರತ್ಯೇಕವಾದ ಸುಂಕಗಳನ್ನು ವಿದಿಸಿದ್ದು ಕಂಡುಬರುತ್ತದೆ.

ವ್ಯಾಪಾರಿ ಸುಂಕ

ಸಾಮಾನ್ಯವಾಗಿ ರಾಜನಿಗೆ ಆದಾಯವನ್ನು ತರುತ್ತಿದ್ದ ಪ್ರಮುಖ ಬಾಬ್ತು ಎಂದರೆ ವ್ಯಾಪಾರ. ವ್ಯಾಪಾರವನ್ನು ಒಂದುಕಡೆ ನಿರ್ದಿಷ್ಟ ದಿನದಲ್ಲಿ ನಡೆಸಲು ನಿಗದಿತವಾದ ಸಮಯದಲ್ಲಿ ವ್ಯಾಪಾರ ವಹಿವಾಟುಮಾಡುವುದಕ್ಕೆ ಸಂತೆ ಎಂದು ಕರೆಯುತ್ತಾರೆ. ಸಂತೆಗೆ ಬರುವ ಮತ್ತು ಮಾರಾಟವಾಗುವ ವಸ್ತುಗಳೆಂದರೆ, ಸಾಂಬಾರ ಪದಾರ್ಥಗಳಾದ ಮೆಣಸಿನಕಾಯಿ, ಕೊತ್ತುಂಬರಿ, ಹುಣಸೆಹಣ್ಣು ಮುಂತಾದ ಪದಾರ್ಥಗಳ ಮೇಲೆ ಸುಂಕ ಹಾಕುತ್ತಿದ್ದರು. ಇದೊಂದು ನಿಶ್ಚಿತವಾದ ಆದಾಯವೇ ಆಗಿತ್ತು. ಸಂತೆಗೆ ನಾನಾ ಮೂಲೆಗಳಿಂದ ವ್ಯಾಪಾರಿಗಳು ತಮ್ಮ ಸರಕನ್ನು ಮಾರಾಟಮಾಡಲು ಬರುತ್ತಿದ್ದರು ಹಾಗೆಯೇ ಕೆಲವೊಮ್ಮೆ ಸಂತೆಯ ಆದಾಯವನ್ನು ಸ್ಥಳೀಯ ದೇವರಿಗೆ ನೀಡುತಿದ್ದರು.

ಹೊಳಲ್ಕೆರೆ ತಾಲ್ಲೂಕಿನ ತೆಂಕಣ ಅಯ್ಯಾವಳೆ ಎನಿಸಿದ ನಿರುಗುಂದದ ನಲ್ಲೆ ಸೆಟ್ಟಿ ನಬರರು ಮತ್ತು ಮರಿದಂಡಗಳು ಸಿದ್ದನಾಥ ದೇವರಿಗೆ ಸುಂಕವನ್ನು ಬಿಟ್ಟಂತೆ ಹೇಳಿದೆ. ಇಂತಹ ಸಂತೆಗಳಲ್ಲಿ ವಸೂಲಾಗುವ ಸುಂಕವು ರಾಜ್ಯಕ್ಕೆ ಪ್ರಮುಖವಾದ ಆದಾಯವಾಗಿದೆ. ಕೆಲವೊಮ್ಮೆ ರಾಜ ಈ ಸುಂಕವನ್ನು ಸ್ಥಳಿಯರಿಗೆ ಅವರ ಅನುಕೂಲಕ್ಕೆ ವೆಚ್ಚ ಮಾಡಲು ಆದೇಶಿಸುತ್ತಿದ್ದು ಉಂಟು ಎಂದು ಶಾಸನಗಳಲ್ಲಿ ಉಲ್ಲೇಖವು ಇದೆ.

ಭತ್ತದ ಬೆಳೆಯ ಮೇಲಿನ ಸುಂಕ

ಭತ್ತದ ಬೆಳೆಯಲ್ಲಿ "ಸೋಜಿಗೆ ಭತ್ತ" ಮಠಭತ್ತ, ಮುಂತಾದ ತಳಿಗಳು ಬಳಕೆಯಲ್ಲಿದ್ದವು. ಕಣದ ಕೆಲಸ ಮಡುವವವರಿಗೆ ಹೊರೆಹುಲ್ಲು ಮೊರ ಭತ್ತದ ಕೂಲಿ ಕೊಡುತ್ತಿದ್ದರು. ಗದ್ದೆಕೋರು, ಕೂರಿಗೆ ಹೊಲ ಮುಂತಾದ ಅಳತೆಗಳನ್ನ ತಿಳಿಸುವ ಪಾರಿಭಾಷಿಕ ಶಬ್ದಗಳು ಈ ಪ್ರದೇಶದಲ್ಲಿ ಬಳಕೆಯಲ್ಲಿದ್ದವು. ಒಂದು ದಿನದಲ್ಲಿ ಒಂದು ಕೂರಿಗೆಯಲ್ಲಿ ಬಿತ್ತಬಹುದಾದಷ್ಟು ಜಮೀನನ್ನು "ಒಂದು ಕೂರಿಗೆ ಹೊಲ" ಎಂದು ಈಗಲೂ ಕರೆಯಲಾಗುತ್ತಿರುವುದು ಪ್ರಾಚೀನ ಕಾಲದ ಪಳಿಯುಳಕೆಯೇ ಆಗಿದೆ.

ಮದುವೆ ಸುಂಕ

ಚಿತ್ರದುರ್ಗದ ಭಾಗದಲ್ಲಿ ವಸ್ತುಗಳ ಮೇಲಲ್ಲದೆ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯವಾದ ಮದುವೆಯ ಮೇಲು ಸುಂಕವನ್ನು ಹಾಕುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಈ ಸುಂಕ ಜನರಿಗೆ ಹೆಚ್ಚು ಭಾರವಾಗುತ್ತಿತ್ತು. ಇದನ್ನು ಕಡಿಮೆ ಮಾಡಲು ಅಥವಾ ಕೈಬಿಡಲು ಜನರು ರಾಜರ ಮೊರೆ ಹೋಗುತ್ತಿದ್ದರು ಕೆಲವೊಮ್ಮೆ ಜನರೆ ಮುಂದಾಗಿ ತಮ್ಮ ಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳ ಸಂದರ್ಭದಲ್ಲಿ ದೇವರಿಗೆ ಸುಂಕವನ್ನು ಕಾಣಿಕೆ ರೂಪದಲ್ಲಿ ಕೊಡುತ್ತಿದ್ದದು ಉಂಟು ಚಿತ್ರದುರ್ಗ ತಾಲ್ಲೂಕಿನ ಶಾಸನವೊಂದರಲ್ಲಿ ವೈಶ್ಯ ಕುಲದವರು ತಾವು ಪ್ರತಿಷ್ಟಾಪಿಸಿದ ಮುಖ್ಯಪ್ರಾಣದೇವರಿಗೆ ತಮ್ಮ ಮನೆಗಳಲ್ಲಿ ನೆಡೆಯುವ ಮದುವೆ, ನಾಮಕರಣ, ಶೋಭನ ಮುಂತಾದ ಸಂದರ್ಭಗಳಲ್ಲಿ ದೇವರಿಗೆ ದಾನ ನೀಡಿದ್ದಾರೆ ಮತ್ತು ಹೊಳಲ್ಕೆರೆ ತಾಲ್ಲೂಕಿನ ದುಮ್ಮಿಯ ಶಾಸನದಲ್ಲಿ ಉಪ್ಪಾರ ಜಾತಿಯ ನಾನಾ ಒಳಜಾತಿಗಳಿಗೆ ಸಮಸ್ತರು ಸೇರಿ ಮದುವೆಯ ಸುಂಕವನ್ನು ಸರ್ವಮಾನ್ಯ ಮಾಡಿದ ಉಲ್ಲೇಖವಿದೆ. ಅದೇ ಜಾಜೂರು ಪ್ರದೇಶದ ಶಾಸನದಲ್ಲಿ ಮದುವೆಯ ಸುಂಕವನ್ನು ಬಿಟ್ಟಂತೆ ಉಲ್ಲೇಖವಿದೆ. ಮತ್ತು ಈ ಸುಂಕದಿಂದ ರಿಯಾಯಿತಿ ಕೊಡಿಸುವಲ್ಲಿ ದುಮ್ಮಿಯ ಪಟ್ಟಣಸ್ವಾಮಿ ಮಾಳಸೆಟ್ಟಿ ಮತ್ತು ಅವನ ಮಕ್ಕಳು ನಾಡಪಟ್ಟಣಸ್ವಾಮಿಯ ಪಾತ್ರ ಗಮನಾರ್ಹವಾದದು.

ಕ್ಷೌರಿಕ ಸುಂಕ

ಇದು ಒಂದು ವೃತ್ತಿ ತೆರಿಗೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಬಳಿಯಿರುವ ಮತ್ತೋಡು ಎಂಬಲ್ಲಿ ವೃತ್ತಿ ತೆರಿಗೆ ಜಾರಿಯಲ್ಲಿತ್ತು. ಕೆಲವರು ಶುಭ ಸಂದರ್ಭಗಳಲ್ಲಿ ತೆರಿಗೆಗಳನ್ನು ಮನ್ನಾ ಮಾಡುತ್ತಿದ್ದರು. ಕ್ರಿ. ಶ. ೧೬೦೦ ರಲ್ಲಿ ದೊಡ್ಡಣ್ಣನಾಯಕನ ಪಟ್ಟದ ಕುಮಾರ ಚಿನ್ನದ ಗಿರಿಯಪ್ಪ ನಾಯಕನಿಗೆ ವಿವಾಹ ಜರಿಗಿದ ಸಂದರ್ಭಗಳಲ್ಲಿ ಮತ್ತೋಡಿನ ಕ್ಷೌರಿಕರು ತಮಗೆ ವಿಧಿಸಲಾಗಿದ್ದ ಕ್ಷೌರಿಕ ತೆರಿಗೆಯನ್ನು ಮನ್ನಾ ಮಾಡುವಂತೆ ಬೇಡಿಕೊಂಡಾಗ ದೊರೆ ಅವರ ಮನವಿಯನ್ನು ಮನ್ನಿಸಿ ಕ್ಷೌರಿಕರಿಂದ ಸಾವಿರ ವರಹ ಬರುವುದಿದ್ದರೂ ಸರಿ ಅದನ್ನು ಬಿಟ್ಟುಬಿಟ್ಟಿದ್ದೇನೆ ಎಂದು ಘೋಷಿಸಿ ತೆರಿಗೆಯನ್ನು ರದ್ದು ಗೊಳಿಸಿ ಶಾಸನ ಹಾಕಿಸಿದನು. ಇದರಿಂದ ವೃತ್ತಿತೆರಿಗೆ ಆ ಭಾಗದಲ್ಲಿ ಇದ್ದದ್ದು ಕಂಡುಬರುತ್ತದೆ.

ಪದಾರ್ಥಗಳ ಮೇಲಿನ ಸುಂಕ

ಈ ಪ್ರದೇಶದಲ್ಲಿ ಕೆಲವು ಪದಾರ್ಥಗಳ ಮೇಲೆಯೂ ಸುಂಕವನ್ನು ವಿಧಿಸುತಿದ್ದರು. ಅವುಗಳೆಂದರೆ ಶುಂಠಿ, ಅಡಿಕೆ, ಮೆಣಸು, ಔಷದಿಗಳ ಮೇಲೆ ಸುಂಕವನ್ನು ಹಾಕುತಿದ್ದರು, ಎಂಬುದು ಶಾಸನಗಳಲ್ಲಿ ಉಲ್ಲೇಖವಿರುವುದನ್ನು ನಾವು ಕಾಣಬಹುದು. ಒಟ್ಟಾರೆಯಾಗಿ ಚಿತ್ರದುರ್ಗದ ಭಾಗದಲ್ಲಿ ಈ ಮೇಲ್ಕಂಡ ವಿವಿಧ ರೀತಿಯ ಶಾಸನಗಳಲ್ಲದೆ ಇನ್ನು ಹಲವಾರು ಸುಂಕಗಳು ಕಂಡುಬರುತ್ತಿದ್ದವು.

೩.೩ ಚಿತ್ರದುರ್ಗದ ಶಾಸನಗಳಲ್ಲಿ ತೆರಿಗೆ ಪದ್ಧತಿ

ಚಿತ್ರದುರ್ಗ ಪ್ರದೇಶವು ಅತ್ಯಂತ ಪ್ರಾಚೀನ ಕಾಲದ್ದೆಂದು ಸಾರುವಂತಹ ಅನೇಕ ಪುರಾವೆಗಳು ಇವೆ. ಈ ಪ್ರದೇಶ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ ಭಾಗವಾಗಿತ್ತೆಂದು ಭಾವಿಸಲು ಸಿದ್ದಾಪುರ, ಬ್ರಹ್ಮಗಿರಿ, ಮತ್ತು ಜಟಿಂಗರಾಮೇಶ್ವರಗಳಲ್ಲಿ ದೊರಕಿರುವ ಅಶೋಕ ಚಕ್ರವರ್ತಿಯ ಶಾಸನಗಳೇ ಸಾಕ್ಷಿ' ಶಾತವಾಹನರ ಕಾಲದ ಸಂಸ್ಕೃತಿಯ ಹಲವಾರು ಅವಶೇಷಗಳನ್ನು ಚಂದ್ರವಳ್ಳಿಯ ಉತ್ಖನನಗಳು ಬೆಳಕಿಗೆ ತಂದಿವೆಯಷ್ಟೆ ಕದಂಬರ ಮಯೂರ ಶರ್ಮನ ಪ್ರಪ್ರಥಮ ಸಂಸ್ಕೃತ ಶಾಸನವೆನಿಸಿರುವ ಚಂದ್ರವಳ್ಳಿಯ ಶಾಸನವನ್ನು ಹೊಂದಿರುವ ಹೆಗ್ಗಳಿಕೆಯು ಈ ಜಿಲ್ಲೆಯದು.

ಚಿತ್ರದುರ್ಗದಲ್ಲಿ ಆರು ತಾಲೂಕುಗಳಿವೆ ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು, ಮೊಳಕಾಲ್ಮೂರು, ಚಳ್ಳಕೆರೆ ಈ ಜಿಲ್ಲೆ ಒಳಗೊಂಡಿದೆ. ಈ ಜಿಲ್ಲೆಯಲ್ಲಿ ಒಟ್ಟು "೪೫೩" ಕನ್ನಡ ಶಾಸನಗಳಿವೆ, ಇದರಲ್ಲಿ ಸುಮಾರು "೧೩೫" ಶಾಸನಗಳಲ್ಲಿ ಕಾಲಮಾನಗಳೇ ಸೂಚಿತವಾಗಿಲ್ಲ. ಈ ಜಿಲ್ಲೆಯಲ್ಲಿನ ಕನ್ನಡ ಶಾಸನಗಳಲ್ಲಿ ಚಿತ್ರದುರ್ಗ ತಾಲ್ಲೂಕಿನ ಸುಮಾರು ಕ್ರಿ. ಶ. ೫೦೦ ರ ಕಾಲದ ಶಾಸನ ಸಂಖ್ಯೆ ೨೪ ಮತ್ತು ೪೩ ಶಾಸನಗಳೇ ಅತ್ಯಂತ ಮುಂಚಿನವು. ಹಾಗೆಯೇ ಅದೇ ತಾಲೊಕಿನ ಕ್ರಿ. ಶ. ೧೮೭೧ ರ ಶಾಸನ ಸಂಖ್ಯೆ ೧೬ ಅತ್ಯಂತ ಈಚಿನದು. ಚಿತ್ರದುರ್ಗ ಜಿಲ್ಲೆಯ ಕನ್ನಡ ಶಾಸನಗಳಲ್ಲಿ ಕೆಲವು ಅತ್ಯಂತ ದೊಡ್ಡ ಶೀಲಾಶಾಸನಗಳಿವೆ ಅವುಗಳಲ್ಲಿ ಒಟ್ಟು ೭೯ ದೊಡ್ಡಶಾಸನಗಳಿವೆ. ಅತಿಹೆಚ್ಚಿರುವುದು ಚಿತ್ರದುರ್ಗ ತಾಲ್ಲೂಕಿನಲ್ಲಿ ೩೧ಶಾಸನಗಳು. ಶೀಲಾಶಾಸನಗಳು ಅತ್ಯಂತ ಕಡಿಮೆಯಿರುವುದು ಮೊಳಕಾಲ್ಮೂರು ತಾಲ್ಲೂಕಿನಲ್ಲಿ ೪ಶಾಸನಗಳು ಕಂಡುಬರುತ್ತವೆ. ಹಾಗೆಯೇ ಸುಧೀರ್ಘ ಪಾಠವುಳ್ಳ ಕನ್ನಡದ ತಾಮ್ರಶಾಸನಗಳೂ ಇವೆ ಅವುಗಳಲ್ಲಿ ಒಟ್ಟು ೧೮ ತಾಮ್ರಶಾಸನಗಳು, ಚಿತ್ರದುರ್ಗದಲ್ಲಿ ವೀರಗಲ್ಲುಗಳು ಒಟ್ಟು ೭೩ ಕಂಡುಬಂದಿವೆ ಮತ್ತು ೧೮ ಕನ್ನಡ ತಾಮ್ರಶಾಸನಗಳು ಕಂಡುಬಂದಿವೆ, ಇವುಗಳಲ್ಲಿ ಸಂಪೂರ್ಣವಾಗಿ ಕನ್ನಡ ಶಾಸನಪಾಠವಿರುವುದು ಭಾಗಶಃ ೧೫ಶಾಸನಗಳಲ್ಲಿ. ಸಂಸ್ಕೃತ ಶಾಸನಗಳು ಭಾಗಶಃ ಕನ್ನಡ ಈಗಿರುವುದು ೩ ಶಾಸನಗಳು. ಚಿತ್ರದುರ್ಗ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ತಲಾ ೨ ಮೊಳಕಾಲ್ಮೂರು ಮತ್ತು ಹೊಳಲಕೆರೆ ತಾಲೊಕುಗಳಲ್ಲಿ

ತಲಾ ೫ ಹಿರಿಯೂರು ತಾಲೊಕಿನಲ್ಲಿ ೩ ಚಳ್ಳಕೆರೆ ತಾಲೊಕಿನಲ್ಲಿ ಕೇವಲ ೧ ಹೀಗಿದೆ ಇವುಗಳ ಸ್ಥಾಪನೆ.[೪]

೩.೩ಚಿತ್ರದಯರ್ಗದ ಶಾಸನಗಳಲ್ಲಿ ತೆರಿಗೆ ಉಲ್ಲೇಖ

ಚಿತ್ರಹಳ್ಳಿ ಈಶ್ವರಗುಡಿ ಮುಂದೆ ನೆಟ್ಟಕಲ್ಲು (ಹೊಳಲ್ಕೆರೆ)[೫]

ಈ ಶಾಸನವು ಶ್ರೀ ಮನ್ಮಹಾರಾಜಾಧಿ ರಾಜಪರಮೇಶ್ವರ ಪ್ರೌಢಪ್ರತಾಪ ಅಚ್ಚುತರಾಯ ಮಹಾರಾಯ ಹಡಪದ ಎಂದು ಸಿಗುವಂತಹ ಒಂದು ಶಾಸನ ಇದರ ಕೆಲವು ಸಾಲುಗಳು ಅಳಿಸಿಹೋಗಿವೆ. ಈ ಶಾಸನದಲ್ಲಿ "ಮದುವೆ ಸುಂಕ" ವನ್ನು ಪಡೆದಂತಹ ಉಲ್ಲೇಖವಿದೆ ಸಾಮಿಮಾಳಿಸೆಟ್ಟಿ ...ಕಳು ಎಂದಿದೆ ಮುಂತಾಗಿ ಪೂರ್ಣವಾದ ಮಾಹಿತಿ ದೊರೆತಿಲ್ಲ. ಇದರಲ್ಲಿ ಸುಂಕ ನೀಡಿದ್ದು ತಿಳಿದುಬರುತ್ತದೆ.[೧]

ಚಿಕ್ಕಜಾಜೂರು ಅದೇ ಗ್ರಾಮದ ಆಂಜನೇಯ ದೇವಸ್ಥಾನದ ಪ್ರಾಕಾರದಲ್ಲಿ ನೆಟ್ಟ ೧ನೇ ಕಲ್ಲು [೬]

೧೪೬೨ ನೇ ಪಾರ್ವತಿ ಸಂವಸ್ಥರದ ಮುಂದಿನ ಅಕ್ಷರಗಳು ಅಳಿಸಿಹೊಗಿವೆ ಮತ್ತು ೧೦ಲು ರಾಜಾಧಿ ರಾಜ ರಾಜಪರಮೇಶ್ವರ ವೀರ ಪ್ರತಾಪ ಅಚ್ಚುತಾಮಹಾರಾಯರು ವಿದ್ಯಾನಗರವೆಂಬ ಮಹಾಪಟ್ಟಣದಲ್ಲಿ ... ನಂತರ ಸರ್ವಮಾನ್ಯವಾಗಿ ಪಾಲಿಸಿದೆವೆಂಬ ನಿರೂಪದಿಂದ ಅವರ ಹಿರಿಯ ಮಲ್ಲಪಂಣ ಅಯ್ಯನವರು ಜಾಜೂರು ಸೀಮೆಯ ಮದುವೆಯ ಸುಂಕವನ್ನು ಸರ್ವಮಾನ್ಯವಾಗಿ ಬಿಟ್ಟಿರುವ ತೆರಿಗೆ ಎಂಬುದು ಉಲ್ಲೇಖವಿದೆ. ಇದರಿಂದ ಈ ಭಾಗದಲ್ಲಿ ಮದುವೆಗೆ ಸುಂಕ ಇತ್ತು ಎಂಬುದು ಈ ಶಾಸನದಿಂದ ತಿಳಿಯುತ್ತದೆ.[೨]

'ಜಾಜೂರು' ಅದೇ ಹೊಬಳಿ ಕಡೂರು ಗ್ರಾಮಕ್ಕೆ ಉತ್ತರದಲ್ಲಿರುವ ಗುಡ್ಡದ ಪಾರ್ಶ್ವದಲ್ಲಿ ವೀರಭದ್ರ ದೇವಸ್ಥಾನಕ್ಕೆ ಆಗ್ನೇಯದಲ್ಲಿ ಬಂಡೆಯ ಮೇಲೆ [೭]

೧೪೬೨ ರ ಶಾಸನ ಅಚ್ಚುತರಾಯರ ಆಳ್ವಿಕೆಯಲ್ಲಿ ಜಾಜೂರ ಗಣಚಾರೀಪ ಅಂಗರಂಗವಹಿ ಭೋಗಕ್ಕೆ ಸಮರ್ಪಿಸಿದೆವು ಎಂದು ತಿಳಿಸುವ ಕಡೂರ ಧರ್ಮಶಾಸನ ಇದಾಗಿದೆ. ಇದರಲ್ಲಿ ದೇವರಿಗೆ ಅಮೃತಪಡಿ, ನಂದಾದೀಪ ಅಂಗರಂಗವಯಿಭೋಗಕ್ಕೆ ಅಚ್ಚುತರಾಯ ಆಣೇಮಾಡಿ ವಿರೂಪ್ಪಂಣ... ನವರು ಕಡ ಊರಗ್ರಾಮ (೧) ವೊಂದನು ಸರ್ವಮಾನ್ಯಮಾಡಿದ ಉಲ್ಲೇಖವಿದೆ ಮತ್ತು ಗ್ರಾಮಕ್ಕೆ ಅರಸುಗಳು, ಗಣಚಾರಿಗಳು, ಸುಂಕದವರು, ತಳ್ವಾರರು ಕಣಿಕೆಯರು ತೆರಿಗೆ ನೀಡಿದ ಬಗ್ಗೆ ಈ ಶಾಸನ ತಿಳಿಸುತ್ತದೆ.

ರಾಮಗಿರಿ ಹೋಬಳಿ ರಾಮಗಿರಿ ಗ್ರಾಮದ ಕರಿಯಮ್ಮನ ದೇವಾಲಯದ ಉತ್ತರಕ್ಕೆ ಬಿದ್ದಿರುವ ಕಲ್ಲು [೮]

ರಾಮಗಿರಿ ಗ್ರಾಮದ ಕರಿಯಮ್ಮನ ದೇವಾಲಯದ ಉತ್ತರಕ್ಕೆ ಬಿದ್ದಿರುವ ಕಲ್ಲು. ಈ ಶಾಸನವು ಶ್ರೀ ಮನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀವೀರಕೃಷ್ಣರಾಯರ ಮಹಾಪ್ರಧಾನ ಬಾಗೂರುಮಲ್ಲರಸಯ್ಯನವರು ರಾಮಗಿರಿಯಲ್ಲಿ ದೇವರ ನೈವೇದ್ಯಕ್ಕೆ ಉದಯದ ಕಾಲದಲ್ಲಿ ಮೊಸರು ಭೋಜನಕ್ಕೆ ಸುಂಕವನ್ನು ನೀಡಬೇಕೆಂದು ಉಲ್ಲೇಖಿಸುತ್ತದೆ.

ಅದೇ ಗ್ರಾಮದ ಗುಡ್ಡದ ಮೇಲೆ ಸಿದ್ದೇಶ್ವರ ದೇವಲಯದ ಬಳಿ ನಟ್ಟ ಕಲ್ಲು [೯]

ಅದೇ ಗ್ರಾಮದ ಕರಿಸಿದ್ದೇಶ್ವರ ಬೆಟ್ಟದ ಮೇಲೆ ಸಿದ್ದೇಶ್ವರ ದೇವಾಲಯದ ಬಳಿ ನೆಟ್ಟಕಲ್ಲು ರಾಮಗಿರಿಯ ರಾಮರಾಯದೇವರ ಅಮೃತ ಪಡಿಗೆ ಪ್ರತಿ ತಿಂಗಳು ಒಂದಕೆ ರಾಮಯ್ಯದೇವರಿಗೆ ೩ ವೀರಭದ್ರ ದೇವರಿಗೆ ೨ ಒಟ್ಟು ಐದು ಹಣವನ್ನು ಅಥವಾ ಸುಂಕ ಕೊಡಬೇಕೆಂದು ಶಾಸನದಲ್ಲಿ ಉಲ್ಲೇಖವಿದೆ.

ಹೊಸದುರ್ಗ ಅದೇ ಹೋಬಳಿ ಮತ್ತೋಡು ಗ್ರಾಮದ ನೇರ್ಲಕೆರೆ ನರಸಮ್ಮನಿಂದ ಬಂದ ತಾಮ್ರಶಾಸನ [೧೦]

ಮತ್ತೋಡು ಗ್ರಾಮದಲ್ಲಿ ದೊರೆತ ಒಂದು ಶಾಸನ ಇದರ ಕಾಲ ೧೫೯೩ ದೊರೆತಿರುವ ಸ್ಥಳ ಗ್ರಾಮದ ಹಜಾರ ಸಂಕಪ್ಪನ ಮನೆ ಹಿತ್ತಲಲ್ಲಿ ಬಿದ್ದಿರುವ ಕಲ್ಲು. ಪಟ್ಟದಕುಮಾರ ಚಿಂನ್ನದಗಿರಿಯಪ್ಪ ನಾಯಕರ ವಿವಾಹ ಮಹೋತ್ಸವ ಸಮಯದಲ್ಲಿ ಕ್ಷೌರಿಕರು ತಮ್ಮ ತಮ್ಮ ತೆರಿಗೆಯನ್ನು ಕೊಡಬೇಕೆಂದು ಭಿನ್ನಹ ಮಾಡಲಾಗಿದೆ.

ಅದೇ ಬಾಗೂರು ಹೋಬಳಿ ಬಾಗೂರು ಗ್ರಾಮದ ಚಂದ್ರಪುರೀ ವೂರಬಾಗಿಲ ವುತ್ತರಭಾಗದಲ್ಲಿ ನೆಟ್ಟಕಲ್ಲು [೧೧]

ಬಾಗೂರು ಗ್ರಾಮದ ಚಂದ್ರಪೂಜಾರೀ ವೊರಬಾಗಿಲ ಉತ್ತರ ಭಾಗದಲ್ಲಿ ನೆಟ್ಟಕಲ್ಲು. ಇದರ ಕಾಲ ೧೫೬೮ ಈ ಶಾಸನದಲ್ಲಿ ತೆರಿಗೆ ಬಗ್ಗೆ ಉಲ್ಲೇಖವಿದೆ. ನಾವಿಂದರ ತೆರಿಗೆ, ಸಿದ್ಧಾಯಬಿಟ್ಟ ಸುಂಕತಳವಾರಿಕೆಯು ಮುಂತಾಗಿ ಸರ್ವಮಾನ್ಯವಾಗಿ ಪಾಲಿಸುತ್ತೇವೆಂದು ರಾಮರಾಜ ಅಯ್ಯನವರಿಗೆ ನಿರೂಪಗೊಡಲಾಗಿಯೆ ಕೃಷ್ಣಪ್ಪನಾಯಕರಿಗೆ ಬಾಗೂರು ಸೀಮೆಯ ನಾಯಿಂದರಿಗೆ, ತೆರಿಗೆ ಸಿದ್ಧಾಯ ಬಿಟ್ಟ ಮತ್ತು ತಳವಾರಿಕೆಯು ಸರ್ವಮಾನ್ಯವಾಗಿ ಬಿಟ್ಟ ತೆರಿಗೆಯಾಗಿದೆ.

ಬಾಗೂರು ಗ್ರಾಮ ಅದೇ ಊರಬಾಗಿಲ ಬಳಿ ದಕ್ಷಿಣದಕಡೆ ನಟ್ಟ ಕಲ್ಲು [೧೨]

ಅದೇ ಊರಬಾಗಿಲ ಬಳಿ ದಕ್ಷಿಣದಕಡೆ ನೆಟ್ಟ ಕಲ್ಲು. ಈ ಶಾಸನದ ಕಾಲ ೧೫೫೩ ಇದು ಮದುವೆ ಸುಂಕದ ಬಗ್ಗೆ ತಿಳಿಸುತ್ತದೆ. ಇದರಲ್ಲಿ ಮದುವೆ ಸುಂಕವನ್ನು ಸರ್ವಮಾನ್ಯವಾಗಿ ಬಿಟ್ಟಿರುವಂತಹ ಉಲ್ಲೇಖವಿದೆ.

ಅದೇ ಗ್ರಾಮದಲ್ಲಿ ವಳಗೆರೆಯಲ್ಲಿ ಅರಳಿಮರದ ಬಳಿ ಬಿದ್ದಿರುವ ಕಲ್ಲು

ಗ್ರಾಮದ ವಳಗೆರೆಯಲ್ಲಿ ಅರಳಿಮರದ ಬಳಿ ಬಿದ್ದಿರುವ ಒಂದು ಕಲ್ಲು ಇದರ ಕಾಲ ೧೪೭೬ ಈ ಶಾಸನದಲ್ಲಿ ಒಂದು ವರ್ಷ ಸುಂಕವನ್ನು ಬಿಟ್ಟಿರುವ ವಿಷಯ ಉಲ್ಲೇಖವಿದೆ.

ನೇರ್ಲಕೆರೆ. ಅದೇ ಗ್ರಾಮದ ಹಜಾಮ ಸಂಕಪ್ಪನ ಮನೆ ಹಿತ್ತಲಲ್ಲಿ ಬಿದ್ದಿರುವ ಕಲ್ಲು (೧೩)

ನೇರ್ಲಕೆರೆ ಗ್ರಾಮದ ಹಜಾರ ಸಂಕಪ್ಪಯ್ಯನ ಮನೆಯ ಹಿತ್ತಲಿನಲ್ಲಿ ಬಿದ್ದಿರುವ ಕಲ್ಲು. ಈ ಶಾಸನದ ಕಾಲ ೧೫೯೩ ಇದರಲ್ಲಿ ಕೋಮಾರದ ಚಿನ್ನದಗಿರಿಯಪ್ಪನಾಯಕರ ವಿವಾಹ ಮಹೋತ್ಸವದ ಸಮಯದಲ್ಲಿ ಮತ್ತಿನಡುವಿನ ಸ್ಥಳದ ಕ್ಷೌರಿಕರು, ತಮ್ಮ ತಮ್ಮ ತೆರಿಗೆಯನ್ನು ಪಾಲಿಸುವಂತೆ ಉಲ್ಲೇಖವಿದೆ.

ಐಮಂಗಲ ಅದೇ ಹೋಬಳಿ ಯರಬಹಳ್ಳಿ ಗ್ರಾಮಕ್ಕೆ ಪೂರ್ವ ಭೂತಪುರದ ಗಿರಿಯಂಣನ ಹೊಲದಲ್ಲಿ (೧೪)

ಹಿರಿಯೂರು ಹೋಬಳಿ ಯರಬಳ್ಳಿ ಗ್ರಾಮಕ್ಕೆ ಭೂತಪುರದ ಗಿರಿಯಂಣನ ಹೊಲದಲ್ಲಿ ನೆಟ್ಟಕಲ್ಲು ಈ ಶಾಸನದ ಕಾಲದ ಬಗ್ಗೆ ಉಲ್ಲೇಖವಿಲ್ಲ. ಸ್ಥಳದ ಸುಂಕ ಕೊಡುವ ಬಗ್ಗೆ ಉಲ್ಲೇಖವಿದೆ. ಇದರಿಂದ ಈ ಭಾಗದ ಜನರು ತಾವು ನೆಲಸಿದ ಜಾಗಕ್ಕೆ ತೆರಿಗೆಯನ್ನು ನೀಡುತ್ತಿದ್ದು ಕಂಡುಬರುತ್ತದೆ.

ಹೊಳಲಕೆರೆ (೧೬)

ಕುರಿ ತೆರಿಗೆ ಪಶುಪಾಲನೆಯಿಂದ ರಾಜಾದಾಯವಾಗುತ್ತಿದ್ದ ಇನ್ನೊಂದು ಬಾಬ್ತು. ಇಲ್ಲಿ ಕುರಿತೆರಿಗೆಯನ್ನು ನೀಡುತ್ತಿದ್ದದು ಕಂಡುಬರುತ್ತದೆ. ಜನಸಾಮಾನ್ಯರಿಗೆ ಈ ತೆರಿಗೆ ಪ್ರಮಾಣ ಹೆಚ್ಚಾಗಿದ್ದು ಇದರಿಂದ ಕುರಿಗಾಯಿಗಳು ಈ ತೆರಿಗೆಯನ್ನು ಕಡಿಮೆ ಮಾಡಿಕೊಳ್ಳುವಂತೆ ವಿಜ್ಞಾಪನೆ ಮಾಡಿಕೊಳ್ಳುತ್ತಿದ್ದರು. ಇವರ ಮನವಿಯನ್ನು ರಾಜ ಅನೇಕ ಬಾರಿ ಪುರಸ್ಕರಿಸುತ್ತಿದ್ದು, ಇಂತಹ ತೆರಿಗೆ ಮನ್ನಣೆ ನೀಡಿರುವುದನ್ನು ಹೊಳಲಕೆರೆ ಶಾಸನ ಉಲ್ಲೇಖಿಸುತ್ತದೆ. ಅಚ್ಚುತರಾಯನ ಕಾಲದಲ್ಲಿ ಚಿತ್ರಹಳ್ಳಿನಾಡಿನ ಕುರುಬಗೌಡಗಳಿಗೆ ಪ್ರತಿ ವರ್ಷ ನೀಡುತ್ತಿದ್ದ "ಕುರಿತೆರಿಗೆ" ಯನ್ನು ಸರ್ವಮಾನ್ಯಮಾಡುವಂತೆ ಹೇಳಿದೆ. ಕ್ರಿ. ಶ. ೧೫೩೬ ಈ ತೆರಿಗೆಗಳಲ್ಲದೆ ವಡ್ಡರಾವುಳ, ಮುಂತಾದ ಉಲ್ಲೇಖವು ಜಿಲ್ಲೆಯ ಕೆಲವು ಶಾಸನಗಳಲ್ಲಿ ಕಂಡುಬಂದಿವೆ. ಇದಲ್ಲದೆ ಪೆರ್ಜುಂಕವೆಂಬ ತೆರಿಗೆಯೂ ಇದ್ದದು ಕಂಡುಬರುತ್ತದೆ.

ಚಿಕ್ಕಯಗಟಿ. ಅದೇ ಹೋಬಳಿ ಕಲ್ಲಕೆರೆ ಗ್ರಾಮದ ಹನುಮಂತ ದೇವಸ್ಥಾನದ ಉತ್ತರಕಡೆ ನೆಟ್ಟಕಲ್ಲು (೧೭)

ಇದೇ ಊರಿನ ಹನುಮಂತ ದೇವಸ್ಥಾನದ ಉತ್ತರಕಡೆ ನೆಟ್ಟಕಲ್ಲು. ಶಾಸನ ಕಾಲ ೧೪೫೭ ನೇ ಶಕವರ್ಷ ಕಲ್ಲಕೆರೆಯ ಗ್ರಾಮದ ಬೆದ್ದಲೆ, ಸುಂಕ ಮಡಿಗೆ ಮುಂತಾಗಿ ಆ ಗ್ರಾಮದ ಮೂಲೆಗೆ ಸಮೀಪ ಗದ್ದೆ, ಬೆದ್ದಲನು ನಾವು ಅಚ್ಚುತರಾಯರಿಗೆ ನೀಡಲಾಗಿದೆ ಎಂದು ಉಲ್ಲೇಖವಿದೆ.

ಹಿರಿಯೂರು. ಅದೇ ಗ್ರಾಮದ ಬೆಸ್ತರ ದೇವಾಲಯದ ಜಗಲಿಯ ಮೇಲೆ ನಟ್ಟಕಲ್ಲು [೧೮]

ಅದೇ ಗ್ರಾಮದ ಬೆಸ್ತರ ದೇವಾಲಯದ ಜಗಲಿಯ ಮೇಲೆ ನೆಟ್ಟಕಲ್ಲು. ಇದರ ಕಾಲದ ಉಲ್ಲೇಖವಿಲ್ಲ ಮತ್ತು ಕೆಲವು ಅಕ್ಷರಗಳು ಅಳಿಸಿಹೊಗಿವೆ, ಈ ಶಾಸನದಲ್ಲಿ ಸುಂಕವನ್ನು ಸರ್ವಮಾನ್ಯ ಮಾಡಿದ ಬಗ್ಗೆ ಉಲ್ಲೇಖವಿದೆ.

ಮೊಳಕಾಲ್ಮೂರು ತಾಲ್ಲೂಕು ದೇವಸಮುದ್ರ ಹೋಬಳಿ ದೇವಸಮುದ್ರ ಗ್ರಾಮದಲ್ಲಿ ಅಕ್ಕಸಾಲೆ ಗಂಗಾಧರಪ್ಪನ ಮನೆಯ ಪೂರ್ವಕ್ಕೆ ನಟ್ಟಕಲ್ಲು [೧೯]

ಚನ್ನಸಮುದ್ರದ ಹೋಬಳಿ ದೇವಸಮುದ್ರ ಗ್ರಾಮದಲ್ಲಿ ಅಕ್ಕಸಾಲಿ ಗಂಗಾಧರಪ್ಪನ ಮನೆಯ ಭಾಗಿಲ ಪೂರ್ವಕಡೆ ನೆಟ್ಟಕಲ್ಲು. ಈ ಶಾಸನದಲ್ಲಿ ಶ್ರೀ ಮನ್ಮಹಾಮಂಡಳೇಶ್ವರ ಅಳಿಯ ರಾಮರಾಯ ಅರಸುಗಳು ಧರ್ಮಪಾರುಪತ್ಯದ ಮೇಲೆ ವಿಠಲದೇವರ ಗುಡಿಯ ಶಿಲಾಶಾಸನವು ಶ್ರೀ ಕೃಷ್ಣದೇವಮಹಾರಾಯರು ಪ್ರಮಾಧಿ ಸಂವತ್ಸರ ಶ್ರಾವಣದಲ್ಲಿ ಶಾಸನವನ್ನು ಬರೆಸಿದರೆಂದು ತಿಳಿದು ಬರುತ್ತದೆ. ಇದರಲ್ಲಿ ಹಲವು ರೀತಿಯ ತೆರಿಗೆಗಳ ಉಲ್ಲೇಖವಿರುತ್ತದೆ ಅವುಗಳೆಂದರೆ, ಸ್ಥಳಸುಂಕ, ಹೇರುಗಳಿಗೆ ಸುಂಕ, ಪಿಂಜಣಿಗರು ಸುಂಕ, ಉಪ್ಪಿನಮೊಳೆ ಸುಂಕಗಳ ಬಗ್ಗೆ ಉಲ್ಲೇಖವಿದೆ. ಶಾಸನದ ಹಿಂಭಾಗದಲ್ಲಿ ಮೊದಲಾದ ಗ್ರಾಮಸ್ಥಳ ಸುಂಕ, ಅಂಗಡಿ ಸುಂಕ, ಕೈಮಗ ಸುಂಕ ಮುಂತಾದ ಉಲ್ಲೇಖಗಳು ಕಂಡುಬರುತ್ತವೆ.

ಮೊಳಕಾಲ್ಮೂರು. ಅದೇ ಹೋಬಳಿ ಸಿದ್ಧಾಪುರದ ಊರಮುಂದಲ ಹನುಮಂತ ದೇವಾಲಯದ ಮುಂದೆ ನೆಟ್ಟಕಲ್ಲು [೨೦]

ಅದೇ ಹೋಬಳಿ ಸಿದ್ಧಾಪುರದ ಊರಮುಂದಲದ ಹನುಮಂತ ದೇವಾಲಯದ ಮುಂದೆ ನೆಟ್ಟಕಲ್ಲು. ಇದರ ಕಾಲ ೧೪೭೭ ಈ ಶಾಸನವು ಸದಾಶಿವ ಮಹಾರಾಯರ ಕಾಲದ ಒಂದು ಶಾಸನ. ಈ ಶಾಸನದಲ್ಲಿ ನಾಯಿಂದರಿಗೆ ಬಿಟ್ಟಿರುವ "ಕಂದಾಯ" ಎಂದು ಶಾಸನದಲ್ಲಿ ಉಲ್ಲೇಖವಿದೆ.

ಅದೇ ಗ್ರಾಮ

ಚಕ್ಕಹೊಡೇರ ಬಂಡೆ ಮೇಲೆ ಕೋಣಗದದೇವರ"ಸುಂಕಕಂ"ನವರು ಆಯಗಾರಿಕೆಯವರು ಕೊಡುವ ಸುಂಕ ಎಂದು ಸುಂಕದ ಪ್ರಸ್ತಾಪವನ್ನು ಮಾಡಲಾಗಿದೆ. ಕೆಲವು ಅಕ್ಷರಗಳು ಬಿಟ್ಟುಹೊಗಿವೆ, ಇದರ ಬಗ್ಗೆ ಸರಿಯಾಗಿ ವಿವರಣೆ ಕಾಣುವುದಿಲ್ಲ.

ಅದೇ ಗುಂಡಿನ ಕೆಳಭಾಗದಲ್ಲಿ ಇರುವ ಶಾಸದಲ್ಲಿ ಉಪ್ಪಿನಮೂಳೆ ಮತ್ತು ಕಂದಾಯದ ಬಗ್ಗೆ ಉಲ್ಲೇಖವಿದೆ. ಕೆಲವು ಅಕ್ಷರಗಳು ಅಳಿಸಿಹೊಗಿವೆ. ಇದರ ಕಾಲ ೧೪೭೧ ಎಂದು ಅದರಲ್ಲಿ ಮೊದಲನೆಯ ಸಾಲಿನಲ್ಲಿ ಕಂಡುಬರುತ್ತದೆ.

ಚಿತ್ರದುರ್ಗ. ತಾಲ್ಲೂಕ್ ಗಾರೇಹಟ್ಟಿ ಗ್ರಾಮ ಅದೇ ಹೋಬಳಿ ಗಾರೇಹಟ್ಟಿ ಗ್ರಾಮದ ಮಹೇಶ್ವರ ದೇವಸ್ಥಾನದೊಳಗೆ ನಟ್ಟಕಲ್ಲು [೨೧]

ಅದೇ ಗ್ರಾಮದಲ್ಲಿ ಚೋಳೇಶ್ವರ ದೇವಸ್ಥಾನದೊಳಗೆ ನೆಟ್ಟಕಲ್ಲು. 4.6 x2.6 ಚೋಳರ ಕಾಲದ ಶಾಸನ ಈ ಶಾಸನದಲ್ಲಿ ಪ್ರಾರಂಭವಾಗುವ ಸಾಲುಗಳು ರಾಜನ ಬಗ್ಗೆ ಹೆಚ್ಚಾಗಿ ಹೊಗಳಿವೆ. ಶಾಸನದಲ್ಲಿ ಮುಖ್ಯವಾಗಿ ಹೊಗಳಿಕೆ ಪ್ರತಿಷ್ಠೆಗಳೇ ಹೆಚ್ಚಾಗಿ ಕಾಣಿಸುತ್ತವೆ ಮತ್ತು ಶಾಸನದಲ್ಲಿ ಸುಂಕ ನೀಡಿದ ಬಗ್ಗೆ ಉಲ್ಲೇಖವಿದೆ. ೪೦೦೦ ಸುಂಕ ನೀಡಿದ ವಿವರ ಕಂಡುಬರುತ್ತದೆ ಎಲೆಯ ಹೇರಿಂಗೆ ಎಲೆ ೧೦೦ ಅಡಿಕೆ ಹೇರಿಂಗೆ ಅಡಿಕೆ, ೩೦ ಎಣ್ಣೆಯ ಕೊಡಕ್ಕೆ ಎಣ್ಣೆಮಾನ ೧ ಈ ಕೆಲವು ತೆರಿಗೆಗಳನ್ನು ಶಾಸನದಲ್ಲಿ ನೋಡಬಹುದು.

ಚಿತ್ರದುರ್ಗದ ಅದೇ ಹೋಬಳಿ ಇಸಾಮುದ್ರದ ಬೋಗೇಶ್ವರ ದೇವಾಲಯದ ಬಳಿ ನೆಟ್ಟಕಲ್ಲು [೨೨]

ಇಸಮುದ್ರದ ಬೋಗೇಶ್ವರ ದೇವಾಲಯದ ಬಳಿ ನೆಟ್ಟಕಲ್ಲು. ಇದು ಚಾಳುಕ್ಯರ ಕಾಲದ ಶಾಸನವಾಗಿದೆ. ಈ ಶಾಸನದ ಕಾಲ ತಿಳಿದುಬಂದಿಲ್ಲ ಈ ಶಾಸನದಲ್ಲಿ ಶಕವರುಷ ೯೮೧ ಎಂದು ಹೇಳಲಾಗಿದೆ. ಸ್ವಸ್ತಿ ಶ್ರೀ ಸಿರಿಯಮ್ಮ ಗಾವುಣ್ಡಂ ಬೋಗೇಶ್ವರದೇವರ್ಗೆ ತೋಂಟದ ಗಾವುಂಡ "ಸುಂಕಮಂಬಿಟ್ಟಂ" ಎಂದು ಸುಂಕದ ಬಗ್ಗೆ ಉಲ್ಲೇಖವಿದೆ. ಶ್ರೀವಡ್ಡರಾವುಳದ ಪನ್ನಾಯದ ಪೇರ್ಗಡೆ ಅಲಿಮಯ್ಯಂತಮ್ಮ ದೆಸೆಯ ಸುಂಕಮಂಬಿಟ್ಟಂ ಎಂಬ ವಿವರ ಕಾಣುತ್ತದೆ ಮತ್ತು ಇದೇ ಶಾಸನದಲ್ಲಿ ಪೇರ್ಜುಂಕವೆಂಬ ಸುಂಕದ ಉಲ್ಲೇಖವಿದೆ.

ಹಿರೇಗುಂಟನೂರು. ಹೋಬಳಿ ಕ್ಯಾಸಾಪುರದ ಶ್ಯಾನುಭೋಗ ರಾಮಣ್ಣನವರಲ್ಲಿದ್ದ ತಾಮ್ರ ಶಾಸನ [೨೩]

ಹಿರೇಗುಂಟನೂರು ಹೋಬಳಿ ಕ್ಯಾಸಾಪುರದ ಶ್ಯಾನುಭೋಗ ರಾಮಣ್ಣನವರಲ್ಲಿದ್ದ ತಾಮ್ರ ಶಾಸನ ಇದರ ಕಾಲ ೧೫೭೪ ಇದು ಮದಕರಿನಾಯಕ ಮತ್ತು ಕಸ್ತೂರಿ ರಂಗಪ್ಪನಾಯಕನ ಹೆಸರು ಇರುವುದರಿಂದ ಈ ಶಾಸನ ಚಿತ್ರದುರ್ಗದ ಪಾಳೇಗಾರರ ಕಾಲದ್ದೆಂದು ತಿಳಿಯಬಹುದು. ಈ ಶಾಸನದಲ್ಲಿ ಸುಂಕವನ್ನು ಬಿಟ್ಟಂತಹ ಉಲ್ಲೇಖವಿದೆ.

ಹೊಳಲ್ಕೆರೆ ಕೋಟೆಬಾಗಿಲ ಎಡಬಾಗದಲ್ಲಿರುವ ಕಲ್ಲು [೨೪]

ಹೊಳಲ್ಕೆರೆ ಕೋಟೆಬಾಗಿಲ ಎಡಬಾಗದಲ್ಲಿರುವ ಕಲ್ಲು. ಈ ಶಾಸನದಲ್ಲಿ ಕೆಲವು ಪಂಕ್ತಿಗಳು ಇರುವುದಿಲ್ಲ ಈ ಶಾಸನವು ವಿಕ್ರಮ ವರ್ಷದ ಹದಿನೇಳನೆಯ ಮುತಸಂವತ್ಸರದ ವೈಶಾಖ ಸೋಮವಾರದಂದು ಪೊಳಲಕೆರೆಯ ಬಸದಿ ಎಂದಿದೆ... ಕೆಲವು ಸಾಲುಗಳು ಕಾಣುವುದಿಲ್ಲ ಮತ್ತು ಹನ್ನೊಂದು ಹಣವಿನ ಲೆಕ್ಕದ ತಿಂಗಳುದಿಂಗಳಿಗೆ ಸುಂಕದಿಂಬಿಟ್ಟ ಸಂಪತ್ತು ಎಂದು ಉಲ್ಲೇಕವಿದೆ.

ಹೊಳಲ್ಕೆರೆ ತಾಲ್ಲೂಕು ದುಮ್ಮಿ. ಗ್ರಾಮದ ಕೆರೆಮುಂದಲಗಡೆ ಇರುವ ಈಶ್ವರದೇವಸ್ಥಾನದ ರಂಗಮಂಟಪದ ದಕ್ಷಿಣದಕಡೆ ಗೋಡೆಕಲ್ಲಿನಲ್ಲಿ ಇರುವ ಕಲ್ಲು [(೨೫೦]

ಗ್ರಾಮದ ಕೆರೆಮುಂದಲಗಡೆ ಇರುವ ಈಶ್ವರದೇವಸ್ಥಾನದ ರಂಗಮಂಟಪದ ದಕ್ಷಿಣದಕಡೆ ಗೋಡೆಕಲ್ಲಿನಲ್ಲಿ ಇರುವ ಕಲ್ಲು. ಇದರ ಕಾಲ ಕ್ರಿ ಶ ೧೪೫೬ ಈ ಶಾಸನವು ಅಚುತದೇವರಾಯರ ಹೆಸರನ್ನು ಉಲ್ಲೇಖಿಸುತ್ತದೆ. ಸೆಟ್ಟಿಗಳು ಉಡುಪಾಜಿಗಳ ಸಮಸ್ತರೆಲ್ಲರು ಮದುವೆಯ ಸುಂಕವನ್ನು ಉಪ್ಪಾರ ಜಾತಿಗಳಿಗೆ ಸರ್ವಮಾನ್ಯವಾಗಿ ಬಿಟ್ಟ ಉಲ್ಲೇಖವಿದೆ, ಮತ್ತು ಮದುವೆಯ ಸುಂಕವನ್ನು ಸರ್ವಮಾನ್ಯವಾಗಿ ಬಿಡಿಸಿದವರು ದುಮ್ಮಿಯ ಪಟ್ಟಣ ಸ್ವಾಮಿ ಮಲ್ಲಿಸೆಟ್ಟಿಯರು ಎಂದು ಈ ಶಾಸನದಿಂದ ತಿಳಿಯುತ್ತದೆ.

ಒಟ್ಟಾರೆಯಾಗಿ ಚಿತ್ರದುರ್ಗದ ಕೆಲವು ಶಾಸನಗಳಲ್ಲಿ ಮಾತ್ರವೆ ತೆರಿಗೆ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಅಲ್ಲದೆ ಅಳತೆ ಮತ್ತು ತೂಕಗಳ ಬಗ್ಗೆಯು ಇನ್ನು ಕೆಲವು ಶಾಸನಗಳಲ್ಲಿ ಕಂಡುಬರುತ್ತವೆ. ಇಲ್ಲಿ ಅತಿ ಹೆಚ್ಚಾಗಿ ಕಂಡುಬರುವುದು ಮದುವೆ ಸುಂಕ ಮತ್ತು ದೇವರ ನೈವೇದ್ಯಕ್ಕೆ ನಿಗದಿಯಾಗಿರುವಂತಹದ್ದನ್ನು ಕಾಣಬಹುದು. ಇನ್ನುಳಿದ ಶಾಸನಗಳಲ್ಲಿ ದಾನವನ್ನು ನೀಡಿದ್ದರ ಬಗ್ಗೆ ದೇವಾಲಯಗಳನ್ನು ಕಟ್ಟಿಸಿದ್ದರ ವಿಚಾರ, ಕೆರೆ ನಿರ್ಮಾಣದ ವಿಚಾರ, ಅಂಗಭೋಗದ ವಿಚಾರ, ಭೂಮಿಯನ್ನು ದೇವರ ಹೆಸರಿನಲ್ಲಿ ದಾನ ಬಿಟ್ಟಿರುವಂತಹ ವಿಚಾರ ಮುಂತಾದ ವಿಷಯಗಳು ಕಂಡುಬರುತ್ತವೆ. ಈ ಅಧ್ಯಾಯದಲ್ಲಿ ಕೆಲವು ಶಾಸನಗಳಲ್ಲಿ ಕಂಡುಬರುವ ಸುಂಕದ ವಿಚಾರವನ್ನು ವಿವರಣೆಯೊಂದಿಗೆ ತಿಳಿಸಲಾಗಿದೆ.

ಅಡಿಟಿಪ್ಪಣಿ

೧ ಜಯವಂತ ಕುಳ್ಳಿ, ಪ್ರಾಚೀನ ಭಾರತದ ಕಂದಾಯ ವ್ಯವಸ್ಥೆ, ಪುಟ ೧

೨. ಗೋಪಾಲ್. ಡಾ. ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೧೬೧

೩. ಅದೇ ಪುಟ ೧೬೪

೪. ಅದೇ ಪುಟ ೪೮. ೪೯

೫. ಎ.ಕ. ರೈಸ್. ಸಂಪುಟ ೧೧. ಹೊಳ, ೪೯

೬. ಅದೇ ಹೊಳ, ೬೨. ೧೪೬೨

೭.. ಅದೇ ಹೊಳ, ೭೧. ೧೪೬೨

೮ ಅದೇ ಹೊಳ, ೭೩

೯. ಅದೇ ಹೊಳ, ೭೫

೧೦. ಅದೇ ಹೊಸ, ೯೪, ೧೫೬೯

೧೧. ಅದೇ ಹೊಸ, ೧೧೦, ೧೪೬೮

೧೨. ಅದೇ ಹೊಸ, ೧೧೧, ೧೪೪೩

೧೩ ಅದೇ ಹೊಸ, ೯೮, ೧೫೯೩

೧೪. ಅದೇ ಹಿರಿ, ೧೬, ೧೫೩೬

೧೫ ಅದೇ ಹೊಳ, ೭೮

೧೭. ಅದೇ ಚಳ್ಳ, ೧೨೫

೧೮. ಅದೇ ಹಿರಿ, ೩೯

೧೯. ಅದೇ ಮೊಳ, ೧

೨೦. ಅದೇ ಮೊಳ, ೬

೨೧. ಅದೇ ಚಿತ್ರ, ೩೪

೨೨. ಅದೇ ಚಿತ್ರ, ೭೫

೨೩. ಅದೇ ಚಳ್ಳ, ೨೩

೨೪. ಅದೇ ಹೊಳ, ೩

೨೫. ಅದೇ ಹೊಳ, ೧೫, ೧೧೩೮.

ಅಧ್ಯಾಯ ೪
ಅಳತೆ ಮಾಪನ ಮತ್ತು ತೂಕ

೪.೧ ಅಳತೆ ಮಾಪಕಗಳು

೪.೨ ಚಿತ್ರದುರ್ಗದ ಶಾಸನಗಳಲ್ಲಿ ಅಳತೆ ಮಾಪಕಗಳು

ಅಧ್ಯಾಯ ೪
ಅಳತೆ ಮಾಪನಗಳು

ಪ್ರಾಚೀನ ಕಾಲದ ಅಳತೆ ಪದ್ಧತಿಯಲ್ಲಿ ಆಯಾಯ ರಾಜರ ಕಾಲಕ್ಕೆ ತಕ್ಕಂತೆ ವಿವಿಧ ರೀತಿಯ ಅಳತೆ ಮಾಪನವನ್ನು ಹೊಂದಿದ್ದರು. ಒಂದೊಂದು ಪ್ರದೇಶದಲ್ಲಿ ಒಂದೊಂದು ಅಳತೆ ಮಾನಗಳನ್ನು ನಾವು ನೋಡಬಹುದು. ಒಂದು ಪ್ರದೇಶದಲ್ಲಿ ಪಣ, ಗದ್ಯಾನ, ವಿಸೆ, ಇದ್ದರೆ ಇನ್ನೊಂದು ಪ್ರದೇಶದಲ್ಲಿ ಇವುಗಳಲ್ಲಿ ಕೆಲವೆ ಮಾತ್ರ ಕಂಡುಬರುತ್ತವೆ. ಇನ್ನು ಕೆಲವು ಪ್ರದೇಶದಲ್ಲಿ ಪಣ, ಗದ್ಯಾಣ ವಿದ್ಧರು ಸುವರ್ಣ ಗದ್ಯಾಣ, ಪ್ರತಾಪ ಗದ್ಯಾಣ ಮುಂತಾದವು ಕಂಡುಬರುತ್ತವೆ. ಕೆಲವು ಪ್ರದೇಶದಲ್ಲಿ "ಮತ್ತರ್" ಎಂಬ ಅಳತೆ ಮಾನ ಕಂಡು ಬಂದರೆ ಇನ್ನು ಕೆಲವು ಪ್ರದೇಶದಲ್ಲಿ ದೇವರ ಹೆಸರಿನಲ್ಲಿ ಅಳತೆ ಕೋಲುಗಳು ಕಂಡುಬರುತ್ತವೆ. ಉದಹರಣೆಗೆ ಚಿಂತಾಮಣಿ ಕೋಲು, ಆಧಿತ್ಯ ದೇವರ ಕೋಲು, ಗಡಿಬಂದ ಕೋಲು ಮುಂತಾದ ಅಳತೆ ಕೋಲುಗಳನ್ನ ನೋಡಬಹುದು. ಒಂದೊಂದು ಪ್ರದೇಶಕ್ಕೂ ವಿವಿಧ ರೀತಿಯ ಅಳತೆ ಮಾನಗಳು ಕಂಡುಬರುತ್ತವೆ. ಆದರೆ ಅಳತೆ ಮಾತ್ರ ಒಂದೆ ಆಗಿರುತ್ತದೆ.

ಚಿತ್ರದುರ್ಗದ ಜಟಂಗ ರಾಮೇಶ್ವರ ದೇವಾಲಯದ ಶಾಸನದಲ್ಲಿ ನಾಣ್ಯಗಳು ಮತ್ತು ಅಳತೆಗೆ ಸಂಬಂಧಿಸಿ ಉಲ್ಲೇಖಗಳು ಕಂಡು ಬಂದಿವೆ. ಅವುಗಳೆಂದರೆ ಸುವರ್ಣ ಗದ್ಯಾಣ, ಪ್ರತಾಪ ಗದ್ಯಾಣ, ಗದ್ಯಾಣ, ಧರಣ, ಕೊಳಗ, ಖಂಡುಗ, ಸೊಲ್ಲಗೆ, ಅದ್ದ, ಬಳ್ಳ, ಮುಂತಾದವುಗಳು ಕಂಡುಬಂದಿವೆ.[(೧)] ಅನೇಕ ವಸ್ತುಗಳಿಗೆ ಆ ಕಾಲದಲ್ಲಿದ್ದ ಬೆಲೆ ಪಟ್ಟಿಯನ್ನು ನಾವು ಗಮನಿಸಬಹುದು. ಮೊಳಕಾಲ್ಮೂರು ಶಾಸನ ಸಂಖ್ಯೆ ೩೧ 'ವೀಸ' ದ ಉಲ್ಲೇಖವಿದೆ. ಶಾ.ಸಂಖ್ಯೆ ೩ ಹಿರಿಯೂರು. ಕ್ರಿ. ಶ. ೧೨೨೦ ರ ಶಾಸನವೊಂದರಲ್ಲಿ ಭೂ ಮಾಪನಕ್ಕೆ ಸಂಬಂಧಿಸಿದಂತೆ "ಗಂಗನಗಳೆ"ಯ ಉಲ್ಲೇಖವಿದೆ. ಇವುಗಳಲ್ಲದೆ ಶಾಸನಗಳನ್ನು ಹೊರತುಪಡಿಸಿ ಅನೇಕ ರೀತಿಯ ಅಳತೆ ಮಾಪನಕ್ಕೆ ಸಂಬಂಧಿಸಿದ ವಿವರಗಳನ್ನು ನೊಡಬಹುದು.[೧]

೪.೧ ಅಳತೆ ಮಾಪನಗಳು

ಅಳತೆಗೆ ಸಂಬಂಧಿಸಿದಂತೆ ಪ್ರಾಚೀನ ಕಾಲದಲ್ಲಿ ಪ್ರತಿಯೊಂದು ರಾಜಮನೆತನಗಳಲ್ಲಿಯು ಅವರದ್ದೆ ಆದ ಅಳತೆಗಳನ್ನು ಹೊಂದಿರುವುದನ್ನು ನೋಡಬಹುದು. ಹಿಂದೆ ತೂಕವನ್ನು ರೂಪಾಯಿ ಗಳಿಂದಲೆ ಕಂಡುಕೊಂಡಿದ್ದರು ಎಂಬುದು ತಿಳಿದುಬರುತ್ತದೆ. '೨೪ ಬೆಳ್ಳಿ' ರೂಪಾಯಿಗಳ ತೂಕವನ್ನು ಒಂದು 'ಸೇರು' ಎಂದು ಮಾಡಿಕೊಂಡಿದ್ದರಿಂದ ಅದರ ಅಳತೆಗೆ ತಕ್ಕಂತೆ 'ಸೇರಿ' ನ ಸೃಷ್ಟಿಯಾಗಿರುವುದನ್ನು ಕಾಣುತ್ತೇವೆ. ಇವುಗಳಲ್ಲದೆ ಪಾವು, ಚಟಾಕು, ಗಜ, ಅಂಗುಲ, ಮೈಲಿ, ಹರಿದಾರಿ, ಎಕರೆ ಮುಂತಾದ ಅಳತೆ ಮಾನಗಳು ಹಾಗೂ ತೊಲ, ಪಲ್ಲ ಎಂಬ ಮಾಪನಗಳು ಕಂಡುಬರುತ್ತವೆ.

ಉದಾಹರಣೆಗೆ ಒಂದು 'ಸೇರು' ಎಂದರೆ ೨೪ ಬೆಳ್ಳಿ ರೂಪಾಯಿಗಳ ತೂಕ ಅಥವಾ ನಾಲ್ಕು 'ಪಾವು' ಸೇರಿದರೆ ಒಂದು ಸೇರು ಹಾಗಿತ್ತು. ಹಿಂದಿನ ಕಾಲದ ಲೆಕ್ಕದ ಪ್ರಕಾರ ಇದ್ದಂತಹ ಅಳತೆ ಈಗಿನ

ಕಾಲದಲ್ಲೂ ಕೆಲವು ಮಾತ್ರ ಪ್ರಚಲಿತದಲ್ಲಿವೆ. ಮತ್ತೊಂದು ಅಳತೆ ಬಗ್ಗೆ ತಿಳಿಯುವುದಾದರೆ ಒಂದು 'ಗಜ' ಎಂಬುದು ಮೂರು ಅಡಿ ಎತ್ತರದಮಾನ ಎಂದು ಹೇಳಲಾಗುತ್ತದೆ.

ತೂಕ ಮತ್ತು ಅಳತೆ ಮಾನಗಳು

೧ ಬೆಳ್ಳಿ ರೂಪಯಿ ತೂಕ = ೧ ತೊಲ. ಅಂದರೆ ೧೧ ಗ್ರಾಂ

೧ ಪಾವು = ೪ ಚಟಾಕು

೧ ಸೇರು = ೪ ಪಾವು ಅಥವಾ ೨೪ ಬೆಳ್ಳಿ ರೂಪಾಯಿಗಳು

೧ ಇಬ್ಬಳಿಗೆ = ಐದೂವರೆ ಸೇರು (ದೊಡ್ಡ ಇಬ್ಬಳಿಗೆಯಾದರೆ ೬ ಸೇರು)

೧ ಪಲ್ಲ = ನೂರು ಸೇರು (೧೦೦ ಸೇರು)

೧ ಕೊಳಗ = ೨ ಇಬ್ಬಳಿಗೆ (ಅಥವಾ ೧೧ ಸೇರು)

೧ ಖಂಡುಗ = ೪೦ ಇಬ್ಬಳಿಗೆ ಅಥವಾ ೨೦ ಕೊಳಗ

೧ ಅಡಿ = ೧೨ ಅಂಗುಲ ಅಥವಾ ಇಂಚು

೧ ಗಜ = ೩ ಅಡಿ ಅಥವಾ ೩೬ ಇಂಚು

ಭೂಮಿಯ ಅಳತೆಗೆ ಸಂಬಂಧಿಸಿದಂತೆ

ಮತ್ತರು ೧ ಕೋಲು ೧೩ ಅಳತೆ = ೧೦೦

೧ ಗುಂಟೆ = ೨೨೦ ಚದುರ ಗಜ

೧ ಎಕರೆ = ೪೦ ಗುಂಟೆ

೧ ಮೈಲಿ = ೮ ಫರ್ಲಾಂಗು

೧ ಹರಿದಾರಿ = ೪ ಮೈಲಿ

೧ ಗಾವುದ = ೧೨ ಹರಿದಾರಿ

ದಾನ್ಯಗಳ ಅಳತೆಗೆ ಒಂದು ಕೋಷ್ಟಕ

೧ ಖಂಡುಗ = ೪ ಪಂಚಕ

೧ ಪಂಚಕ = ೫ ಕೊಳಗ

೧ ಕೊಳಗ = ೪ ಬಳ್ಳ

೧ ಬಳ್ಳ = ೪ ಮಾನ

೧ ಮಾನ = ೪ ಸೊಲ್ಲಿಗೆ

೧ ಸೊಲ್ಲಿಗೆ = ೪ ಗಿದ್ಧಿಗೆ ಇತ್ಯಾದಿ

ಚಲಾವಣೆಯಲ್ಲಿದ್ದ ನಾಣ್ಯಗಳು ಉಪಯೋಗಿಸುತ್ತಿದ್ದ ಲೋಹಗಳು

೧ – ಕಾಸು (ತಾಮ್ರ)

೩ – ಕಾಸು (ತಾಮ್ರ)

೬ – ಕಾಸು (ನಿಕ್ಕಲ್)

೧ – ಆಣೆ = ೧೨ ಕಾಸು (ನಿಕ್ಕಲ್)

೨ – ಆಣೆ = ೨೪ ಕಾಸು

೪– ಆಣೆ (ಬೆಳ್ಳಿ)

೧ ರೂಪಾಯಿ = ೧೯೨ ಕಾಸು (ಬೆಳ್ಳಿ) ಜೊತೆಗೆ ದುಡ್ಡು, ಪಾವಲಿ ಹಣ ಅಥವಾ ವರಹ , ಹಾಗೂ 'ದುಗ್ಗಾಣೆ' ಯನ್ನು ವ್ಯವಹಾರಿಕವಾಗಿ ಉಪಯೋಗಿಸುತ್ತಿದ್ದರು.

ಕಾಸು ಮತ್ತು ಆಣೆಗಳು

೧ ದುಡ್ಡು = ೪ ಕಾಸು

೧ ಪಾವಲಿ = ೪ ಆಣೆ

೧ ಹಣ ಅಥವಾ ವರಹ ೪ ಪಾವಲಿ

೧ ದುಗ್ಗಾಣಿ = ೮ ಕಾಸು ಅಥವಾ ೨ ದುಡ್ಡು

ಆಣೆ = ೧

ಅದ್ದ = ೨

ದುಡ್ಡು = ೪

ದುಗ್ಗಾಣಿ = ೮

ತೂಕದ ಅಳತೆಗಾಗಿ ತೂಗುವ ಕೋಲು ಅಥವಾ ತಕ್ಕಡಿ

ಬೆಣ್ಣೆ ತೂಗಲು ಎರಡು ತಟ್ಟೆಗಳಿರುವ ತಕ್ಕಡಿಗೆ, ಬದಲಾಗಿ ತೂಗವ ಕೋಲನ್ನು ಬಳಸುತಿದ್ದರು. ಲೋಹದ ತೂಕವನ್ನು ತಕ್ಕಡಿಯ ಸಹಾಯದಿಂದ ನಿರ್ಧರಿಸುತ್ತಿದ್ದರು. ತೂಕಕ್ಕೆ ಸಂಬಂಧಿಸಿದ ಒಂದು ಕೋಷ್ಟಕ.

೧ ಭಾರ = ೨೦ ತೊಲ

೧ ತೊಲ = ೫ ಬೀಸಗೆ

೧ ಬೀಸಗೆ = ೨೦ ಫಲ

೧ ಫಲ = ೪ ಕರ್ಷ

೧ ಕರ್ಷ = ೪ ಸುವರ್ಣ ಚಿನ್ನ ಬೆಳ್ಳಿಗಳು

ಬೆಳ್ಳಿಗಳ ತೂಕದಲ್ಲಿ ಗುಲಗಂಜಿಯನ್ನು ಬಳಸುವುದನ್ನು ಈಗಲೂ ಅಕ್ಕಸಾಲಿಗರಲ್ಲಿ ಬಳಕೆ ಇರುವುದನ್ನು ಕಾಣಬಹುದು. ಒಂದು ನುಡಿಗಟ್ಟಿನ ಮೂಲಕ ಜನಸಾಮಾನ್ಯರು ಅಳತೆಯ ಬಗ್ಗೆ ಹೀಗೆ ಹೇಳಿದ್ದಾರೆ. "ಹೊರಲಾರದ ಭಾರವನ್ನು ಹೆಣ ಭಾರ" ಎನ್ನುತ್ತಾರೆ.

ಭೂಮಿಯ ಅಳತೆಗಳ ಬಗ್ಗೆ ನೋಡುವುದಾದರೆ ಗದ್ದೆ ಕೋರು, ಕೂರಿಗೆ ಹೊಲ, ಮುಂತಾದ ಅಳತೆಗಳು ಕಂಡುಬರುತ್ತವೆ. ಈ ಮುಂದಿನಂತೆ ಅವುಗಳನ್ನು ನೋಡಬಹುದು. ಒಂದು ದಿನದಲ್ಲಿ ಒಂದು ಕೂರಿಗೆಯಲ್ಲಿ ಬಿತ್ತಬಹುದಾದ ಜಮೀನನ್ನು ಒಂದು ಕೂರಿಗೆ ಹೊಲ ಎಂದು ತಿಳಿಯಬಹುದು. ಉಪ್ಪಿನ ಮೋಳೆ ಅಳತೆ ನಾಲ್ಕು * ಮೂರು, ಹಾಗೂ ಎರಡು ಮೊಳ ಆಳದ ಚವುಕದಲ್ಲಿ ನೀರು ಹರಿಸಿ ಉಪ್ಪನ್ನು ತೆಗೆಯುತ್ತಿದ್ದರೆಂಬ ಸಂಗತಿ ತಿಳಿಯುತ್ತದೆ (ಮೊಳಕಾಲ್ಮೂರು ಶಾಸನ ಸಂ.೯) ಅದೇ ಗ್ರಾಮದ ಉಪ್ಪಾರರಿಗೆ ಉಪ್ಪಿನ ಮೋಳೆಯನ್ನು ಸರ್ವಮಾನ್ಯವಾಗಿ ನೀಡಿದ ಬಗ್ಗೆಯೂ ದಾಖಲೆಗಳು ತಿಳಿಸುತ್ತವೆ.[೨]

ಚಿತ್ರದುರ್ಗದ ಭಾಗದಲ್ಲಿ ಕಂಡುಬರುವಂತಹ ನಾಣ್ಯಗಳು

ಸುವರ್ಣ ಗದ್ಯಾಣ, – ಬಂಗಾರದ ನಾಣ್ಯದ ಒಂದು ಅಳತೆ.

ಪ್ರತಾಪ ಗದ್ಯಾಣ – ಹಿಂದಿನ ಕಾಲದಲ್ಲಿ ಚಲಾವಣೆಯಲ್ಲಿದ್ದ ಒಂದು ಚಿನ್ನದ ನಾಣ್ಯ

ಗದ್ಯಾಣ – ಒಂದು ಚಿನ್ನದ ನಾಣ್ಯ = ತೂಕದ ಪ್ರಮಾಣ

ಧರಣ – ಒಂದು ಬಗೆಯ ನಾಣ್ಯ

ಕೊಳಗ – ೨ ಇಬ್ಬಳಿಗೆ ಅಥವಾ ೧೧ ಸೇರು= ಒಂದು ಇಬ್ಬಳಿಗೆ ೫ ವರೆ ಸೇರು ಅಥವಾ ೫ ವರೆ x ೨ =೧೧ ಸೇರು

ಖಂಡುಗ – ೪೦ ಇಬ್ಬಳಿಗೆ = ೨೦ ಕೊಳಗ

ಸೊಲ್ಲಗೆ – ೪ ಗಿದ್ದಿಗೆ, ೧ ಸೊಲ್ಲಿಗೆ

ಅದ್ದ – ಎರಡು

ಬಳ್ಳ – ೪ ಮಾನ ಅಥವಾ ೧೬ ಗಿದ್ದಿಗೆ

ಪೀಸ – ಆಣೆಯ ಹದಿನಾರನೆಯ ಒಂದು ಭಾಗದ ಬೆಲೆಯ ನಾಣ್ಯ ತೂಕದ ಒಂದು ಅಳತೆ.

ಈ ರೀತಿಯ ಅಳತೆಗಳು ಇನ್ನು ಕೆಲವು ಶಾಸನಗಳಲ್ಲಿ ಕಂಡುಬರುತ್ತದೆ.

ಶಾಸನಗಳಲ್ಲಿ ಉಲ್ಲೇಖವಾದ ಅಳತೆ ಕೋಲುಗಳು

ಚಿಂತಾಮಣಿ ಕೋಲು :[(೩)]

೧೧೧೦೭ರ ಶಾಸನದಲ್ಲಿ ಕೋಡುಗಳ್ಳಿ ಸೋಮೇಶ್ವರ ದೇವಾಲಯ ಕಟ್ಟುವ ಉಪಯೋಗಕ್ಕೋಸ್ಕರ ಭೂಮಿ ಅಳತೆ ಮಾಡಿ ಒಂದು ಚಿಂತಾಮಣಿ ಕೋಲಿನಿಂದ ಅಳತೆ ಮಾಡಿದ್ದಾರೆ.[೩]

ಗಡಿಬಂದ ಕೋಲು ;[(೪)]

ಕ್ರಿ ಶ ೧೦೭೭ ರ ಏವೂರ ಶಾಸನದಲ್ಲಿ ಭೂಮಿಯನ್ನು ಅಳತೆ ಮಾಡಲು ಬಳಸುತ್ತಿದ್ದರು. ಮತ್ತೊಂದು ಶಾಸನದಲ್ಲಿ ಇದೆ ರೀತಿಯ ಅಳತೆ ಕೋಲನ್ನು ಕಾಣುತ್ತೇವೆ. ಆ ಶಾಸನವೆಂದರೆ ಎಳರಾವೆಯ ತೀರ್ಥದ ಗಡಿಬಂದ ಉಲ್ಲೇಕ ವಿರುವ ಶಾಸನ ಮುಳಗುಂದದ ಮಲ್ಲಿಹರ ಮಾರಿಯಕೋಲ್ ಹದಿಮೂರುಗೇಣ, ಬೆಂಕೂಳವನ್ ಕೋಲ್ ಅಳತೆ ಕೋಲುಗಳ ಸಹಾಯದಿಂದ ಆಳೆಯುತ್ತಿದ್ದರು.[೪]

ಆದಿತ್ಯ ದೇವರ ಕೋಲು :[(೫)]

ದಂಡ ನಾಯಕ ಕೇಶಿರಾಜ ಕ್ರಿ ಶ ೧೧೧೨ ರ ಹಂಚೂಳ್ಳಿ ಶಾಸನದಲ್ಲಿ ಮೂಲಸ್ಥಾನ ದೇವರಿಗೆ ಭೂಮಿಯನ್ನು ಅಳೆದು ಕೊಡಲು 'ಆದಿತ್ಯ' ದೇವರ ಕೋಲಿನಿಂದ ಅಳತೆ ಮಾಡಿಕೊಟ್ಟಿರುವುದು ಕಂಡುಬರುತ್ತದೆ.[೫]

ಏರೂತನ ಕೋಲು ಮತ್ತು ಮಾಣಿಕೇಶ್ವರದ ಕೋಲು: [(೬)]

೧೧೧೫ ರ ಕೊಂಡುಗಳ್ಳಿ ಶಾಸನದಲ್ಲಿ ಮಲ್ಲಿಕಾರ್ಜುನ ದೇವರಿಗೆ ಭೂಮಿ, ಮನೆ, ತೋಟ, ಜಾಗಗಳನ್ನು ಅಳತೆ ಮಾಡಿ ಕೊಡಲು ಎರಡು ವಿಧವಾದ ಅಳತೆ ಕೋಲು ಅದರಲ್ಲಿಯು ಏರೂತನ ಕೋಲು ಮತ್ತು ಮಾಣಿಕೇಶ್ವರದ ಕೋಲನ್ನು ಭೂಮಿಯ ಅಳತೆಗೆ ಉಪಯೋಗಿಸುತಿದ್ದರು.[೬]

ಈಗೆ ಆಯಾ ಪ್ರದೇಶಗಳಿಗೆ ಅನುಗುಣವಾಗಿ ಒಂದೊಂದು ರೀತಿಯ ಅಳತೆಗೋಲುಗಳನ್ನು ಕಾಣಬಹುದು ಆದರೆ ಈ ಎಲ್ಲಾ ಕೋಲುಗಳ ಅಳತೆ ಒಂದೇ ಆಗಿರುತ್ತಿತ್ತು.

ಚಿತ್ರದುರ್ಗದ ಪ್ರದೇಶಕ್ಕೆ ಸೇರಿದ ಪ್ರತಿಯೊಂದು ಗ್ರಾಮದಲ್ಲಿಯು ಜನರು ಕಾಣಿಕೆಗಳನ್ನು ಸಲ್ಲಿಸಬೇಕಿತ್ತು ಅದರ ವಿವರ ಹೀಗಿದೆ

- ಗ್ರಾಮದ ತಳವಾರರು ಗ್ರಾಮ ೧ಕ್ಕೆ ಒಂದು ತುಪ್ಪದ ಕುಂಭ ಸಹಾ ತೆರಬೇಕು.

- ದೊರೆಯು ಜೋಗಿಗೆ ಹೊರಟಾಗ ಪ್ರತಿಗ್ರಾಮದ ಗೌಡನೂ ಗ್ರಾಮ ೧ಕ್ಕೆ ೧೯೦ ವರಹ ಜೋಗಿ ಕಾಣಿಕೆಯನ್ನು ಹಾಕಬೇಕು, ಎಂಬುದು ಕಂಡುಬರುತ್ತದೆ.
- ಭಾದ್ರಪದ ಮಾಸದ ವಿನಾಯಕನ ಚೌತಿಯಲ್ಲಿ, ವಿಶಿಷ್ಟ ಮಠದ ಐಯ್ಯನವರು ಕರ್ಜಿಕಾಯಿ ಮಾಡಿಕೊಂಡು ಬಂದು ಅದನ್ನು ಅರಮನೆಯ ಬೊಕ್ಕಸದ ಮನೆಗೆ ಒಪ್ಪಿಸಬೇಕು.
- ಜಾಡರ ಮಗ್ಗ ೧ಕ್ಕೆ ನೂಲು ಹಗ್ಗದ ಪ್ರಕಾರ ವರುಷವೂ ಜಾಡರ ತಂದು ಅರಮನೆಗೆ ಒಪ್ಪಿಸಬೇಕು.
- ಗ್ರಾಮಾಂತರಗಳಿಂದ ಹಜಾಮರು ತಿಂಗಳಿಗೆ, ಒಂದು ಬಾಕಿ ಸರದಿ ಮೇರೆಗೆ ಗುರ್ಗಕ್ಕೆ ಒಂದು ಕಾಸಾಪಾಗದ ಕುದುರೆಗಳ ಮೈಕೂದಲುನ್ನು ಆಯಲನ್ನು ಕತ್ತರಿಸಬೇಕು.
- ಗ್ರಾಮದ ಬೇಗಾರರು (ಮಾದಿಗರು) ಬಾಸಾ ಕುದುರೆ ೧ಕ್ಕೆ, ಹಸಿ ಹುಲ್ಲು ೧೦ ಹೊರೆ ಸಲ್ಲಿಸಬೇಕಿತ್ತು.

ಗ್ರಾಮದಿಂದ ವೈಯಕ್ತಿಕವಾಗಿ ನೀಡುತ್ತಿದ್ದ ತೆರಿಗೆ

- ೧ ಹೊಲ (ಪ್ರತಿಯೊಂದು ಗ್ರಾಮದಲ್ಲಿ ಸಾಗೂವಳಿಯಾದ ಒಂದು ಹೊಲ)
- ೧ ಕೆರೆ ಹಿಂದೆ ಗದ್ದೆ, (ಪ್ರತಿಯೊಂದು ಗ್ರಾಮದಲ್ಲಿ ಸಾಗೂವಳಿಯಾದ ಕೆರೆಯಿಂದೆ ಒಂದು ಗದ್ದೆ)
- ೧ ತೋಟ (ಪ್ರತಿಯೊಂದು ಗ್ರಾಮದಲ್ಲಿರುವ ತೋಟಗಳಲ್ಲಿ ಒಂದು ತೋಟ
- ೧ ಮಳಲು ಗ್ರಾಮದಲ್ಲಿ ಎರಡು ಎತ್ತಿನಗಳೆ, ೧ಕ್ಕೆ ಅಳೆಯುವ ಭತ್ತ ೫ ಕೊಳ
- ೧ ಎರೇ ಗ್ರಾಮದಲ್ಲಿ ಎಂಟೆತ್ತಿನ ಗಳೆ ೧ಕ್ಕೆ ಅಳೇವತ್ತ ೧೦ ಕೊಳಗ ಹೊರೆಹುಲ್ಲು, ಮೊರಬತ್ತ, ಬೊಗೆವತ್ತ (ಬೊಗಸೆ ಬತ್ತ) ಸೂಲಿಗೆ ೨೩) ನೀಡಬೆಕು
- ರೈತ ತರುವ ಕಂದಾಯಕ್ಕೆ ದುರ್ಗಿ ೧೯ ವರಹ ೧ಕ್ಕೆ ರುಸುಮುಗ ೧ ನಿಯಮಾನುಸಾರವಾಗಿ ಕೊಡುವ ಶುಲ್ಕ
- ೧ ಜಾಡರ ಮಗ್ಗಕ್ಕೆ ಹಾಗದ ಕಾಸು
- ಅಂಗಡಿ ೧ಕ್ಕೆ ದಿನ ೧ಕ್ಕೆ ದುಗ್ಗಾಣಿ ತೂಕ ಅಡಿಕೆ, ೧೦ ವೀಳ್ಯೆಯದೆಲೆ
- ಗೊಲ್ಲರಹಟ್ಟಿ ೧ಕ್ಕೆ ವರ್ಷಕ್ಕೆ ೧ಕುರಿ ಮತ್ತು ಅಗಸರು ಹಡದಿಸೀರೆ ಮುಂದೆ ನಡೆಸಿಕೊಡ ಬೇಕೆಂದು ದೊರೆಯು ತಾನೇ ಅಪ್ಪಣೆ ಮಾಡಿದನು.

ಬುಕಾನನ್ ಪ್ರವಾಸಿಗ ತೆರಿಗೆ ಬಗ್ಗೆ ಈ ರೀತಿಯಾಗಿ ಹೇಳಿದ್ದಾನೆ. ಟಿಪ್ಪುವಿನ ಕಾಲದಲ್ಲಿ ಕೃಷಿ ಉತ್ಪನ್ನ ವಿತರಣೆಯ ಕುರಿತು ವಿವರವಾಗಿ ನಿರೂಪಣೆ ನೀಡಿದ್ದಾನೆ. ಸುಗ್ಗಿಯ ವೇಳೆಯಲ್ಲಿ ಸಾಮಾನ್ಯವಾಗಿ ಧಾನ್ಯವನ್ನು ಒಂದು ಖಂಡುಗ ಅಥವಾ ೧೯೨೦ ಸೇರುಗಳ ಒಂದು ರಾಶಿಯನ್ನು ಸುಮಾರಾಗಿ ಹೀಗೆ ಹಂಚಿಕೊಳ್ಳಲಾಗುತ್ತಿತ್ತು ಎಂದು ತಿಳಿಸಿದ್ದಾನೆ.[೬]

- ಸರ್ಕಾರದ ಮಾಪನಕ್ಕೆ ೧೯೨ – ಸೇರುಗಳು
- ಅಮೀಲ್‌ರ (ಎಣ್ಣೆ ಮತ್ತು ಸಾದಿಲ್ವಾರು ವೆಚ್ಚ) – ೨೪ ಸೇರುಗಳು
- ಬ್ರಾಹ್ಮಣರು, ಫಕೀರರು, ಬಿಕ್ಷುಕರು ಇತ್ಯಾದಿ ೨೪ ಸೇರುಗಳು
- ಕಾವಲುಗಾರ ೬ ಸೇರುಗಳು
- ಅಳತೆ ಮಾಡುವವನು ೬ಸೇರುಗಳು
- ದೇವಾಲಯದ ಪೂಜಾರಿ ೨೪ ಸೇರುಗಳು

ಗ್ರಾಮದ ಅಧಿಕಾರಿಗಳು

- ಪಟೇಲ ೨೪ ಸೇರುಗಳು
- ಶ್ಯಾನುಭೋಗ ೨೪ ಸೇರುಗಳು
- ತಳವಾರ ೨೪ ಸೇರುಗಳು
- ನೀರಗಂಟಿ ೨೪ ಸೇರುಗಳು
- ಕ್ಷೌರಿಕ ೧೨ ಸೇರುಗಳು
- ಕಮ್ಮಾರ ೧೨ ಸೇರುಗಳು
- ಸರ್ಕಾರದ ಪಾಲು ೭೬೮ ಸೇರು
- ರೈತನ ಪಾಲು ೭೬೮ ಸೇರು.

  ಒಟ್ಟು ೧೯೨೦ ಸೇರುಗಳು

ಈ ವಿಭಾಗ ಕ್ರಮವನ್ನು ಗಮನಿಸಿದರೆ ರೈತನ ಶ್ರಮಕ್ಕೆ ಪ್ರತಿಯಾಗಿ ಉತ್ಪನ್ನದ ಅರ್ಧಕಿಂತಲು ಕಡಿಮೆ ದೊರೆಯುತ್ತಿತ್ತು. ಸಮಾಜದ ಎಲ್ಲಾ ಸಮುದಾಯಕ್ಕೆ ಆಹಾರ ಒದಗಿಸುವ ಹೊಣೆ ರೈತರದಾಗಿತ್ತು. ಹಾಗೂ ರೈತರನ್ನು ಇತರ ಸಮುದಾಯಗಳು ಅವಲಂಬಿತರಾಗಿ ಬದುಕುತ್ತಿದ್ದರು. ಕೃಷಿ ವ್ಯವಸ್ಥೆಯ ಬೆನ್ನೆಲುಬಾದ ರೈತರ ಪಾತ್ರವು ಬಹು ಮಹತ್ವವಾಗಿತ್ತು ಎಂಬುದನ್ನು ಬುಕಾನನ್ ಗಮನಿಸಿದ್ದಾನೆ. "ಬುಕಾನನ್ ಟಿಪ್ಪುಕಾಲದ ಕಂದಾಯ ವ್ಯವಸ್ಥೆಯನ್ನು ಕುರಿತು ಬರೆಯುತ್ತಾ ಭೂ

ಹಿಡುವಳಿದಾರರ ಮೇಲೆ ಟಿಪ್ಪು ಬಹಳ ಕಡಿಮೆ ಕಂದಾಯವನ್ನು ಏರಿದ್ದನು. ಆದರು ಅವನ ಅಧಿಕಾರಿಗಳು ಅತ್ಯಂತ ಬಲವಂತದಿಂದ ಕಂದಾಯ ವಸೂಲಿ ಮಾಡುತ್ತಿದ್ದಾರೆಂದು ದೂರಿದ್ದಾನೆ."[೭]

ಹೀಗೆ ಚಿತ್ರದುರ್ಗದ ಸುತ್ತಮುತ್ತಲ ಭಾಗದಲ್ಲಿ ವಿವಿಧ ರೀತಿಯ ತೆರಿಗೆ ನೀಡುತ್ತಿದ್ದ ಮಾಪನ ಪದ್ಧತಿಗಳು ಕಂಡುಬರುತ್ತವೆ.

೪.೨ ಚಿತ್ರದುರ್ಗ ಶಾಸನಗಳಲ್ಲಿ ಅಳತೆ ಮಾಪನಗಳು

ಬಹುತೇಕವಾಗಿ ಶಾಸನಗಳಲ್ಲಿ ಅಳತೆ ಮಾಪನಗಳು ಕಂಡು ಬರುವುದು ಕಡಿಮೆ. ಆದರು ಕೆಲವೊಂದು ಶಾಸನಗಳಲ್ಲಿ ಇದರ ಮಾಹಿತಿ ಸಿಗುತ್ತವೆ. ಶಾಸಗಳ ಆಧಾರದ ಮೇಲೆ ಈ ಮುಂದಿನಂತೆ ನಾವು ತಿಳಿಯಬಹುದಾಗಿದೆ.

ಚಳ್ಳಕೆರೆ ತಾಲೂಕು. ಚಿಕ್ಕಮದುರೆ ಗ್ರಾಮದ ಕಂಬ ಶಾಸನ [೮]

ಚಿಕ್ಕ ಮಧುರೆ ಗ್ರಾಮದ ಕಂಬ ಶಾಸನ ಸಿಂಘಮುತ್ತರಸನ ಮಗಳು ಶ್ರೀ ಮಹಾದೇವಿ ಪರ್ಮಾನಡಿ ಅರಸಿಯರ ತಾಯಿ, ನೊಳೆಂಬ ಮಾದವೆಯರು ಮದರಿಕನಲ್ಲಿ ಆಳ್ವಿಕೆ ಮಾಡುತಿರುವಾಗ ಬಸಮನೆಂಬ ಹೆಸರಿನ ಮನೆಮಗ ನೆಟ್ಟಕಲ್ಲಿನಲ್ಲಿ ದಾನವಾಗಿ ಕೊಟ್ಟ "ಮತ್ತರು ಭೂಮಿಯ" ಬಗ್ಗೆ ಮತ್ತು ಆ ದಾನವನ್ನು ಸಾಕ್ಷಿಸಹಿತವಾಗಿ ನೀಡಿರುವುದನ್ನು ಶಾಸನವು ಉಲ್ಲೇಖಿಸುತ್ತದೆ.

ಇದೇ ಶಾಸನ ಮುಂದುವರೆದು ಈ ಶಾಸನ ಬರೆದವನಿಗೆ ಗಾವುಂಡನ ಪ್ರಜೆಗಳು ಒಕ್ಕಲುತನ ಮಾಡುವ ಕಟ್ಟಳೆಯಲ್ಲಿ " ಒರ್ಮಾರ ಭತ್ತ"ವನು ದಾನ ಮಾಡಿದುದ್ದನ್ನು ತಿಳಿಸುತ್ತದೆ ಮತ್ತು ಶ್ರೀ ಬೇವಿಗೆ ಮುತ್ತರಸರ ಮಗ ಪೊಲೆಯಮ್ಮ ಮದರಿಕಲ್ಲಮ್ಮ ಆಳುತ್ತಿರುವಾಗ ವಿಸಮರಸರ ದೇಗುಲಕೆ ಪನ್ನಿರ್ಮ್ಮತ್ತರು ಭೂಮಿಯನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಅದೇ ಕಂಬದ ದಕ್ಷಿಣದಿಕ್ಕಿನ ಶಾಸನ ರಾಷ್ಟ್ರಕೂಟ ಅರಸು ಪ್ರಭೂತವರ್ಷ ರಾಜ್ಯಭಾರ ಮಾಡುತಿದ್ದಾಗ ಅವನ ಸಾಮಂತ ಸಿಂಘಮುತ್ತರಸನ ಮಗ ಚಾರುಪೊನ್ನರಸನು ನೊಳಂಬಗಳಿಗೆ ೧೦೦೦ ನೀರ್ಗುಂದ ನಾಡ ೨೦೦ ಆಳುತ್ತಿರುವಾಗ ಅವನ ಪ್ರಿಯಪತ್ನಿ ಗವಗಣಬ್ಬೆ ಮದರಿಕಲ್ಲನ್ನು ಆಳುತ್ತಿದ್ದಳು. ಆಗ ನಾಗಮಾರಬ್ಬೆ ಎಂಬುವವಳು ಸಿವಾಲಯವನ್ನು ಮಾಡಿಸಿ ಸಿವಾಲಯಕ್ಕೆ ೧೪ ಮತ್ತರು ಹೊಲವನ್ನು ಹಾಗೂ ಗೋಮಗೆರೆಯ ಹೊಲವನ್ನು ದಾನ ಮಾಡಿದ್ದನ್ನು ಅದಕ್ಕೆ ಸಾಕ್ಷಿಯಾಗಿ ಕೆಲವರ ಹೆಸರನ್ನು ಉಲ್ಲೇಖಿಸಿದೆ

ಅದೇ ಕಂಬದಲ್ಲಿರುವ ಮತ್ತೊಂದು ಶಾಸನ ರಾಷ್ಟ್ರಕೂಟದೊರೆಯ ಆಳ್ವಿಕೆಯನ್ನು ಅವನ ಸಾಮಂತ ಸಮಸ್ತ ಭುವನ ವಿಖ್ಯಾತ ಪಞ್ಚಮಹಾಶಬ್ದ ಶ್ರೀ ಪೃಥಿವಿವಲ್ಲಭ ಪರಮೇಶ್ವರ ಪಲ್ಲವಾಧಿರಾಜ

ಪೊನ್ನೇರನು ನೊಳಂಬಳಿಗೆ ೧೦೦೦, ನೀರ್ಗುಂದ ನಾಡು ೩೦೦, ಇರುಗಲ್ವಾಡಿ ೩೦೦, ಗಂಗವೂರು ೩೦, ನೆಲ್ಲಿಗುಂಡು ೧೨, ಆಳುತ್ತಿರುವಾಗ ಅವನ ಪ್ರಿಯಾತ್ಮಜ (ಮಗ) ಪಲ್ಲವ ಮಲ್ಲನು ಮದಕರಿಕಲ್ಲು, ತೊಂಡೂರು ಮಾಳೆ ೧೨, ಅಮ್ಮವಳ್ಳಿ ೧೨, ಕೋಳೂರು ೧೨, ಗಂಗವೂರು ೩೦ ಆಳುತ್ತಿದ್ದ. ಆತನ ತಾಯಿ ಗವಣಗಬ್ಬೆ, ಮದಕರಿಕಲ್ಲಿನ ಗವಗಣೇಶ್ವರ ಎಂಬ ಶಿವಾಲಯವನ್ನು ಮಾಡಿಸಿ ಆ ದೇವಾಲಯಕ್ಕೆ, ಕಿರಿಯ ಮದರಿಕಲ್ಲಿನ ೧೨ ಮತ್ತರು ಸಾಗುವಳಿ ಭೂಮಿಯನ್ನು ಎಂಟು ಮತ್ತರು ಭೂಮಿಯನ್ನು ದಾನಮಾಡಿರುವುದನ್ನು ಉಲ್ಲೇಖಿಸುತ್ತದೆ. ಚಿತ್ರದುರ್ಗ ಹಿರಿಯೂರು ತಾಲ್ಲೂಕಿನ ಸಖ್ರ ಗ್ರಾಮ ಸುಮಾರು ಕ್ರಿ ಶ ೯೦೦ ರ ಶಾಸನವು ಮಹೇಂದ್ರನು ಪ್ರಿಥುವಿ ರಾಜ್ಯವಾಳುತ್ತಿರುವಾಗ ಮರುಗೆರೆಯ ಚಿತ್ರಪ್ಪ ಎಂಬುವನು ಕೆರೆಯನ್ನು ಕಟ್ಟಿಸಿ 'ನಾಲ್ಕಳವೆಯ' ಭಾಗ ಭೂಮಿಯನ್ನು ಕೊಟ್ಟಿರುವ ಉಲ್ಲೇಖವಿದೆ.

ಚಿತ್ರದುರ್ಗದ ಹೋಬಳಿ ಹುಲೇಗುಂದಿಯ ಸಿದ್ದೇಶ್ವರ ದೇವಸ್ಥಾನದ ಹಿಂಬಾಗದಲ್ಲಿ (೯)

ಚಿತ್ರದುರ್ಗ ತಾಲ್ಲೂಕಿನ ಹುಲೇಗುಂದಿ ಸಿದ್ದೇಶ್ವರ ದೇವಾಲಯದ ಬಳಿ ಇರುವ ಶಾಸನ. ಕಾಲ ಕ್ರಿ.ಶ. ೧೨೭೮ರ ಶಾಸನ ತ್ರೈಲೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾಡಿ ಜಯಸಿಂಗ ದೇವನ ಆಳ್ವಿಕೆಯಲ್ಲಿ ಇವನ ಸಾಮಂತ ಕೆರೆಯೂರ ಮಾಗಿಯೋಚಯ್ಯನನ್ನು ಕದನ ಪ್ರಚಂಡ, ಕದಳೀವನ ಕುಂಜರಂ, ಪರಮಂಡಳ ಸೊರೆಕಾರ, ವೈರಿಬಂಗಾರ, ವೀರಾಗ್ರಣಿ, ಕವಿ, ಗಮಕವಾದಿ, ವಾಗ್ಮಿ ಸಂವರಣ, ದುರಿತ ಸಂಹರಣ, ಧರ್ಮಾವತಾರ, ಚತುಸ್ಸಮಯಾಧಾರ, ಸೋಮೇಶ್ವರದೇವ ಪಾದಪಂಕಜ, ಭ್ರಮರ ನಾಮಾದಿ ಸಮಸ್ತ ಪ್ರಶಸ್ತಿಸಹಿತ ಬಿರುದುಗಳಿಂದ ಸೂಳ್ಗಲ್ ೭೦ನ್ನು ಆಳುತ್ತಿದ್ದನೆಂದು ಹೊಗಳಿವೆ. ಈತನು ಯಮನಿಯಮ್ಮ, ಸ್ವಾಧ್ಯಾಯ, ಧ್ಯಾನ, ಧರಣ, ಅನುಷ್ಠಾನ, ಜಪ, ಸಮಾಧಿ ಸಂಪನ್ನರಾದ ಕೆರೆಯೂರ " ಜ್ಞಾನಸಿವದೇವ ಮೌನಿ ಮುನಿಯ ಕಾಲನ್ನು ತೊಳೆದು ಸೂಳ್ಗಲ್ಲಿನ ಏಕಾರ್ಥದ ಭೀಮೇಶ್ವರ, ಹಿಡಿಂಬೇಶ್ವರ ಹಾಗೂ ಅಲ್ಲಿನ ಎಲ್ಲಾ ದೇವರಿಗೆ ಕೋಟೆಯ ಪಶ್ಚಿಮ ದಿಕ್ಕಿನಲ್ಲಿನ ೬೦ ಮತ್ತರು ಭೂಮಿಯನ್ನು ದಾನವಾಗಿ ಕೊಡುತ್ತಾನೆ. ಇವನ ಕೈಕೆಳಗೆ ಬಿಮ್ಮಗಾವುಂಡನು ಸಹ ಭೀಮೇಶ್ವರ ದೇವರಿಗೆ ಕೆರೆಯೂರ ಗಳ್ದೆ, ಕಮ್ಮಂ ೧೦೦ ನ್ನು ದಾನವಾಗಿ ಬಿಟ್ಟಿದ್ದನ್ನು ಈ ಶಾಸನವು ಹೇಳುತ್ತದೆ.

ಹುಲಿಗುಂದ ಗ್ರಾಮದ ಅಂಕಲೇಮಠದ ಪಂಚಲಿಂಗದೇವರ ಗುಡಿಯಲ್ಲಿ ನಟ್ಟಕಲ್ಲು (೧೦)

ಹುಲಿಗುಂದ ಗ್ರಾಮದ ಅಂಕಲೇಮಠದ ಪಂಚಲಿಂಗದೇವರ ಗುಡಿಯಲ್ಲಿ ನೆಟ್ಟಕಲ್ಲು. ಈ ಶಾಸನದಲ್ಲಿ ಪ್ರಸಿದ್ಧ ಎಸಗೂರು ಕ್ಷೇತ್ರಕ್ಕೆ ಕಾವುನೆಟ್ಟಕೊಟ್ಟ ಕಲ್ಲುಗಳಿಂದೊಳಗಣ ಕ್ಷೇತ್ರ ಆ ಎಸಗೂರು ಕ್ಷೇತ್ರದೊಳಗೆ ಅಜಿರುಮಾಳದೇವದಂಣಾಯಕರಿಗೆ ಯಜಮಾನ ಪ್ರಾಪ್ತಿಗೆ ಕೊಡುಗೆಯಾಗಿ ಕಲ್ಲು ನೆಟ್ಟು ಆ ಕ್ಷೇತ್ರವು ಹೊಳಲಕೆರೆಯ ಬೆದ್ದಲದೆರೆಯ ಗಡಿಬಂದಗಳೆಯಲು ಕಂಬ ಸಾವಿರ, ಆ ಅಧಿಕಾರಿವಿಠ್ಠಂಪಂಗೆ ಆ ಪೆರುಮಾಳದೇವ ದಂಣ್ಣಾಯಕರು ಧಾರಪೂರ್ವಕಂ ಮಾಡಿಕೊಟ್ಟ ಬೆದ್ದಲು ಕಂಬ ೫೦೦, ಆ ಬಲ್ಲಗವುಂಡ, ಕಾಮಗಾವುಂಡ, ಬೊಂಮ್ಮಗವುಂಡಗಳು ಆ ಎಸಗೂರಿಗೆ ವೂಡಿಕೆಯಮಾಡಿ ಎಲ್ಲಾ

ಕ್ಷೇತ್ರದ ವ್ಯವಸಾಯವಮಾಡಿಸುವಂತಾಗಿ ಅವರಿಗೆ ಕೊಡುಗೆಯಾಗಿ ಕೊಟ್ಟ ಬೆದ್ದಲು ೩೦೦ ನಾಡಸೇನಬೊವ ಬಾಡಯ್ಯಂಗೆ ಬೆದ್ದಲು ಕಂಬ ೫೦, ಆ ಹೆಗ್ಗಡೆ ಬೊಮ್ಮಯ್ಯಂಗೆ ಬೆದ್ದಲು ಕಂಬ ೫೦, ಯಿಂತೀಕ್ಷೇತ್ರವನ್ನು ಪೆರುಮಾಳದೇವ ದಂಣ್ಣಾಕರು ಅವರವರಿಗೆ ಧಾರಾಪೂರ್ವಕಂ ಮಾಡಿಕೊಟ್ಟರು ಎಂಬುದು ಈ ಶಾಸನದಲ್ಲಿ ಉಲ್ಲೇಖವಾಗಿದೆ.

ಮದಕೆರೆಪುರ ಗ್ರಾಮದಲ್ಲಿ ಪಶ್ಚಿಮ ಕಲ್ಲೇದೇವರ ಪಾಳು ಗುಡಿಯಲ್ಲಿ ಇರುವ ತುಂಡುಕಲ್ಲಿನಲ್ಲಿ (೧೧)

ಮದಕೆರೆಪುರ ಗ್ರಾಮದಲ್ಲಿ ಪಶ್ಚಿಮ ಕಲ್ಲೇದೇವರ ಪಾಳು ಗುಡಿಯಬಳಿ ಇರುವ ತುಂಡು ಕಲ್ಲಿನಲ್ಲಿ 'ಮತ್ತರು' ಎಂಬ ಪದದ ಉಲ್ಲೇಖವನ್ನು ನೋಡಬಹುದು. ಇದರ ಕಾಲ ೧೧೨೧ ಕಾಳಯಕ್ತ ಸಂವತ್ಸರ ಮಾಘ ೧ನೇ ಸೋಮವಾರದಂದು ಉತ್ತರಾಯಣ ಸಂಕ್ರಾಂತಿಯಂದು ಸೂರ್ಯ ಗ್ರಹಣ ನಿಮಿತ್ತ, ಶ್ರೀ ಸೋಮನಾಥ ದೇವರ್ಗೆ ಬಿಟ್ಟ ಮತ್ತರು ಭೂಮಿ. ಎಂಬುದನ್ನ ಕಾಣಬಹುದು.

ಭೀಮಸಮುದ್ರದ ಗ್ರಾಮದ ಕೆರೆಯ ಏರಿಯ ಮೇಲೆ ಭೀಮೇಶ್ವರ ದೇವಾಲಯದ ಹಿಂದೆ ನೆಟ್ಟ ಕಲ್ಲು. (೧೨)

ಭೀಮಸಮುದ್ರದ ಗ್ರಾಮದ ಕೆರೆಯ ಏರಿಯ ಮೇಲೆ ಭೀಮೇಶ್ವರ ದೇವಾಲಯದ ಹಿಂದೆ ನೆಟ್ಟ ಕಲ್ಲು. ಇದರ ಕಾಲ ೯೮೭ ಈ ಶಾಸನದಲ್ಲಿ ಅಳತೆಮಾನವಾದ 'ಮತ್ತರು' ಪದವು ಉಲ್ಲೇಖ ವಿರುವುದನ್ನು ಕಾಣಬಹುದು. ೯೮೭ನೇಯ ಪರಾಭವಸಂವತ್ಸರದ ಪೌಶ್ಯಶುದ್ಧ ಸೋಮವಾರದಂದು ಉತ್ತರಾಯಣ ಸಂಕ್ರಾಂತಿ ನಿಮಿತ್ಯವಾಗಿ ಜಯಗೊಂಡೇಶ್ವರಕೆ ಮೂವತ್ತರರೊಳ ಗಾವುಣ್ಡನು ಮಲ್ಲಿಯ ಒಕ್ಕಲ ಮಕ್ಕಳದೋಳ್ ಚಂದ್ರಮೌಳಿ ಪಂಡಿತರಿಗೆ ಹೂನ್ಕುಂದದ ಪಿರಿಯಕೆರೆಯ ಕೆಳಗೆ ಮೊದಲೆರೆ ಗಳ್ದೆ ಮತ್ತದೊಂದು ಪೆರ್ಬ್ಬಾಯಿಕಲ್ಲ ಮೊಳಗಳ್ದೆಯ ಕಮ್ಮವನುರ್ಪತ್ತು ಗುಮ್ಮಗಟ್ಟದ ಕೆಳಗೆ ಗಳ್ದೆ ಮೂರುಮತ್ತರು ಕೊಟ್ಟಿರುವುದು ಕಾಣಬರುತ್ತವೆ.

ಅದೇ ಹೋಬಳಿ ರೊಟ್ಟಿಹಳ್ಳಿ ಗ್ರಾಮದ ಹನುಮಂತ ದೇವಾಲಯದ ಒಳಗೋಡೆಗೆ ನೆಟ್ಟಕಲ್ಲು (೧೩)

ರೊಟ್ಟಿಹಳ್ಳಿ ಗ್ರಾಮದ ಹನುಮಂತ ದೇವಾಲಯದ ಒಳಗೋಡೆಗೆ ನೆಟ್ಟಕಲ್ಲು. ಈ ಶಾಸನದ ಕಾಲ ೧೫೦೩. ಇದರಲ್ಲಿ 'ವರಹ'ದ ಬಗ್ಗೆ ಉಲ್ಲೇಖವಿದ. ಈ ಶಾಸನ ಮದಕರಿ ನಾಯಕರಿಗೆ ಕೆರೆಯ ದೆವಪ್ಪ ಗೌಡರ ಮಕ್ಕಳು ಸಿದ್ಧಾಪುರದ ಸಿದ್ದಣ್ಣಗೌಡನು ಕೊಟ್ಟ ಗ್ರಾಮದ ಗೌಡಿಕೆಯ ವಿಕ್ರಯದ ಶಿಲಾಶಾಸನವಾಗಿದೆ. ಗೌಡಿಕೆಗೆ ಸಲ್ಲುವ ರೊಟ್ಟಿಹಳ್ಳಿಯ ಗ್ರಾಮದ ಗೌಡಿಕೆಯನು ಮಾಡುವಂತೆ ೨೦೦ ವರಹ ಕೊಟ್ಟಿರುವ ಉಲ್ಲೇಖವಿದೆ.

ಕ್ಯಾಸಾಪುರದ ಗ್ರಾಮದ ಪೂರ್ವಕ್ಕೆ ೬೦ ನೇ ನಂಬರ್ ಜಮೀನಿನಲ್ಲಿ ದೊರೆತಿರುವ ಶಾಸನ [೧೪]

ಕ್ಯಾಸಾಪುರದ ಗ್ರಾಮದ ಪೂರ್ವಕ್ಕೆ ೬೦ ನೇ ನಂಬರ್ ಜಮೀನಿನಲ್ಲಿ ದೊರೆತಿರುವ ಶಾಸನ. ಈ ಶಾಸನವು ಪೂರ್ವದ ಹಳಗನ್ನಡ ಅಕ್ಷರ ಹೊಂದಿದೆ. ಈ ಶಾಸನದಲ್ಲಿ ಮತ್ತರ್ ಪದದ ಉಲ್ಲೇಖವಿದೆ. ೪ ಮತ್ತರ್ ಭೂಮಿಯನ್ನು ಸಿದ್ದಾಯ ಬಿಟ್ಟಿರುವುದು ಕಂಡುಬರುತ್ತದೆ.

ಹೊಳಲ್ಕೆರೆ ಊರ ಬಾಗಿಲ ಬಳಿ ಆಂಜನೇಯ ದೇವಾಲಯದ ಪೂರ್ವದ ಗೋಡೆಗೆ ನೆಟ್ಟ ಕಲ್ಲು. [೧೫]

ಊರ ಬಾಗಿಲ ಬಳಿ ಆಂಜನೇಯ ದೇವಾಲಯದ ಪೂರ್ವದ ಗೋಡೆಗೆ ನೆಟ್ಟ ಕಲ್ಲು. ಈ ಶಾಸನದಲ್ಲಿ ಮೇಲಿನ ಭಾಗದಲ್ಲಿ ಸೂರ್ಯ-ಚಂದ್ರ, ಚಕ್ರ, ಶಂಖ, ವಾಮನ, ಶಿವಲಿಂಗ, ನಂದಿ ಇವುಗಳ ರೇಖಾ ಕೆತ್ತನೆಗಳನ್ನು ಮಾಡಲಾಗಿದೆ. ಇವುಗಳ ಕೆಳಗೆ ಸುಮಾರು ೧೮ ಸಾಲುಗಳವರೆಗೆ ಬರಹವನ್ನು ಕೆತ್ತಲಾಗಿದೆ. ಆರಂಭದಲ್ಲಿ ಶಿವ ಸ್ತೋತ್ರದ ಶ್ಲೋಕವಿದೆ. ಆಮೇಲೆ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ... ಮಹಾರಾಜರು ಆಳುತ್ತಿರುವಾಗ ಅವರ ಅಧೀನರಾಗಿ ಈ ಭಾಗದಲ್ಲಿನರಸಪ್ಪನಾಯಕರ ಮಕ್ಕಳು... ನಾಯಕರು, ಆಳುತ್ತಿರುವಾಗ ಹೊಳಲಕೆರೆಯ ಸೇತುವೆಯಲ್ಲಿ... ಕೆಲವೊಂದು ಗದ್ದೆ ತೋಟದ ಭೂಮಿಯನ್ನು ಧಾರೆಯನ್ನೆರೆದು ನೀಡಿದರು ಎಂಬವಿವರವನ್ನು ಕೆತ್ತಲಾಗಿದೆ.ದೊರೆಗಳ ಹೆಸರು ಮತ್ತು ಇತರ ಕೆಲವು ವಿವರಗಳು ಬರುವಲ್ಲಿ (ಶಾಸನದ ಕಲ್ಲಿನ ಮಧ್ಯ ಭಾಗದಲ್ಲಿ ಕಲ್ಲಿನ ಚಕ್ಕೆಳ ಸಿಡಿದು ಹೋಗಿರುವುದರಿಂದ) ಆ ಭಾಗದ ಅಕ್ಷರಗಳು ನಷ್ಟವಾಗಿ ಶಾಸನ ಬರಹದ ಪೂರ್ತಿವಿಷಯ ಲಭ್ಯವಾಗದಂತಾಗಿದೆ. ಈ ಶಾಸನದ ಕಾಲ ಶಾಲಿವಾಹನ ಶ.ಕ.ವರ್ಷ ೧೪೫೯ ನೇಯ ಪ್ಲವಂಗ ಸಂವತ್ಸರದ ಭಾದ್ರಪದ ಬಹುಳ ೩೦ ಅಂದರೆ ಅಮಾವಾಸ್ಯಯ ದಿನ ಎಂದಾಗುತ್ತದೆ. ಇಲ್ಲಿ ಸಂತೆಗಳಲ್ಲಿ ತೆರಿಗೆಯನ್ನು ವಸೂಲಿಮಾಡಿದ ವಿವರಣೆ ಇದೆ.

ಹೊಳಲ್ಕೆರೆ. ಹೊರಕೆ ದೇವಪುರ ಕಸಬಾ ಸೆಟ್ಟರು ನಾಗಪ್ಪನವರು ಕೊಟ್ಟಂತಹ ತಾಮ್ರಶಾಸನವಾಗಿದೆ. [೧೬]

ಈ ಶಾಸನವು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕ್ ಕಸಬಾ ಸೆಟ್ಟರು ನಾಗಪ್ಪನವರು ಕೊಟ್ಟಂತಹ ತಾಮ್ರಶಾಸನವಾಗಿದೆ. ಶ್ರೀಮೂಲಸಂಘನ ವೋದಂಣಗೌಡ ಮುಂತಾದವರು ಮಾಡಿಸಿದ ಧರ್ಮವು ವಿಘ್ನವಾಗಿರಲು, ಆ ಗೌಡರ ಸುಪುತ್ರರಾದ ಸೋಮಂಣಗೌಡ, ಶಾಂತಂಣಗೌಡ, ಆಮಣಗೌಡ ಮುಂತಾದವರು ಪ್ರತಾಪ ನಾಯಕರಿಗೆ ನೂರು ಗದ್ಯಾಣವನಿಕ್ಕಿ ಬೇಡಿಕೊಂಡಿದ್ದು ಹಿರಿಯ ಕೆರೆಯ ಹಿಂದಣ ತೋಟ, ಗದ್ದೆ, ಮತ್ತು ಬೆದ್ದಲ್ ನಮ್ಮೂವರ ಮನೆಯ ಕಾಣಿಕೆಯೂ ಸರ್ವ ಪರಿಹಾರವಾಗಿ ಗುರುಗಳ ಆಹಾರ ದಾನಕ್ಕೆ ಶಕವರ್ಷ ೧೦೭೬ ನೇಯ ೧೦ನೇ ಶುಕ್ರವಾರ ಬಿಟ್ಟದತ್ತಿ ಎಂಬುದು ಈ ಶಾನದಲ್ಲಿ ಉಲ್ಲೇಖವಿದೆ.

ದೊಡ್ಡ ಉಳ್ಳಾರ್ತಿ ಗ್ರಾಮದ ಶಾನಭೋಗರ ಕಪಿಲೆಯಲ್ಲಿ ಅಜ್ಜನ ದೇವಾಲಯದಲ್ಲಿರುವ ಕಲ್ಲು[೧೭]

ದೊಡ್ಡ ಉಳ್ಳಾರ್ತಿ ಗ್ರಾಮದ ಶಾನ ಭೋಗರ ಕಪಿಲೆಯಲ್ಲಿ ಅಜ್ಜನ ದೇವಾಲಯದಲ್ಲಿರುವ ಕಲ್ಲು. ಈ ಶಾಸನದ ಕಾಲ ೧೪೭೫ ಈ ಶಾಸನದಲ್ಲಿ ತಿರುಮಲರಾಜಯ್ಯನವರು ದೊಡ್ಡೇರಿಯ ನಾಡಗೌಡ ಬವರಸೆಟ್ಟಿಯವರಿಗೆ ಊರಮುಂದಲ ಕೆರೆಯೋಳ ಮೂಡಲ ಸ್ಥಳದೊಳಗೆ ಹತ್ತು ಕೊಳಗ ದಾನ್ಯವನ್ನು (೧೦ಕೊಳಗ) ಸರ್ವಮಾನ್ಯವಾಗಿ ಕೊಟ್ಟ ಉಲ್ಲೇಖವನ್ನು ಕಾಣಬಹುದು.

ಓಬಳಾಪುರ ಗ್ರಾಮ ಸದೇ ಹೋಬಳಿ ಸಿದ್ಧರಾಮೇಶ್ವರ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿರುವ ಕಲ್ಲು. [೧೮]

ಓಬಳಾಪುರ ಗ್ರಾಮದ ಸಿದ್ಧರಾಮೇಶ್ವರ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿರುವ ಕಲ್ಲು. ಈ ಶಾಸನದ ಕಾಲ ತಿಳಿದಿಲ್ಲ, ಈ ಶಾಸನದ ಹಿಂಭಾಗದಲ್ಲಿ ಜೀರ್ಣೋದ್ಧಾರಕ್ಕೆ ದಾನ ನೀಡಿದ ಉಲ್ಲೇಖವಿದೆ. ಹನ್ನೆರಡು ಖಂಡುಗ ಜೀರ್ಣೋದ್ಧಾರಕ್ಕೆ. ಇಪ್ಪತ್ನಾಲ್ಕು ಮತ್ತರು, ನೂರು ಎಲೆಯನ್ನು ನೀಡಿದ ವಿವರವಿದೆ.

ಅದೇ ಗ್ರಾಮದ ಉತ್ತರಕ್ಕೆ ಕೋಟೆ ಕೆಳಗೆ ಗ್ರಾಮನಿವೇಶನದಲ್ಲಿ ಬಿದ್ದಿರುವ ಕಲ್ಲಿನ ತುಂಡು. ಈ ಶಾಸನದಲ್ಲಿ ಕೆಲವು ಅಕ್ಷರಗಳು ಅಸ್ಪಷ್ಟವಾಗಿವೆ. ಈ ಶಾಸನದ ಕೆಳಭಾಗದಲ್ಲಿ ಕೊಳಗ ೧೦, ಖಂಡುಗವೆರಡು ೨, ಅಚಣ್ಣ ಭಟ್ಟರಿಗೆ ಖಂಡುಗ ೧ ನೀಡಿದುದಾಗಿ ಅಳತೆಮಾನಗಳು ಸಿಗುತ್ತವೆ.

ಮಹದೇವಪುರ ಮಹದೇವಪುರದ ವೀರಭದ್ರ ದೇವಸ್ಥಾನದ ಪೂರ್ವ ಗೋಡೆಗೆ ಸೇರಿರುವ ಕಲ್ಲು. [೧೯]

ಮಹದೇವಪುರದ ವೀರಭದ್ರ ದೇವಸ್ಥಾನದ ಪೂರ್ವ ಗೋಡೆಗೆ ಸೇರಿರುವ ಕಲ್ಲು. ಈ ಶಾಸನದಲ್ಲಿ ಖಂಡುಗದ ಉಲ್ಲೇಖವಿದೆ.

ಮೊಳಕಾಲ್ಮೂರು ಅದೇ ಬೆಟ್ಟದ ಮೇಲೆ ರಾಮೇಶ್ವರ ದೇವಾಲಯದ ೧ನೇ ತಾಮ್ರಶಾಸನ. [೨೦]

ಈ ಶಾಸನ ಅದೇ ದೇವಾಲಯದ ೧ನೇ ತಾಮ್ರಶಾಸನ. ಇದರ ಕಾಲ ಕ್ರಿ.ಶ.೧೩೭೯. ಈ ಶಾಸನದಲ್ಲಿ ಅಳತೆಮಾಪನಗಳು ಕಂಡುಬಂದಿವೆ. ಅವುಗಳೆಂದರೆ ಸೊಲ್ಲಗೆ, ಅದ್ದ, ಖಂಡುಗ, ಪ್ರತಾಪ, ಕೊಳಗ, ಗದ್ಯಾಣ, ಧರಣ, ಮುಂತಾದ ಅಳತೆ ಮಾಪನಗಳ ಬಗ್ಗೆ ಉಲ್ಲೇಖವಿದೆ.

ಹಳೇದಡಗೂರು ಗ್ರಾಮದ ತಳವಾರ ಹನುಮಂತನ ಹೊಲದಲ್ಲಿ.[೨೧]

ಹಳೇದಡಗೂರು ಗ್ರಾಮದ ತಳವಾರ ಹನುಮಂತನ ಹೊಲದಲ್ಲಿ ನೆಟ್ಟಕಲ್ಲು. ಈ ಶಾಸನದ ಕಾಲ ಶಕವರ್ಷ ೯೯೩ ಎಂದು ಉಲ್ಲೇಖವಿದೆ. ಈ ಶಾಸನದಲ್ಲಿ ಅಳತೆಗೆ ಸಂಬಂದಿಸಿದಂತೆ ೧ಹೇರಿಂಗೆ ಎಲೆ ೧೦೦ ಹೊರೆಗೆ ೪೦ ಎಂದು ಶಾಸನದಲ್ಲಿ ಕಂಡುಬರುತ್ತವೆ.

ಚಿಕ್ಕಯಗಟಿ. ಅದೇ ಗ್ರಾಮದ ಚನ್ನಕೇಶವ ದೇವಾಲಯದ ಮುಂದೆ ನೆಟ್ಟಕಲ್ಲು. (೨೨)

ಇದೇ ಗ್ರಾಮದ ಚನ್ನಕೇಶವ ದೇವಾಲಯದ ಮುಂದೆ ನೆಟ್ಟಕಲ್ಲು. ಈ ಶಾಸನದಲ್ಲಿ ಕೆಲವು ತೂಕ ಮತ್ತು ಅಳತೆಗಳು ಕಂಡುಬರುತ್ತವೆ. ಇದರ ಕಾಲ ಕ್ರಿ.ಶ. ೧೦೧೬ ಜೀರ್ಣೋದ್ದಾರಕ್ಕೆ, ಮತ್ತು ನಂದಾದಿವಿಗೆಗೆ, ಬೆದ್ದಲು, ತೋಟ, ಕಂಬ ೧೦, ಗದ್ದೆ ೧೫೦, ಮತ್ತು ಊರಿನ ಮೂಡಲ ಎಡಕ್ಕೆ ಬೆದ್ದಲು ಕಂಬ ೧೫, ತೆಂಕಲು ಬೆದ್ದಲು ಕಂಬ ೪೫, ಹೇರಿಂಗೆ ಅಡಕೆ ೨೦, ಎಲೆಯ ಹೇರಿಂಗೆ ಎಲೆ ೧೦೦, ಅರಿಸಿನ ಹೇರಿಂಗೆ ಬಳ್ಳ ೧, ಮೆಣಸಿನ ಹೇರಿಂಗೆ ೧, ದವಸದ ಹೇರಿಂಗೆ ವೀಸ ೧, ಮುಂತಾದ ಅಳತೆಗಳು ಕಂಡು ಬರುತ್ತವೆ.

ಆಡನೂರು ಶಾಸನ (ಎ.ಕ.ಶಾ.ಸಂ. ೩೩)(೨೩)

ಕ್ರಿ.ಶ. ೯೬೫ರ ಆಡನೂರು ಶಾಸನದಲ್ಲಿ ಅಕಾಲ ವರ್ಷನು ಆಳ್ವಿಕೆ ನಡೆಸುತ್ತಿದ್ದಾಗ ತನ್ನ ಸೀಮಿತ ಪ್ರದೇಶದಲ್ಲಿ ಆಳುತ್ತಿದ್ದ ಮಹಾಸಾಮಂತ ಧಳಿಗೆಮಾದೆಗಣ್ಣ ಪೆರ್ಮಾಡಿಯ ಉಲ್ಲೇಖ ಬರುತ್ತದೆ. ಉಜ್ಜಯಿನಿಯ ಭುಜಂಗ ಗೊಗ್ಗಿಯಮ್ಮನ ಉಲ್ಲೇಖ ಈ ಶಾಸನದಲ್ಲಿದೆ. ಕಡಂಬಗಳಿಗೆ ನಾಡು ಸಾವಿರ, ತಿವುಳ್ನಾಡಿನ ಐದು ನಾಡನ್ನು ನಗಣ್ಣಯ್ಯನ ಕನ್ನೇಶ್ವರಕ್ಕೆ ಗುಂಜಿಗನೂರು –೧೫೦ರ ಚಾಮರಸಯ್ಯನು ಬಿಟ್ಟು ಕೊಟ್ಟುಕೊಟ್ಟದತ್ತಿಯನ್ನು ಉಲ್ಲೇಖಿಸುತ್ತದೆ. ಕನ್ನಯ್ಯನ ಅಬ್ಬೆ ಪೊಲೆಯಬ್ಬೆ ಮತ್ತು ಸೂದ್ರಕಯ್ಯರು ಆಡನೂರಿನ ಪಿರಿಯ ಕೆರೆಯ ಕೆಳಗೆ ತೆಂಕಣ ಎರಡು, ಕಡಮಬನ ನಾಲ್ಕು ಮತ್ತರು ಭೂಮಿಯನ್ನು ಶಾಂತಿಭಟಾರಿಗೆ ಮೂವರು ಗಾವುಂಡರು ಮತ್ತು ಕಾಕಂಬಳಿ ಕಂಭಯ್ಯನು ದಾನ ಮಾಡಿದ್ದನ್ನು ತಿಳಿಸುತ್ತದೆ. ಪಂಚಮಠಸ್ಥಾನದ ಉಲ್ಲೇಖವಿದೆ ಹಾಗೂ ಭಂಡಾರ್ಕರ್ ಅವರು ಈ ಶಾಸನದಲ್ಲಿ ಬರುವ ಸ್ತ್ರೀ ಉಪವಾಸ ಮಾಡಿ ಮಡಿದಳು ಎಂದು ತಿಳಿಸುತ್ತದ್ದಾರೆ.

ಬೇವಿನಹಳ್ಳಿ ಶಾಸನ (ಎ.ಕ.ಸಂ.೧೧,ಶಾ.ಸಂ ೭೪)(೨೪)

ಬೇವಿನಹಳ್ಳಿ ಶಾಸನ ನಿತ್ಯವರ್ಷ ಕೊಟ್ಟಿದೇವನು ಮಾನ್ಯಖೇಟದಲ್ಲಿ ಆಳ್ವಿಕೆ ನಡೆಸುತ್ತಿದ್ದನ್ನು ತಿಳಿಸುತ್ತದೆ. ಇದೇ ಶಾಸನದಲ್ಲಿ ಚಾಲುಕ್ಯರ ವಂಶಾವಳಿಯ ಉಲ್ಲೇಖವಿದೆ. ಮಂಗಳರಾಯ, ವಿಕ್ರಮಾದಿತ್ಯ, ಪಿಳ್ಳಿಮಯ್ಯ, ಕಲಿಕೋಂಣದೇವ, ರೇವಮ್ಮ, ಬಿಕ್ಕಿಯಣ್ಣ, ಗೊಗ್ಗಿ, ಸೂದ್ರಕಾಂಕ ಆತನ ಪತ್ನಿ ಜಕ್ಕಿಸುಂದರಿಯ ಹೆಸರುಗಳು ಕಾಣುತ್ತದೆ. ಜಕ್ಕಿಸುಂದರಿ ಎಂದು ಖ್ಯಾತಳಾಗಿದ್ದ ಇವಳಿಗೆ, ಸಮ್ಯಕ್ತಧವಳೆ, ಸುಜನವೆಡಂಗಿ, ಸಹಜ ಸರಸ್ವತಿ, ವಿಳಾಸ ವಿದ್ಯಾಧರಿ ಎಂಬ ಬಿರುದುಗಳಿದ್ದವು. ಈಕೆಯು ಕಟ್ಟಿಸಿದ ಬಸದಿಗೆ , ಸಾಮ್ಯಕ್ತನಾಗಿದ್ದ ಪನ್ನಿಗಮನು, ಶಕ ೮೯೦ರ ಪ್ರಭವ ಸಂವತ್ಸರ ಪುಷ್ಯಮಾಸದ ಉತ್ತರ ಸಂಕ್ರಾಂತಿಯಂದು, ಅಷ್ಟೋಪವಾಸದ ಭಟಾರರ ಶಿಷ್ಯ ರಾಮಚಂದ್ರ ಭಟ್ಟಾರರಿಗೆ ಮದಲೂರು, ಮಗಳವಾಡಿಯನ್ನು ದಾನ ಮಾಡಿದನು. ಈ ಎರಡೂ ಊರುಗಳಿಗೆ ಸಿದ್ಧಾಯವೆಂದು ೫೦ ಗದ್ಯಾಣವನ್ನು ನೀಡಿದನು. ಅವರು ಆಳುವ ಎಲ್ಲ ಬಾಡಗಳಲ್ಲೂ ಮೇಲಾಳ್ಕೆ ಮತ್ತು ಕಿರುದೆರೆಯನ್ನು

ತೆಗೆದು ಹಾಕಿದನು. ಇದಕ್ಕೆ ಕಾಕಂಬಾವಿ ಕಂಭಯ್ಯ, ಅಸಾಗೂರ ಕನ್ನ, ಪೊಸವೂರ ಬೇದಮ್ಮ, ಕನ್ನರ, ಕಳ್ಳವುಣುಸೆಯ ರಟ್ಟ ಮತ್ತು ಬಿಕ್ಕಿ, ಕೆರೆಯೂರು, ಬಾದಿಯೂರು, ಕೊಡಗನೂರು ಬಾಡಗಳ ಮಹಾಜನರು, ಗೊಗ್ಗಿಯಪುರದ ಬಾಳಚಂದ್ರಭಟಾರರು, ಪರತ್ರಮಠದ ಖೇಹಾರಶಕ್ತಿ, ಬಸದಿಯ ಗುಣಚಂದ್ರ ಕೀರ್ತಿ, ಸಾವಿರ ನಾಡಿನ ೫೮ ಅಗ್ರಹಾರ ಮತ್ತು ಪಂಚಮಠಸ್ಥಾನದವರು ಸಾಕ್ಷಿಯಾಗಿ. ಶ್ರೀಕುಮಾರ ಕೀರ್ತಿದೇವರ ಶಿಷ್ಯ ಸುಚಿಗನು ಈ ಶಾಸನವನ್ನು ಬರೆದನೆಂದು ತಿಳಿದುಬರುತ್ತದೆ. ಈ ಶಾಸನದಲ್ಲಿ ಗದ್ಯಾಣದ ಉಲ್ಲೇಖವಿರುವುದನ್ನು ಕಾಣಬಹುದು.

ಚಿತ್ರದುರ್ಗದ ಭಾಗದಲ್ಲಿ ಕಂಡುಬರುವ ನಾಣ್ಯಗಳು ಮತ್ತು ಅಳತೆ[೨೫]

ಸಾಮಾನ್ಯವಾಗಿ ಚಿತ್ರದುರ್ಗದಲ್ಲಿ ಹಲವಾರು ರಾಜಮನೆತನಗಳ ನಾಣ್ಯಗಳನ್ನು ನೋಡಬಹುದು. ಈ ಪ್ರದೇಶದಲ್ಲಿ ಮೌರ್ಯರು, ಶಾತವಾನರು, ಮಹಾರಥಿಗಳು, ಕದಂಬರು, ನೊಣಂಬರು, ಹೊಯ್ಸಳರು, ವಿಜಯನಗರದ ಅರಸರು, ತದನಂತರ ಚಿಕ್ಕಪುಟ್ಟ ಪಾಳೆಗಾರರು, ಮತ್ತು ಮೈಸೂರಿನ ಒಡೆಯರು, ಬ್ರಿಟಿಷರು, ಇವರಲ್ಲಿ ಕ್ರಿ. ಪೂರ್ವ ೨ನೇ ಶತಮಾನದಿಂದ ಕ್ರಿ.ಶ ೧೯೪೭ರ ವರೆಗೆ ರಾಜ್ಯಭಾರ ಮಾಡಿರುವುದನ್ನು ನಾವು ವಿವಿಧ ದಾಖಲೆಗಳ ಮೂಲಕ ತಿಳಿಯುತ್ತೇವೆ. ಈ ಎಲ್ಲಾ ರಾಜಮನೆತನಗಳು ಸಹ ವಿವಿಧ ಬಗೆಯ ನಾಣ್ಯಗಳನ್ನು ಟಂಕಿಸಿ ಚಿತ್ರದುರ್ಗದ ಪ್ರದೇಶದಲ್ಲಿ ಚಲಾವಣೆಗೆ ಬಿಟ್ಟಿದ್ಧರು. ಇವರ ನಾಣ್ಯಗಳು ಬಂಗಾರ, ಬೆಳ್ಳಿ, ಸೀಸ, ಮತ್ತು ತಾಮ್ರದ ನಾಣ್ಯಗಳನ್ನು ಟಂಕಿಸುತ್ತಿದ್ದರು. ಇವು ಬೇರೆ ಬೇರೆ ರಾಜರ ಕಾಲದಲ್ಲಿ ಒಂದೊಂದು ರೀತಿಯ ನಾಣ್ಯಗಳು ಚಲಾವಣೆಯಲ್ಲಿದ್ದವು. ಕ್ರಿ.ಪೂರ್ವ ೩೦೦ ರಿಂದಲೂ ನಾಣ್ಯಗಳು ಚಲಾವಣೆಯಲ್ಲಿದದ್ದು ಕಂಡುಬರುತ್ತವೆ. ಇವುಗಳ ಬಗ್ಗೆ ಈ ಮುಂದಿನಂತೆ ತಿಳಿಯಬಹುದು. ಪುರಾತತ್ವ ಇಲಾಖೆಯವರು ನೆಡೆಸಿರುವ ಚಂದ್ರವಳ್ಳಿ ಪ್ರದೇಶದ ಉತ್ಖನನದ ಸಹಾಯದಿಂದ ಇದುವರೆಗೆ ನೆಲದಲ್ಲಿ ಸಿಕ್ಕಿರುವ ಶೋಧನದಿಂದ, ಪುರಾತನ ಇತಿಹಾಸವಿರುವ ಮನೆಗಳು ಮತ್ತು ದೇವಸ್ಥಾನಗಳಲ್ಲಿ ದೊರೆತಿರುವ ನಾಣ್ಯಗಳ ಆಧಾರದಿಂದ ಅಕ್ಕಸಾಲಿಗರ ಅಂಗಡಿಗಳಲ್ಲಿ ಸಿಕ್ಕಿರುವ ನಾಣ್ಯಗಳು, ಕೊನೆಯದಾಗಿ ನಾಣ್ಯ ಸಂಗ್ರಹಕಾರರ ಬಳಿ ಇರುವ ನಾಣ್ಯಗಳ ಆಧಾರದ ಮೇಲೆ ಸಿಕ್ಕಿರುವ ನಾಣ್ಯಗಳನ್ನು ಮುಂದಿನಂತೆ ನೋಡಬಹುದು.[೨೬]

ಪುರಾತನ ನಾಣ್ಯಗಳ ವಿವರ

ಬೆಳ್ಳಿಯ ಪಂಚ್ ಮಾರ್ಕ ನಾಣ್ಯ : ತೂಕ ೨.೬ ಗ್ರಾಂ

ಮುಮ್ಮುಖ : ಪಂಚ್ ಮಾಡಿರುವ ಸೂರ್ಯ ಮತ್ತಿತರ ಐದು ಗುರುತುಗಳು

ಓಮ್ಮುಖ : ಪಂಚ್ ಮಾಡಿರುವ ಒಂದು ಗುರುತು,

ಈ ನಾಣ್ಯ ಮೌರ್ಯರ ಕಾಲದ್ದು ಚಂದ್ರವಳ್ಳಿಯಲ್ಲಿ ಪುರಾತತ್ವ ಇಲಾಖೆಯವರು ನೆಡೆಸಿರುವ ಉತ್ಕನನದಲ್ಲಿ ದೊರೆತಿರುವ ಮಾದರಿಯದ್ದು. ಇದರಿಂದ ಮೌರ್ಯರು ಈ ಪ್ರದೇಶದಲ್ಲಿ ಆಡಳಿತ ನೆಡೆಸಿದ್ದರು ಎಂಬುದನ್ನು ಪುಷ್ಠೀಕರಿಸುತ್ತದೆ[೨೬]

ರೋಮನ್ ಬೆಳ್ಳಿ ನಾಣ್ಯ ತೂಕ: ೨.೯ ಗ್ರಾಂ

ಮುಮ್ಮುಖ : ರಾಜನ ಮುಖ ಮತ್ತು ನಾಣ್ಯದ ಅಂಚಿನ ಸುತ್ತಲು ರೋಮನ್ ಲಿಪಿಯಲ್ಲಿ ಟೈಬೀರಿಯಸ್ ಸೀಸರನ ಹೆಸರು.

ಹಿಮ್ಮುಖ : ಇನ್ನರ್ ಮನುಷ್ಯರ ಆಕೃತಿಗಳು, ಡ್ರಂ ಬಾರಿಸುತ್ತಿರುವ ಚಿತ್ರ. ಸುತ್ತಲು ರೋಮನ್ ಭಾಷೆಯಲ್ಲಿ ಟೈಬೀರಿಯಸ್ ಸೀಸರ್‌ನ ಹೆಸರು. ಇದೇ ಮಾದರಿಯ ನಾಣ್ಯ ಚಂದ್ರವಳ್ಳಿಯ ಉತ್ಕನನದಲ್ಲಿ ದೊರೆತಿದ್ದು ರೋಮನ್ ಜನರು ಚಂದ್ರವಳ್ಳಿಗೆ ವ್ಯಾಪಾರಕ್ಕೆ ಬಂದಿದ್ದರು ಎಂಬುದನ್ನು ತಿಳಿಸುತ್ತದೆ. .[೨೭]

ಮಹಾರಥಿ ಮತ್ತು ಚುಟುಕುಲದ ಅರಸರ ಸೀಸದ ನಾಣ್ಯಗಳು

ಮುಮ್ಮುಖ : ೨ ಗುಡ್ಡಗಳಿರುವ ಚಿತ್ರ. ಸುತ್ತಲೂ ಬ್ರಾಹ್ಮೀಲಿಪಿಯಲ್ಲಿ ಚಟುಕುಲಾನಂದ ಎಂಬ ಹೆಸರು ಕಾಣಬಹುದು.

ಹಿಮಮ್ಮುಖ : ಬುಟ್ಟಿಯಾಕಾರದ ಕುಂಡದಲ್ಲಿ ಗಿಡ, ಬ್ರಾಹ್ಮೀಲಿಪಿಯಲ್ಲಿ, 'ಯು' ಅಕ್ಷರ ಕಂಡುಬರುತ್ತದೆ. ಈ ನಾಣ್ಯವು ಉತ್ಕನನದಲ್ಲಿ ಇದೇ ಮಾದರಿಯ ಸೀಸದ ನಾಣ್ಯಗಳು ಆನಂದ ಮಹಾರಥಿಗಳ ಮತ್ತು ಯಜ್ಞ ಶ್ರೀ ಶಾತಕರಣಿಯ ನಾಣ್ಯಗಳು ದೊರೆತ್ತಿದ್ದು (ಪೋಟೋಗಳು ಲಬ್ಯವಿಲ್ಲ) ಈ ಪ್ರದೇಶವನ್ನು ಮಹಾರಥಿಗಳು, ಚುಟುಕುಲದ ಅರಸರು, ಶಾತವಾಹನರು ಆಳ್ವಿಕೆ ಮಾಡಿದ್ದರು ಎಂಬುದಕ್ಕೆ ಮತ್ತು ಸೀಸದ ನಾಣ್ಯಗಳು ಚಲಾವಣೆಯಲ್ಲಿವೆಂಬುದಕ್ಕೆ ಸಾಕ್ಷಿಯಾಗಿವೆ.[೨೮]

ಶಾತವಾಹನರ ಪೂರ್ವದ ಸೀಸದ ನಾಣ್ಯ, ತೂಕ ೧೦.೫ ಗ್ರಾಂ

ಮುಮ್ಮುಖ : ಬಲಗಡೆ ನಿಂತಿರುವ ಕುದುರೆ, ಕುದುರೆಯ ಮುಖದ ಮುಂದೆ ದುಂಡಗಿನ ಆಕಾರದ ವಸ್ತು, ಬೆನ್ನ ಮೇಲೆ ಶ್ರೀವತ್ಯ ಚಿಹ್ನೆ.

ಹಿಮ್ಮುಖ : ೬ ಗುಡ್ಡಗಳಿರುವ ಚಿತದ್ರ ಕೆಳಗೆ ನದಿಯ ಚಿತ್ರವಿದೆ. ಈ ನಾಣ್ಯಗಳು ವೇದಾವತಿ ನದಿಯ ದಂಡೆಯಲ್ಲಿರುವ ತಾಲ್ಲೂಕಿನ ತೊರೆ ಇದು ಓಬೇನ ಹಳ್ಳಿ ಗ್ರಾಮದಲ್ಲಿ ದೊರೆತದ್ದು ಎಂಬುದು ತೀಳಿಯುತ್ತದೆ.[೨೯]

ಹೊಯ್ಸಳರ ಬಂಗಾರದ ನಾಣ್ಯ, ತೂಕ ೪.೨.ಗ್ರಾಂ

ಮುಮ್ಮುಖ : ಬಲಗಡೆಗೆ ಮುಖಮಾಡಿರುವ ಸಿಂಹದ ಚಿತ್ರ. ಸಿಂಹದ ಬೆನ್ನಿನ ಮೇಲೆ ದೇವತೆ ನಿಂತಿರುವ ಚಿತ್ರ.

ಹಿಮ್ಮುಖ: ಹಳಗನ್ನಡದಲ್ಲಿ ಶ್ರೀ ನೊಣಂಬವಾಡಿಗೊಂಡ ಎಂಬ ಬಿರುದಿದೆ. ಆದುದರಿಂದ ಇದು ಹೊಯ್ಸಳರ ವಿಷ್ಣುವರ್ಧನ ಟಂಕಿಸಿದ ನಾಣ್ಯವಾಗಿದೆ. ಇದು ಚಿತ್ರದುರ್ಗ ಜಿಲ್ಲೆಯಲ್ಲಿ ಬಂಗಾರದ ಅಂಗಡಿಯಲ್ಲಿ ದೊರೆತ ನಾಣ್ಯ.[೩೦]

ವಿಜಯನಗರದ ಅರಸರ ಕಾಲದಲ್ಲಿ ಚಿತ್ರದುರ್ಗದಲ್ಲಿ ದೊರೆತ ನಾಣ್ಯಗಳು.

ಒಂದನೆ ಹರಿಹರನ ಬಂಗಾರದ ವರಹ : ತೂಕ ೩.೪ ಗ್ರಾಂ

ಮುಮ್ಮುಖ : ಬಲಕ್ಕೆ ಚಲಿಸುತ್ತಿರುವ ಹನುಮಂತ.

ಹಿಮ್ಮುಖ : ಕನ್ನಡದಲ್ಲಿ ಶ್ರೀ ವೀರ ಹರಿಹರ, ಎಂದಿದೆ.

ಎರಡನೇ ಹರಿಹರನ ಬಂಗಾರದ ವರಹ. ತೂಕ ೩.೪ ಗ್ರಾಂ

ಮುಮ್ಮುಖ: ಕುಳಿತಿರುವ ಉಮಾ ಮಹೇಶ್ವರ ಚಿತ್ರ

ಹಿಮ್ಮುಖ : ನಗಾರೀ ಅಕ್ಷರಗಳು 'ಶ್ರೀ ಪ್ರತಾಪ ಹರಿಹರ' ಎಂದಿದೆ.[೩೧]

ಚಿತ್ರದುರ್ಗದ ಮದಕರಿ ವಂಶದ ಬಂಗಾರದ ದುರ್ಗಿವರಹ ; ತೂಕ ೩.೪ ಗ್ರಾಂ

ಮುಮ್ಮುಖ: ಕುಳಿತಿರುವ ದುರ್ಗಿ ದೇವತೆಯ ಚಿತ್ರ.

ಹಿಮ್ಮುಖ : ನಾಗರೀ ಅಕ್ಷರಗಳಲ್ಲಿ 'ಶ್ರೀ ಪ್ರತಾಪ ಕೃಷ್ಣರಾಯ'

ಚಿತ್ರದುರ್ಗದ ಕಾಮಗೇತಿ ಪಾಳೆಗಾರರು ವಿಜಯನಗರದ ಆಳರಸರ ಮಾದರಿಯ 'ದುರ್ಗಿ ವರಹ" ಟಂಕಿಸುತ್ತಿದ್ದರು. ಈ ನಾಣ್ಯ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕಾಣಿಸುತ್ತದೆ. ಅವರು ತಮ್ಮ ಸ್ವಂತ ಹೆಸರಿನಲ್ಲಿ ಟಂಕಿಸಿರಬಹುದಾದ ನಾಣ್ಯಗಳು ಇದುವರೆಗೂ ಸಿಕ್ಕಿಲ್ಲ.[೩೨] ಇನ್ನು ಹಲವಾರು ರಾಜಮನೆತನಗಳ ನಾಣ್ಯಗಳನ್ನು ಚಿತ್ರದುರ್ಗದ ಭಾಗಗಳಲ್ಲಿ ನಾವು ನೋಡಬಹುದಾಗಿದೆ. ಅಧ್ಯಯನದ ದೃಷ್ಟಿಯಿಂದ ಕೆಲವು ನಾಣ್ಯಗಳನ್ನು ಇಲ್ಲಿ ತಿಳಿಸಲಾಗಿದೆ.

ಅಡಿಟಿಪ್ಪಣಿ

೧. ಗೋಪಾಲ್. ಡಾ. ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೨೫೯

೨. ಅದೇ ಪುಟ ೨೫೯

೩. ನಾಗರಾಜು. ಡಾ.ಡಿ.ಎಂ. ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ ೮೪

೪. ಅದೇ ಪುಟ ೮೪

೫. ಅದೇ ಪುಟ ೮೪

೬. ಅದೇ ಪುಟ ೮೪

೭. ಗೋಪಾಲ್ ಡಾ. ಆರ್.. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೧೦೯

೮. ಅದೇ ಪುಟ ೧೧೦

೯. ಎ.ಕ. ರೈಸ್. ಸಂಪುಟ ೧೧.ಚಳ್ಳ. ೩೩. ಪುಟ ೨೭೬

೧೦.ಅದೇ, ಚಿತ್ರ, ೮೨

೧೧. ಅದೇ, ಚಿತ್ರ, .೩೨

೧೨. ಅದೇ ಚಿತ್ರ, ೩೬.

೧೩.ಅದೇ. ಹೊಳ, ೪೭,

೧೪. ಅದೇ ಚಿತ್ರ. ೪೮

೧೫. ಅದೇ. ಹೊಳ, ೩೪

೧೬. ಅದೇ. ಚಿತ್ರ, ೫೦

೧೭. ಅದೇ, ಹೊಳ. ೫೪

೧೮ ಅದೇ, ಚಿತ್ರ, ೧೯.

೧೯. ಅದೇ. ಚಳ್ಳ, ೯.

೨೦. ಅದೇ, ಚಳ್ಳ., ೪೩

೨೧. ಅದೇ, ಮೊಳ. ೩೧

೨೨. ಅದೇ. ಮೊಳ, ೪೭

೨೩. ಅದೇ, ಹೊಳ, ೧೨೩

೨೪ಅದೇ, ಹೊಳ. ೩೩

೨೫. ಗೋಪಾಲ್ ಡಾ. ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ.೨೬೭

೨೬. ಅದೇ ಪುಟ ೨೬೮

೨೭. ಅದೇ ಪುಟ ೨೬೮

೨೮. ಅದೇ ಪುಟ ೨೬೮

೨೯. ಅದೇ ಪುಟ ೨೬೮

೩೦. ಅದೇ ಪುಟ ೨೬೯

೩೧. ಅದೇ ಪುಟ ೨೭೦

೩೨. ಅದೇ ಪುಟ ೨೭೧

ಅಧ್ಯಾಯ ೫

ಸಮಾರೋಪ

ಅಧ್ಯಾಯ ೫

ಸಮಾರೋಪ

ಈವರೆಗೂ 'ಚಿತ್ರದುರ್ಗದ ಶಾಸನಗಳಲ್ಲಿ ತೆರಿಗೆ ಮತ್ತು ಅಳತೆ ಮಾಪಕಗಳು' ಎಂಬ ಶಿರ್ಷಿಕೆಯಡಿಯಲ್ಲಿ ಈ ಅಧ್ಯಯನವನ್ನು ಪ್ರಾಚೀನ ಜನಸಾಮಾನ್ಯರ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಭೌಗೋಳಿಕ ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆಯ ಒಟ್ಟು ನೋಟವನ್ನು ಈ ಕೆಳಗಿನಂತೆ ಪ್ರಸ್ತುತ ಪಡಿಸಲಾಗಿದೆ.

ಮೊದಲ ಅಧ್ಯಾಯನದಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿಯೊಂದಿಗೆ, ಶಾಸನಗಳನ್ನು ಕುರಿತು ಈವರೆಗೆ ನೆಡೆದಿರುವ ಅಧ್ಯಯನಗಳನ್ನು ಹೇಳಿ ನಮ್ಮ ಅಧ್ಯಯನದ ಇತಿಮಿತಿಗಳನ್ನು ಹೇಳಲಾಗಿದೆ.

ಎರಡನೆ ಅಧ್ಯಾಯದಲ್ಲಿ ಚಿತ್ರದುರ್ಗದ ಭೌಗೋಳಿಕ ಹಿನ್ನೆಲೆಯನ್ನು ಹೇಳುತ್ತಾ. ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದಂತೆ ಪರಿಚಯವನ್ನು ತಿಳಿಸಲಾಗಿದೆ. ಹಾಗೂ ಚಿತ್ರದುರ್ಗವು ಯಾವ ಯಾವ ರಾಜಮನೆತನಗಳಿಗೆ ಒಳಪಟ್ಟಿತ್ತು ಅವರ ಹಿನ್ನೆಲೆ, ಆರ್ಥಿಕ ಸ್ಥಿತಿಗತಿ, ಮುಂತಾದ ವಿಷಯಗಳನ್ನು ಒಳಗೊಂಡಿದೆ.

ಮೂರನೆಯ ಅಧ್ಯಾಯದಲ್ಲಿ ತೆರಿಗೆ ಪದ್ಧತಿಯ ಮೂಲ, ತೆರಿಗೆ ಪದ್ಧತಿಯ ಪರಿಚಯ, ಮತ್ತು ವಿವಿಧ ರೀತಿಯ ತೆರಿಗೆಗಳು, ಹಾಗೂ ಚಿತ್ರದುರ್ಗ ಶಾಸನಗಳಲ್ಲಿಯ ತೆರಿಗೆ ಪದ್ಧತಿ ಬಗ್ಗೆ ತಿಳಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಅಳತೆಮಾಪಕ, ಪ್ರಾಚೀನರು ಅನುಸರಿಸುತ್ತಿದ್ದಂತಹ ತೂಕದ ಚಿತ್ರದುರ್ಗದ ಭಾಗದ ಶಾಸನಗಳಲ್ಲಿ ಸಿಗುವಂತಹ ಅಳತೆ ಮಾಪನದ ಬಗ್ಗೆ ತಿಳಿಸಲಾಗಿದೆ.

ಚಿತ್ರದುರ್ಗವನ್ನು ರಾಜಕೀಯವಾಗಿ ನೋಡುವುದಾದರೆ ಈ ನಾಡನ್ನು ಹಲವಾರು ರಾಜಮನೆತನಗಳು ಆಳ್ವಿಕೆ ಮಾಡಿ ಅವನತಿಯನ್ನು ಹೊಂದಿವೆ. ಒಂದೊಂದು ರಾಜಮನೆತನಗಳು ಸಹ ಒಂದೊಂದು ಕುರುಹುಗಳನ್ನು ಬಿಟ್ಟು ಹೋಗಿವೆ. ಅವುಗಳನ್ನು ಶಾಸನಗಳಿಂದ ತಿಳಿಯಬಹುದು. ಇಲ್ಲಿ ಈ ಅಧ್ಯಯನಕ್ಕೆ ಈಗಾಗಲೆ ಇತಿಹಾಸದಲ್ಲಿ ಸಿಗುವ ಅಂಶಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಚಿತ್ರದುರ್ಗದಲ್ಲಿ ದೊರೆತಿರುವಂತಹ ಶಾಸನಗಳು ಒಟ್ಟು ೪೫೩, ಇವುಗಳಲ್ಲಿ ೧೩೫ ಶಾಸನಗಳಲ್ಲಿ ಕಾಲಮಾನಗಳೆ ಸೂಚಿತವಾಗಿಲ್ಲ. ಇದರಲ್ಲಿ ೭೩ ಶಾಸನಗಳು ಸುಂಕದ ಉಲ್ಲೇಖವಿರುವಂತಹ ಶಾಸನಗಳು, ಹಾಗೂ ೧೮ ಶಾಸನಗಳು ಅಳತೆಮಾಪಕಕ್ಕೆ ಸಂಬಂಧಿಸಿದ ಶಾಸನಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಶಾಸನಗಳನ್ನು ಅಧ್ಯಯನ ಮಾಡಿದ ನಂತರ

ನಮಗೆ ತಿಳಿದು ಬರುವಂತಹ ವಿಚಾರವೆಂದರೆ, ಪ್ರಾಚೀನ ಚಿತ್ರದುರ್ಗದ ಭಾಗದಲ್ಲಿ ಜನಸಾಮಾನ್ಯರು ರಾಜ್ಯಕ್ಕೆ ಯಾವ ತೆರನಾದ ತೆರಿಗೆಗಳನ್ನು ನೀಡುತ್ತಿದ್ದರು ಎಂಬುದನ್ನು ತಿಳಿಸಲಾಗಿದೆ. ಜನಸಾಮಾನ್ಯರು ಕೊಡುತ್ತಿದ್ದ ಭೂಮಿಯ ತೆರಿಗೆ, ಕುರಿ ತೆರಿಗೆ. ವ್ಯಾಪಾರಿ ಸುಂಕ, ಮದುವೆ ಸುಂಕ, ಕ್ಷೌರಿಕ ಸುಂಕ, ಪಿಂಜಣಿಗರ ಸುಂಕ, ಮುಂತಾದ ರೀತಿಯ ತೆರಿಗೆಗಳು ತಿಳಿಸಲಾಗಿದೆ ಹಾಗೂ ಅಳತೆಗೆ ಸಂಬಂಧಿಸಿದಂತೆ ಕೊಳಗ, ಖಂಡುಗ, ಬಳ್ಳ, ಸೇರು, ಗದ್ಯಾಣ, ಪಣ, ಅದ್ದ, ಸೊಲ್ಲಗೆ, ಇತ್ಯಾದಿ. ಈ ಎಲ್ಲಾ ವಿಷಯಗಳು ಇತ್ತೀಚಿನ ಜನಸಾಮಾನ್ಯರಿಗೆ ತಿಳಿಸುವ ದೃಷ್ಟಿಯಿಂದ ಅಧ್ಯಯನವು ಪೂರಕವಾದ ಮಾಯಿತಿಯನ್ನು ವದಗಿಸುತ್ತದೆ ಎಂಬುದು ಪ್ರಬಂಧದ ಮುಖ್ಯ ಉದ್ದೇಶ.

ಶಾಸನಗಳು ನಮಗೆ ಗೊತ್ತಿಲ್ಲದ ಎಷ್ಟೋ ವಿಷಯಗಳನ್ನ ತಿಳಿಸಲು ಆಕಾರಗಳಾಗಿವೆ. ಹಾಗೂ ಎಷ್ಟೋ ಶಾಸನಗಳು ಮಣ್ಣಲ್ಲಿ ಉದುಗಿ ಹೊಗಿವೆ, ಅವುಗಳನ್ನು ಉತ್ಖನನ ಮಾಡುವ ಮೂಲಕ ಮೆಲೆತ್ತುವ ಕೆಲಸಗಳು ಆಗಬೇಕಿದೆ ಮತ್ತು ಅವುಗಳನ್ನು ಅಧ್ಯಯನ ಮಾಡುವುದರ ಮೂಲಕ ಅದರಲ್ಲಿಯ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಸಬೇಕಿದೆ.

ಅಧ್ಯಯನದ ಫಲಿತಗಳು

ಶಾಸನಗಳನ್ನು ಅಧ್ಯಯನ ಮಾಡಿದ್ದರಿಂದ ನಮಗೆ ತಿಳಿದುಬರುವ ವಿಷಯವೆಂದರೆ ಚಿತ್ರದುರ್ಗ ಭಾಗದಲ್ಲಿ ಅಂದಿನ ದಿನಮಾನದಲ್ಲಿ ಕೆಲವು ಕಡೆ ನೀರಾವರಿ ಇನ್ನು ಕೆಲವು ಕಡೆ ಮಳೆಯಾದಾರಿತವಾದ ಬೆಳೆ ವಿಧಾನವಿದ್ದದ್ದು ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ಹರಿಯುತ್ತಿದ್ದ ವೇದಾವತಿ, ಸುವರ್ಣಮುಖಿ, ದೊಡ್ಡ ಹಳ್ಳಕೊಳ್ಳಗಳಿಗೆ ಇತ್ತೀಚೆಗಷ್ಟೇ ಅಣೆಕಟ್ಟು ಕಟ್ಟಿಸಿ ನೀರಾವರಿಗೆ ಅನುಕೂಲ ಕಲ್ಪಿಸಲಾಗಿದೆ. ಉಳಿದ ಕಡೆ ಯಾವುದೆ ನದಿಗಳ ಕಾಲುವೆಗಳು ಕಂಡುಬರುವುದಿಲ್ಲ. ಆದ್ದರಿಂದ ಈ ಪ್ರದೇಶ ಬರಪೀಡಿತ ವಾಗಿದ್ದಿರಬೇಕು. ಕ್ರಿ.ಶ. ೧೧೪೨ರ ನೀರಗುಂದದ ಶಾಸನ ಜನಸಾಮಾನ್ಯರು ಕೆರೆ ನೀರನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ನೀರಾವರಿ ಇಲ್ಲದ ಭಾಗದವರು ನೀರಾವರಿ ಹೊಂದಿದವರ ಸಹಾಯವನ್ನು ಪಡೆದು ಬೇಸಾಯವನ್ನು ಮಾಡುತ್ತಿದ್ದರು ಎಂಬುದು ತಿಳಿಯುತ್ತದೆ. ಇಲ್ಲಿ ಚಿತ್ರದುರ್ಗವನ್ನು ಆಳ್ವಿಕೆ ಮಾಡಿದ ವಿವಿಧ ರಾಜರು ತಮ್ಮ ಪಾಳೆಯ ಬಿಟ್ಟ ಊರುಗಳಲ್ಲಿ ಹಲವಾರು ಕೆರೆ ನಿರ್ಮಾಣ ಮಾಡಿರುವಂತಹ ನಿದರ್ಶನಗಳು ಶಾಸನಗಳಿಂದ ತಿಳಿಯುತ್ತವೆ.

ಚಿತ್ರದುರ್ಗ ನಾಯಕ ಅರಸರ ಕಾಲದಲ್ಲಿ ಗ್ರಾಮವು ಅತ್ಯಂತ ಚಿಕ್ಕ ಆಡಳಿತ ಘಟಕವಾಗಿತ್ತು. ಪ್ರತಿಯೊಂದು ಗ್ರಾಮಗಳ ಆಡಳಿತವನ್ನು ಪಾರುಪತ್ತೆಗಾರ, ನಾಡಗೌಡ, ನಾಯಕ, ದಳವಾಯಿ, ಗೌಡ ಮತ್ತು ಶಾನುಭೋಗರು ನೋಡಿಕೊಳ್ಳುತ್ತಿದ್ದರು. ಇದರಿಂದ ಗ್ರಾಮದ ಒಟ್ಟು ಕಂದಾಯ ವಸೂಲಿಯನ್ನು ಒಬ್ಬ ಗೌಡನಿಗೆ ವಹಿಸಿಕೊಡುವ ವಿಧಾನವು ಕಂಡುಬರುತ್ತದೆ. ಚಿತ್ರದುರ್ಗ ನಾಯಕರು ಸುಗ್ಗಿಯಲ್ಲಿ

ಕಾಳನ್ನು ಸುಂಕದ ರೂಪದಲ್ಲಿ ನೀಡುತ್ತಿದದ್ದ ಸಹ ತಿಳಿಯುತ್ತದೆ. ಕಂದಾಯ ವಸೂಲಿಯಲ್ಲಿ ನೇಗಿಲು ವಿಧಾನವನ್ನು ಸಹ ಬಳಸುತ್ತಿದ್ದರು, ಈ ಪದ್ಧತಿಯಲ್ಲಿ ಭೂ ಕಂದಾಯವನ್ನು ಭೂಮಿಯನ್ನು ಊಳಲು ಅಗತ್ಯವಾದ ನೇಗಿಲುಗಳ ಸಂಖ್ಯೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು ಈ ಎಲ್ಲಾ ವಿಚಾರಗಳನ್ನು ಅಧ್ಯಯನದ ಮೂಲಕ ತಿಳಿಸಲಾಗಿದೆ.

ಒಟ್ಟಾರೆಯಾಗಿ ಚಿತ್ರದುರ್ಗ ಭಾಗದಲ್ಲಿ ಕೆಲವು ಶಾಸನಗಳಲ್ಲಿ ಮಾತ್ರವೆ ತೆರಿಗೆ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಅಲ್ಲದೆ ಅಳತೆ ಮತ್ತು ತೂಕಗಳ ಬಗ್ಗೆಯು ಕೆಲವು ಶಾಸನಗಳಲ್ಲಿ ಕಂಡುಬರುತ್ತವೆ. ಇಲ್ಲಿ ಅತಿ ಹೆಚ್ಚಾಗಿ ಕಂಡುಬರುವುದು ಮದುವೆ ಸುಂಕ ಮತ್ತು ದೇವರ ನೈವೇದ್ಯಕ್ಕೆ ದಾನ ನಿಗದಿಯಾಗಿರುವಂತಹದ್ದನ್ನು ಕಾಣಬಹುದು. ಇನ್ನುಳಿದ ಶಾಸನಗಳಲ್ಲಿ ದಾನವನ್ನು ನೀಡಿದ್ದರ ಬಗ್ಗೆ ದೇವಾಲಯಗಳನ್ನು ಕಟ್ಟಿಸಿದ್ದರ ವಿಚಾರ, ಕೆರೆ ನಿರ್ಮಾಣದ ವಿಚಾರ, ಅಂಗಭೋಗದ ವಿಚಾರ, ಭೂಮಿಯನ್ನು ದೇವರ ಹೆಸರಿನಲ್ಲಿ ದಾನ ಬಿಟ್ಟಿರುವಂತಹ ವಿಚಾರ ಮುಂತಾದ ವಿಷಯಗಳು ಕಂಡುಬರುತ್ತವೆ.

ಅನುಬಂಧ

ಚಿತ್ರದುರ್ಗ ಜಿಲ್ಲೆಯ ನಕಾಶೆ



ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ (ತಾ) ಶಾಸನ ಮತ್ತು ದೇವಾಲಯಗಳ ಛಾಯಾಚಿತ್ರಗಳು



ರಾಮಗಿರಿ ಬೆಟ್ಟದ ಮೇಲೆ ಇರುವ ಶಾಸನ,
ಅಮೃತ ಪಡಿಗೆ ಸುಂಕ ಪಡೆದಿರುವ ಉಲ್ಲೇಖ(ಹೊ.ತಾ)



ನಿರ್ಗುಂದ ಶಾಸನ ದೇವರ ನೈವೇದ್ಯಕೆ ಸುಂಕವನ್ನು
ಪಡೆದ ವಿಚಾರ ತಿಳಿಯುತ್ತದೆ ಹೊಸದುರ್ಗ (ತಾ)



ರಾಮಗಿರಿ ಕರಿಯಮ್ಮನ ನೈವೇದ್ಯಕ್ಕೆ
ನೀಡಿದ ಸುಂಕದ ಉಲ್ಲೇಖ
ದೇವಸ್ಥಾನದ ಮುಂದಿರುವ ಶಾಸನ (ಹೊಳ)



ಬಾಗೂರು ಚನ್ನಕೇಶವ
ದೇವಸ್ಥಾನದ ಮುಂದಿರುವ ಶಾಸನ
ಮದುವೆ ಸುಂಕ ಬಿಟ್ಟ ಉಲ್ಲೇಕವಿದೆ ಹೊಸ (ತಾ)



ಬಾಗೂರಿನ ಚನ್ನಕೇಶವ ದೇವಸ್ಥಾನ ಮದುವೆ ಸುಂಕ ವುಳ್ಳ ಶಾಸನವಿರು ದೇವಾಲಯ





ಈಶ್ವರ ದೇವಾಲಯ ದುಮ್ಮಿ , ಈ ದೇವಾಲಯದ ಪಕ್ಕದಲಲ್ಲಿರುವ ಶಾಸನ ಮದುವೆ ಸುಂಕದ ಉಲ್ಲೇಖವಿರುವುದನ್ನು ತಿಳಿಸುತ್ತದೆ



ಬೆಟ್ಟದ ಮೇಲಿರುವ ಕರಿಸಿಸಿದ್ದೇಶ್ವರ ದೇವಾಲಯ ರಾಮಗಿರಿ, ಅಮೃತ ಪಡಿಗೆ ಸುಂಕ ಪಡೆದ ಉಲ್ಲೇಖ (ಹೊ.ತಾ)

ಶಾಸನ ಸಂಪುಟಗಳು

೧. Epigraphia carnatica XI

೨. Indian Inscription IX part I,II

೩. South Indian Inscription V- XV, XVII, XX

೪. Karnataka Iiscription_-Vol. VI

೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧,

ಆಕಾರ ಗ್ರಂಥಗಳು

೧. ಕಲಬುರ್ಗಿ ಎಂ.ಎಂ. ಸಮಾಧಿ–ಬಲಿದಾನ–ವೀರಮರಣಸ್ಮಾರಕಗಳು, ಐಬಿಎಚ್. ಪ್ರಕಾಶನ,ಬೆಂಗಳೂರು, ೧೯೮೦

೨. ಕಲಬುರ್ಗಿ ಎಂ.ಎಂ.ಕನ್ನಡ ಶಾಸನ ಸಾಹಿತ್ಯ ಚೇತನ ಬುಕ್ ಹೌಸ್, ಮೈಸೂರು, ೨೦೧೧

೩. ಗೋಪಾಲ್. ಆರ್. ಡಾ. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಹೊಸಪೇಟೆ.೨೦೦೫

೪. ಗೋಪಾಲ್ ಆರ್. ಡಾ. ಬಿ. ಎಂ. ಚಿಕ್ಕಮಾರೇಗೌಡ. ಟಿ.ಎಸ್.ಗಂಗಾಧರ. ವಿಜಯನಗರ ಅಧ್ಯಯನ. ಕರ್ನಾಟಕ ಸರ್ಕಾರ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ. ಮೈಸೂರು.೨೦೦೫

೫. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ(ಚಿದಾನಂದ ಸಮಗ್ರ ಸಂಪುಟ ಸ್ವಪ್ನ ಬುಕ್‌ಹೌಸ್, ಬೆಂಗಳೂರು,೨೦೧೧

೬. ನಾಗರಾಜ ಆರ್. ಬಾಗೂರು, ಹೊಸದುರ್ಗ ಸುತ್ತ, ಅಭಿವ್ಯಕ್ತ ವೇದಿಕೆ, ಹೊದುರ್ಗ, ಚಿತ್ರದುರ್ಗ ಜಿಲ್ಲೆ, ೧೯೮೪

೭. ನಾಗರಾಜು ಡಿ.ಎಂ. "ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಗೌತಮ ಪ್ರಕಾಶನ ಮೈಸೂರು ೨೦೧೨

೮. ಸೇಗಿಹಾಳ ಎಂ.ಬಿ. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ. ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ,೧೯೯೪

೯. ರಾಜಶೇಖರಪ್ಪ ಜಿ,ಇತಿಹಾಸ ಕಥನ, ಚಿ.ವಿ.ಜಿ.ಪಬ್ಲಿಕೇಶನ್ಸ್, ಬೆಂಗಳೂರು,೨೦೧೦

೧೦. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆಗಳು: ಒಂದು ಶತಮಾನ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೪

೧೧. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು ರಾಜಕೀಯ ಚಿತ್ರ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೯.

೧೨. ಶಿವರುದ್ರಸ್ವಾಮಿ ಎಸ್. ಎನ್. ಡಾ ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ. ಪೌರಸ್ತ್ಯ ಪ್ರಕಾಶನ, ತಿಪಟೂರು:: ಮೈಸೂರು

ನಿಘಂಟುಗಳು

೧. ಕನ್ನಡ– ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್.

ಶಾಸನಶಾಸ್ತ್ರ ವಿಭಾಗ